# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಫೆಬ್ರವರಿ 18 ಶನಿವಾರ 2023 | ₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 301 | ಪುಟಗಳು: 12 + IV
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

# ರಾಜ್ಯ ಬಜೆಟ್‌ಗೆ ಗಣ್ಯರ ಪ್ರತಿಕ್ರಿಯೆ

ಮೈಸೂರು, ಫೆ.17(ಆರ್‌ಕೆ, ಎಸ್‌ಬಿಡಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ 2023–24ನೇ ಸಾಲಿನ ಬಜೆಟ್‌ಗೆ ಮೈಸೂರಿನ ವಿವಿಧ ಕ್ಷೇತ್ರದ ಪ್ರಮುಖರು ಮಿಶ್ರ ಪ್ರತಿಕ್ರಿಯೆ ನೀಡಿದ್ದಾರೆ.



ಮೈಸೂರು, ಶಿವಮೊಗ್ಗ ಮತ್ತು ಕಲಬುರ್ಗಿಯಲ್ಲಿ ಒಟ್ಟು 202 ಕೋಟಿ ರೂ. ವೆಚ್ಚದಲ್ಲಿ ಕಿದ್ವಾಯಿ ಸಂಸ್ಥೆಯ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆ, ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಸೇರಿ 4 ಸಂಸ್ಥೆಗಳಲ್ಲಿ ಐವಿಎಫ್ ಕ್ಲಿನಿಕ್, ಮೈಸೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾವೇರಿ ಕೋಲಾರ ಮತ್ತು ರಾಮನಗರದಲ್ಲಿ ಟೌನ್‌ಶಿಪ್ ಘೋಷಣೆ, ಮೈಸೂರು ವಿಮಾನ ನಿಲ್ದಾಣವನ್ನು ಉನ್ನತೀಕರಿಸಲು ಅಗತ್ಯ ಭೂಸ್ವಾಧೀನಕ್ಕಾಗಿ 320 ಕೋಟಿ ರೂ. ಹಂಚಿಕೆ, ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗಾಗಿ ಕ್ರಮ, ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಬಳಿ ಎಂಟೂವರೆ ಎಕರೆ ಜಾಗದಲ್ಲಿ ಅಂತಾರಾಷ್ಟ್ರೀಯ ಮಟ್ಟದ ರಾಜ್ಯ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ ನಿರ್ಮಾಣಕ್ಕೆ 10 ಕೋಟಿ ರೂ., ಕಾಡಾನೆ ಹಾವಳಿ ತಡೆಗಟ್ಟಲು ವಿಶೇಷ ಕಾರ್ಯಪಡೆ ರಚನೆ, ಹೀಗೆ ಹತ್ತಾರು ಯೋಜನೆಗಳುಳ್ಳ ಈ ಬಾರಿಯ ಬಜೆಟ್ ಸ್ವಾಗತಾರ್ಹವಾಗಿದೆ.

–ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ



ಮುಖ್ಯಮಂತ್ರಿಗಳು ಮಂಡಿಸಿರುವುದು ವಿಧಾನಸಭಾ ಚುನಾವಣೆ ದೃಷ್ಟಿಕೋನದ ಬಜೆಟ್ ಆಗಿದ್ದು, ಸಾಮಾನ್ಯರು, ಮಹಿಳೆಯರು, ರೈತರು, ಕಾರ್ಮಿಕರಿಗೆ ಇದರಿಂದ ಯಾವುದೇ ಪ್ರಯೋಜನವಿಲ್ಲ. ಸಂಪನ್ಮೂಲ ಕ್ರೋಢೀಕರಣಕ್ಕೆ ವಾಣಿಜ್ಯೋದ್ಯಮ ಅಭಿವೃದ್ಧಿಗೆ ರೈತರ ಆದಾಯ ವೃದ್ಧಿಗೆ ಬಜೆಟ್ ಪೂರಕವಾಗಿಲ್ಲ.

–ಡಾ.ಬಿ.ಶಿವಣ್ಣ, ರಾಜ್ಯಾಧ್ಯಕ್ಷ
ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ)



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ 2023 – 24ನೇ ಸಾಲಿನ ಬಜೆಟ್ ಕಪ್ಪು ಬಿಳುಪು ಚಿತ್ರಕ್ಕೆ ಬಣ್ಣ ಬಳಿದು ಚಂದಗಾಣಿಸುವ ವಿಫಲ ಪ್ರಯತ್ನವಾಗಿದೆ. ಇದರಲ್ಲಿ ಜನರಿಗೆ ಮೋಸವಲ್ಲದೆ ಬೇರೆನಿಲ್ಲ. ಚುನಾವಣೆ ನೆಪದಲ್ಲಾದರೂ ಒಂದಷ್ಟು ಉಪಯುಕ್ತ ಯೋಜನೆಗಳು, ಬಡವರ ಪರ, ರೈತ ಪರ ನೀತಿ, ಯೋಜನೆಗಳು ಘೋಷಣೆಯಾಗಬಹುದು ಎಂಬ ಜನರ ನಿರೀಕ್ಷೆ ಹುಸಿಯಾಗಿದೆ. ಕೃಷಿ, ಆರೋಗ್ಯ, ಲೋಕೋಪಯೋಗಿ, ಇಂಧನ, ನಗಾರಾಭಿವೃದ್ಧಿ ಸೇರಿದಂತೆ ಪ್ರಮುಖ ಕ್ಷೇತ್ರಗಳಿಗೆ ಕಳೆದ ಬಾರಿಗಿಂತ ಕಡಿಮೆ ಅನುದಾನ ಹಂಚಿಕೆ ಮಾಡಲಾಗಿದೆ. ಇದು ಸಂಪೂರ್ಣ ಕಣ್ಕಟ್ಟಿನ ಬಜೆಟ್. ಜನರ ದಿಕ್ಕು ತಪ್ಪಿಸುವ ಬಿಜೆಪಿಯವರ ತಂತ್ರ ನಿರುದ್ಯೋಗ ಸಮಸ್ಯೆ ಬಗ್ಗೆ ಯಾವುದೇ ಪ್ರಸ್ತಾಪ ಅಥವಾ ಯೋಜನೆಗಳಿಲ್ಲ. ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಿದ 339 ಯೋಜನೆಗಳ ಪೈಕಿ 132 ಯೋಜನೆಗಳ ಅನುಷ್ಠಾನವೇ ಆಗಿಲ್ಲ. ಇನ್ನು ಚುನಾವಣೆ ಹೊಸ್ತಿಲಿನ ಈ ಬಜೆಟ್ ಸ್ಥಿತಿ ಏನಾಗಬಹುದು. ಕೆಲವು ಯೋಜನೆಗಳ ಟೆಂಡರ್ ಕರೆದು ಅದರಲ್ಲಿ ಕಮಿಷನ್ ಹೊಡೆಯಬಹುದಷ್ಟೇ. ಒಟ್ಟಾರೆ ಇದೊಂದು ಬೋಗಸ್. ಜನರನ್ನು ಯಾಮಾರಿಸಿ ಮತ ಪಡೆಯುವ ವಿಫಲಯತ್ನ.

–ಅಬ್ದುಲ್ ಮಜೀದ್, ರಾಜ್ಯಾಧ್ಯಕ್ಷ, ಎಸ್‌ಡಿಪಿಐ

## ಮೈಸೂರು ಜಿಲ್ಲೆ ಸಮಗ್ರ ಅಭಿವೃದ್ಧಿಗೆ ಒತ್ತು



ರಾಜ್ಯ ಸರ್ಕಾರದ 2023–24ನೇ ಆಯವ್ಯಯದಲ್ಲಿ ಮೈಸೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ವಹಿಸುವುದರ ಜೊತೆಗೆ 10 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ರಾಜ್ಯ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ ನಿರ್ಮಿಸಲು ದಾಗಿ ಘೋಷಿಸಲಾಗಿದೆ. ಕ್ಯಾನ್ಸರ್ ಚಿಕಿತ್ಸಾ ಕೇಂದ್ರ, ಟೌನ್‌ಶಿಪ್ ನಿರ್ಮಾಣಕ್ಕೆ ಒತ್ತು. ವಿಮಾನ ನಿಲ್ದಾಣದ ಉನ್ನತೀಕರಿಸುವ ಯೋಜನೆಗೆ 320 ಕೋಟಿ ರೂ. ಹಂಚಿಕೆ, ಕಾಡಾನೆ ಹಾವಳಿ, ಚಿರತೆ ದಾಳಿ ತಡೆಗೆ ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೆ ಅನುಮೋದನೆ ನೀಡಲಾಗಿದೆ. ಒಟ್ಟಾರೆ ಮೈಸೂರು ಜಿಲ್ಲೆಗೆ ಈ ಬಾರಿಯ ಬಜೆಟ್‌ನಲ್ಲಿ ಹಲವು ಕೊಡುಗೆಗಳನ್ನು ನೀಡಿರುವುದು ಸಂತಸದ ವಿಚಾರ.

–ಎಸ್.ಟಿ.ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

## ಮೈಸೂರಿನ ಅಭಿವೃದ್ಧಿಗೆ ಅನುದಾನ ಒದಗಿಸಿಲ್ಲ




ಬಸವರಾಜ ಬೊಮ್ಮಾಯಿ ಅವರು ಉತ್ತಮ ಬಜೆಟ್ ಮಂಡಿಸಲು ಸಾಕಷ್ಟು ಸರ್ಕಸ್ ಮಾಡಿದ್ದಾರೆ. ಆದರೆ, ಮೈಸೂರು ನಗರ ಹೊರವಲಯದ ಬಡಾವಣೆಗಳು, ಗ್ರಾಮಗಳ ಅಭಿವೃದ್ಧಿಗೆ ಪ್ರತಿ ವರ್ಷದಂತೆ ಈ ವರ್ಷವೂ ಅನುದಾನ ನೀಡಬೇಕಿತ್ತು. ಆದರೆ ಒದಗಿಸಿಲ್ಲ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಇದ್ದಾಗ 150 ಕೋಟಿ ರೂ. ನೀಡಿದ್ದರು. ಆದರೆ, ಈ ಬಜೆಟ್‌ನಲ್ಲಿ ಯಾವುದೇ ಅನುದಾನ ಒದಗಿಸಿಲ್ಲ. ಇದರಿಂದ ಮೈಸೂರಿನ ಅಭಿವೃದ್ಧಿಗೆ ಬಿಜೆಪಿ ಕೊಡುಗೆ ಶೂನ್ಯ.

–ಜಿ.ಟಿ.ದೇವೇಗೌಡ, ಶಾಸಕರು.



ಕೈಗಾರಿಕೆಗಳನ್ನು ನಿರ್ಲಕ್ಷಿಸಿರುವ ಮತ ಬ್ಯಾಂಕಿಗಾಗಿ ಮಂಡಿಸಿದ ಪ್ರಾಕಾಶಿಕ ಬಜೆಟ್ ಆಗಿದೆ. ಮೈಸೂರು ಕೈಗಾರಿಕೆಗಳ ಅಭಿವೃದ್ಧಿಗೆ ಯಾವುದೇ ಯೋಜನೆಗಳನ್ನು, ರಫ್ತು ಕೇಂದ್ರಕ್ಕೆ ಅನುದಾನ ನೀಡದಿರುವುದು, ನಿಮ್ಹಾನ್ಸ್ ಮತ್ತು ನೆಫ್ರಾಲಜಿ ಆಸ್ಪತ್ರೆ ಪ್ರಸ್ತಾಪಿಸದಿರುವುದು ನಿರಾಸೆ ಮೂಡಿಸಿದೆ. ಆರ್ಟ್ ಗ್ಯಾಲರಿ ಮತ್ತು ವಸ್ತು ಸಂಗ್ರಹಾಲಯಕ್ಕೆ 10 ಕೋಟಿ ರೂ., ವಿಮಾನ ನಿಲ್ದಾಣ ವಿಸ್ತರಣೆಗೆ 320 ಕೋಟಿ ರೂ. ಒದಗಿಸಿರುವುದು ಸಮಾಧಾನ ತಂದಿದೆ.

–ವಾಸು(ಮಾಜಿ ಶಾಸಕ), ಅಧ್ಯಕ್ಷ, ಮೈಸೂರು ಕೈಗಾರಿಕೆಗಳ ಸಂಘ



ರಾಜ್ಯದ 2023–24ನೇ ಸಾಲಿನ ಬಜೆಟ್ ಅಭಿವೃದ್ಧಿಯ ದೂರದೃಷ್ಟಿಯಿಲ್ಲದ, ಕೃಷಿಕರ ಪರವಲ್ಲದ ಗುಮಾಸ್ತ ಸಿದ್ಧಪಡಿಸಿದ ಲೆಕ್ಕಪತ್ರದಂತಿದೆ. ಬಜೆಟ್‌ನಲ್ಲಿ ಏನೂ ತಿರುಳಿಲ್ಲ, ರೈತರ ಆದಾಯ ಹೆಚ್ಚಿಸುವ ಯಾವುದೇ ಯೋಜನೆ, ಕಾರ್ಯಕ್ರಮಗಳಿಲ್ಲ. ಕೃಷಿ ಉತ್ಪನ್ನಗಳ ಖರೀದಿಗೆ ಆವರ್ತ ನಿಧಿ ಮೀಸಲಿಟ್ಟಿಲ್ಲ. ಶೂನ್ಯ ಬಡ್ಡಿ ದರದ ಸಾಲ ಮೊತ್ತವನ್ನು 5 ಲಕ್ಷ ರೂಗೆ ಹೆಚ್ಚಿಸಿರುವುದು ಸ್ವಾಗತಾರ್ಹ. ಆದರೆ ಬೆಳೆ ಸಾಲದ ಸ್ಕೇಲ್ ಆಫ್ ಫೈನಾನ್ಸ್ ಹೆಚ್ಚಿಸದಿದ್ದರೆ ಶೇ.87ರಷ್ಟಿರುವ ಸಣ್ಣ ಹಿಡುವಳಿ ದಾರರರಿಗೆ ಪ್ರಯೋಜನವಾಗುವುದಿಲ್ಲ. ಬಜೆಟ್‌ನ ಶೇ.11ರಷ್ಟು ಕೃಷಿ ಕ್ಷೇತ್ರ, ಶೇ.6.5 ನೀರಾವರಿಗೆ ಮೀಸಲಿಟ್ಟಿದ್ದು, ಸಂಪೂರ್ಣವಾಗಿ ಕೃಷಿಯನ್ನು ಕಡೆಗಾಣಿಸಿದೆ. ರೈತರನ್ನು ಸಾಲದ ಹೊರೆಯಿಂದ ವಿಮುಕ್ತಗೊಳಿಸುವ ಪ್ರಸ್ತಾಪವೇ ಇಲ್ಲ.

–ಬಡಗಲಪುರ ನಾಗೇಂದ್ರ, ಅಧ್ಯಕ್ಷ ಕರ್ನಾಟಕ ರಾಜ್ಯ ರೈತ ಸಂಘ

# ಬೌಲಿಂಗ್ ಮಾಡುವಾಗ ಕುಸಿದು ಬಿದ್ದು, ಸಾವನ್ನಪ್ಪಿದ ಮೈಸೂರಿನ ಕ್ರಿಕೆಟ್ ಪಟು



ಮೈಸೂರು, ಫೆ.17– ಚೆನ್ನೈನಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೌಲಿಂಗ್ ಮಾಡುವಾಗ ಎದೆ ನೋವಿನಿಂದ ಮೈದಾನದಲ್ಲೇ ಕುಸಿದು ಬಿದ್ದು ಮೈಸೂರಿನ ಕ್ರೀಡಾಪಟು ಲಲಿತ್ ಕುಮಾರ್(38) ಶುಕ್ರವಾರ ನಿಧನರಾಗಿದ್ದಾರೆ.

ಮೈಸೂರಿನ ಮಂಡಿ ಮೊಹಲ್ಲಾದ ನಿವಾಸಿಯಾದ ಇವರು ಮೈಸೂರಿನ ಘಾಂಚಿ ಸಮಾಜದ ಕ್ರಿಕೆಟ್ ತಂಡದೊಂದಿಗೆ ಚೆನ್ನೈನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ತೆರಳಿದ್ದರು. ಇಂದು ಬೆಳಗ್ಗೆ 11.30ಕ್ಕೆ ನಡೆದ ಪಂದ್ಯದಲ್ಲಿ ಬೌಲಿಂಗ್ ಮಾಡುವ ಸಂದರ್ಭದಲ್ಲಿ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದು, ಮೈದಾನದಲ್ಲಿಯೇ ಕುಸಿದು ಸಾವನ್ನಪ್ಪಿದ್ದಾರೆ. ಮೃತರು ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಬೈಕ್‌ಗಳ ನಡುವೆ ಡಿಕ್ಕಿ: ಯುವಕ ಸಾವು



ಕೆ.ಆರ್.ಪೇಟೆ, ಫೆ.17– ಬೈಕ್‌ಗಳ ಮಧ್ಯೆ ಡಿಕ್ಕಿ ಸಂಭವಿಸಿ ಯುವಕನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಶುಕ್ರವಾರ ಸಂಜೆ ಸಂತೇಬಾಚ ಹಳ್ಳಿ ಮುಖ್ಯರಸ್ತೆಯ ದುಗ್ಗನಹಳ್ಳಿ ಗೇಟ್ ಬಳಿ ನಡೆದಿದೆ.

ಪಟ್ಟಣದ ಜಯನಗರ ಬಡಾವಣೆ ನಿವಾಸಿ ನಂಜಪ್ಪ ಅವರ ಪುತ್ರ ಮಹೇಂದ್ರ (28) ಸಾವನ್ನಪ್ಪಿದವರು. ಈತ ತನ್ನ ಬೈಕ್‌ನಲ್ಲಿ ಸಂತೇಬಾಚಹಳ್ಳಿಗೆ ತೆರಳಿ ಕೆ.ಆರ್.ಪೇಟೆಗೆ ವಾಪಸ್ಸಾಗುತ್ತಿದ್ದ ವೇಳೆ ಎದುರಿನಿಂದ ಬಂದ ಹೀರೋ ಸ್ಪ್ಲೆಂಡರ್ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹೇಂದ್ರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ಬಳಿಕ ಮತ್ತೊಂದು ಬೈಕ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಕೆಆರ್.ಪೇಟೆ ಟೌನ್ ಪೊಲೀಸ್ ಠಾಣೆಗೆ ಮೃತರ ಸಹೋದರ ನಾಗೇಂದ್ರ ದೂರು ನೀಡಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಸಾವಿನಲ್ಲೂ ಒಂದಾದ ದಂಪತಿ

## ಪತಿ ಸಾವನ್ನಪ್ಪಿದ ವಾರದೊಳಗೆ ಪತ್ನಿಯೂ ಸಾವು




ಮೈಸೂರು, ಫೆ.17–ಪತಿಯ ಅಗಲಿಕೆಯನ್ನು ತಾಳಲಾರದೇ ಪತ್ನಿಯೂ ನಿಧನರಾಗುವ ಮೂಲಕ ಸಾವಿನಲ್ಲೂ ಒಂದಾಗಿದ್ದಾರೆ. ಈ ಘಟನೆ ಸಿದ್ಧಾರ್ಥನಗರ ಬಡಾವಣೆಯಲ್ಲಿ ಸಂಭವಿಸಿದೆ.

ಬಡಾವಣೆಯ ನಿವಾಸಿ, ಸರ್ಕಾರಿ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕಿ ಎಂ.ಸಿ.ವಿಜಯಲಕ್ಷ್ಮೀ (74) ಎಂಬುವರೇ ನಿಧನರಾದವರಾಗಿದ್ದಾರೆ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಅಧೀಕ್ಷಕರಾಗಿದ್ದ ವಿಜಯಲಕ್ಷ್ಮೀ ಅವರ ಪತಿ ಬಿ.ಕೆ.ರಾಜು ಅವರು ಫೆ.11 ರಂದು ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದರು. ಅಂದಿನಿಂದ ಖಿನ್ನತೆಗೊಳಗಾಗಿದ್ದ ವಿಜಯಲಕ್ಷ್ಮೀ ಅವರು, ಶುಕ್ರವಾರ ಸಂಜೆ ತಮ್ಮ ಮನೆಯಲ್ಲಿ ಹೃದಯಾಘಾತದಿಂದ ನಿಧನರಾಗುವ ಮೂಲಕ ಸಾವಿನಲ್ಲೂ ಒಂದಾಗಿದ್ದಾರೆ

ದಿವಂಗತ ದಂಪತಿ ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ(ಫೆ.18) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ವಿಜಯಲಕ್ಷ್ಮೀ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಪತ್ನಿ ನಿಧನ



ಬೆಂಗಳೂರು, ಫೆ.17– ವಿಧಾನಸಭೆ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅವರ ಪತ್ನಿ ವಿಜಯಮ್ಮ (69) ಇಂದು ನಿಧನರಾದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಶುಕ್ರವಾರ ಮಧ್ಯಾಹ್ನ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ವಿಜಯಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಎರಡು ದಿನಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೃತರು ಪತಿ, ಪುತ್ರ, ಪುತ್ರಿ, ಮೊಮ್ಮಕ್ಕಳನ್ನು ಅಗಲಿದ್ದಾರೆ.

**ಸಂತಾಪ:** ಪಕ್ಷದ ಹಿರಿಯ ನಾಯಕರು, ಆತ್ಮೀಯರಾದ ಕೆ.ಆರ್.ರಮೇಶ್ ಕುಮಾರ್ ಧರ್ಮಪತ್ನಿ ವಿಜಯಮ್ಮ ಅವರು ನಿಧನರಾದ ಸುದ್ದಿ ತಿಳಿದು ಅತೀವ ನೋವಾಯಿತು. ರಮೇಶ್ ಕುಮಾರ್ ಅವರ ಕುಟುಂಬದ ಶೋಕದಲ್ಲಿ ನಾನೂ ಭಾಗಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

## ಪಿ.ಆರ್. ಸರೋಜರಾವ್



ಮೈಸೂರು, ಫೆ.17– ಮೈಸೂರಿನ ಕುವೆಂಪುನಗರ ನಿವಾಸಿ ದಿವಂಗತ ಟಿ.ಅನಂತ ರಾವ್ ಅವರ ಪತ್ನಿ ಶ್ರೀಮತಿ ಪಿ.ಆರ್. ಸರೋಜ ರಾವ್(84) ಅವರು ಮಂಗಳವಾರ (ಫೆ.14) ನಿಧನರಾದರು.

ದಿವಂಗತರು ಸಮೀರಾ ಟೀಚರ್ಸ್ ಟ್ರೈನಿಂಗ್ ಕಾಲೇಜು ಪ್ರಿನ್ಸಿಪಾಲರಾಗಿದ್ದರು. ಜೊತೆಗೆ ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಚಿಂತನ ಮತ್ತು ಹರಟೆ ಕಾರ್ಯಕ್ರಮಗಳಲ್ಲಿ ಭಾಗವಸುತ್ತಿದ್ದರು. ಇವರು ಶ್ರೀ ಸಂಗೀತ ಕಲಾಭಿವರ್ಧಿನಿ ಸಭಾದ ಅಧ್ಯಕ್ಷರಾಗಿದ್ದರು. ದಿವಂಗತರು ಓರ್ವ ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಫರೀದಾ ಬೇಗಂ

ಮೈಸೂರು, ಫೆ.17–ನಗರದ ಈದ್ಗಾದಲ್ಲಿರುವ ಮೈಸೂರು ಎಂಬ್ರಾಯಿಡರಿ ವರ್ಕ್ಸ್ ಮಾಲೀಕರು ಮತ್ತು ನ್ಯೂ ಬಡೇ ಮಕಾನ್ ನಿವಾಸಿಯಾದ ಸೈಯದ್ ಅಬ್ದುಲ್ ವಾಹೀದ್ ಅಮ್ಮಿರಿ ಅವರ ಪತ್ನಿ ಫರೀದಾ ಬೇಗಂ(57) ಮಂಗಳವಾರ ನಿಧನರಾದರು.

ಮೃತರು ಪತಿ, ಸ್ನೇಹಿತರು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ. ಫೆ. 14 ರಂದು ನಮಾಜ್–ಇ–ಜನಾಜ ನಡೆದ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ನಾಳೆ...



## ನಾಳಿನ ಪಂಚಾಂಗ

**19.2.2023 ಭಾನುವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023**
**ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,**
**ತಿಥಿ: ಚತುರ್ದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ**

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** 51ನೇ ಮಹಾಶಿವರಾತ್ರಿ ಪೂಜೆ, ರುದ್ರಹೋಮ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಬೆಳಗ್ಗೆಯಿಂದ

■ **ಶ್ರೀ ಆದಿಶಕ್ತಿ ಶೈಕ್ಷಣಿಕ, ಸಾಮಾಜಿಕ ಹಾಗೂ ಕಲಾ ಸಂಸ್ಥೆ, ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್ :** ಗೀತ ಗಾಯನ ಮತ್ತು ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಆರ್. ಲಕ್ಷ್ಮೀಕಾಂತ್, ಮುಖ್ಯ ಅತಿಥಿಗಳು : ಕೆ.ಎಸ್.ಎನ್. ದೀಕ್ಷಿತ್, ಡಾ. ಬಿ.ವಿ. ಶೇಷಾದ್ರಿ, ಡಾ. ರಘುರಾಂ ವಾಜಪೇಯಿ, ಡಾ. ನಟರಾಜ್ ಜೋಯಿಸ್, ಸ್ಥಳ: ಪುರಭವನ, ಬೆಳಗ್ಗೆ 10 ರಿಂದ.

■ **ಶ್ರೀ ಮುತ್ತಪ್ಪನ್ ದೇವಸ್ಥಾನ ಮತ್ತು ಚಾರಿಟಬಲ್ ಟ್ರಸ್ಟ್ :** ಪ್ರತಿಷ್ಠಾಪನೆ ದಿನ, ಶ್ರೀ ಮುತ್ತಪ್ಪನ್ ವೆಳ್ಳಾಟಂ, ತಿರುವಪ್ಪನ ತಿರ ಮಹೋತ್ಸವ, ಮಧ್ಯಾಹ್ನ 1ಕ್ಕೆ ಮಲೆ ಇಳಿಸುವ ಕಾರ್ಯ, ಸಂಜೆ 5ಕ್ಕೆ ಶ್ರೀ ಮುತ್ತಪ್ಪನ್ ವೆಳ್ಳಾಟಂ, ಸಂಜೆ 6.30ಕ್ಕೆ ಭಗವತಿ ವೆಳ್ಳಾಟಂ, ಕಲಶ ಸ್ವಾಗತ, ಕಳಿಕಪಾಟ್, ಸ್ಥಳ: ದೇವಸ್ಥಾನ, ಹಿನಕಲ್.

■ **ವಿಸ್ಮಯ ಬುಕ್ ಹೌಸ್, ಮೈಸೂರು :** ಪತ್ರಕರ್ತ ಸುದೇಶ್ ದೊಡ್ಡಪಾಳ್ಯ ಅವರ ಈಶಾನ್ಯ ದಿಕ್ಕಿನಿಂದ ಅಂಕಣ ಬರಹ ಹಂಗರಹಳ್ಳಿಯ ಬರ್ಬರ ಸಂಕೋಲೆಗಳು ವಿಭಿನ್ನ ಬರಹಗಳ ಕಟ್ಟು, ಒಲವು ನಮ್ಮ ಬದುಕು–ಪ್ರೇಮ ಕಥನಗಳ ಸರಣಿ–ಮೂರನೆಯ ಮುದ್ರಣ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಪತ್ರಕರ್ತ ಕೃಷ್ಣಪ್ರಸಾದ್, ಪುಸ್ತಕಗಳ ಕುರಿತು : ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಅಧ್ಯಕ್ಷತೆ : ಕೃಪಾಕರ–ಸೇನಾನಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ :** 55ನೇ ವರ್ಷದ ಮಹಾಶಿವರಾತ್ರಿ, ಬೆಳಗ್ಗೆ ಶ್ರೀ ಮುಕ್ಕಣ್ಣೇಶ್ವರ ಸ್ವಾಮಿಯವರಿಗೆ ಅಭಿಷೇಕ, ಅಷ್ಟೋತ್ತರ ಪೂಜೆ, ನೈವೇದ್ಯ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ, ಅನ್ನಸಂತರ್ಪಣೆ, ಸ್ಥಳ: ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ :** ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಕ್ರೀಡಾ ಧ್ವಜಾರೋಹಣ: ಪ್ರಾಥಮಿಕ ಶಿಕ್ಷಣ ಮತ್ತು ಸಕಾಲ ಸಚಿವ ಬಿ.ಸಿ. ನಾಗೇಶ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಅತಿಥಿಗಳು : ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಸಂಜೆ 4ಕ್ಕೆ

■ **ಗುರುಕುಲ್ ಇಂಟರ್‌ನ್ಯಾಷನಲ್ ಸ್ಕೂಲ್ :** ಮೈಸೂರು ಗುರುಕುಲ್ ಲೋಕಾರ್ಪಣೆ, ಸಾನ್ನಿಧ್ಯ : ಶ್ರೀ ದೇವಕೃಷ್ಣಾನಂದಜಿ ಸ್ವಾಮಿ, ದೇವಪ್ರಸಾದ್ ಸ್ವಾಮೀಜಿ, ಮುಖ್ಯ ಅತಿಥಿಗಳು : ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ರವೀಂದ್ರ ಶ್ರೀಕಂಠಯ್ಯ, ಸಿ.ಎಸ್. ಪುಟ್ಟರಾಜು, ಸ್ಥಳ: ಬೆಳಗೊಳ, ಕೆ.ಆರ್.ಎಸ್. ರಸ್ತೆ, ಸಂಜೆ 4 ರಿಂದ.

■ **ಸೇಂಟ್ ಮರಿಯಾ ಮಾಂಟೆಸ್ಸರಿ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಡಾ. ಎಲ್. ಪ್ರಸನ್ನಕುಮಾರ್, ಅಧ್ಯಕ್ಷತೆ : ಎನ್.ಎಂ. ಶಿವಪ್ರಕಾಶ್, ಸ್ಥಳ: ಗಾನಭಾರತಿ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ವಿಶೇಷ ಆಕರ್ಷಣೆಗಳು : ಧ್ಯಾನದ ಗುಹೆ, ಆಧ್ಯಾತ್ಮಿಕ ಚಿತ್ರ ಪ್ರದರ್ಶನ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸಗಳು, ಅನುಭೂತಿ ವಿಡಿಯೋ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗ ದರ್ಶನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ವಿಶೇಷ ಆಕರ್ಷಣೆಗಳು : ದ್ಯಾನದ ಗುಹೆ, ಆಧ್ಯಾತ್ಮಿಕ ಚಿತ್ರ ಪ್ರದರ್ಶನ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸಗಳು, ಅನುಭೂತಿ ವಿಡಿಯೋ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗ ದರ್ಶನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಶ್ರೀಪುರಂದರ–ಶ್ರೀ ತ್ಯಾಗರಾಜ ಆರಾಧನೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಪುರಂದರ ನವರತ್ನ ಕೃತಿಗಳ ಗೋಷ್ಠಿ ಗಾಯನ, ಬೆಳಗ್ಗೆ 9ಕ್ಕೆ ಶ್ರೀ ತ್ಯಾಗರಾಜ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಬೆಳಗ್ಗೆ 10ಕ್ಕೆ ಗಾನಸುರಭಿ ಬಿರುದು ಪ್ರದಾನ ಸಮಾರಂಭ, ಬೆಳಗ್ಗೆ 10.15ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದ್ವಾನ್ ರಾಮಪ್ರಸಾದ್ ಮತ್ತು ವಿದ್ವಾನ್ ರವಿಕುಮಾರ್ ಅವರಿಂದ ಗಾಯನ, ವಿದ್ವಾನ್ ನಿಶಾಂತ್ ಚಂದ್ರನ್–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜನ್–ಘಟ, ಮ. 1.30ಕ್ಕೆ ಮಹಾಮಂಗಳಾರತಿ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಕಾಳಿದಾಸ ರಸ್ತೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**18.2.2023 ಶನಿವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023**
**ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,**
**ತಿಥಿ: ತ್ರಯೋದಶಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ**

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ಡಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಶಂಕರ್ ಶ್ಯಾನ್ ಭಾಗ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆ– ಮೈಸೂರಿನ ದಿಯಾ ಚಾರಿಟೇಬಲ್ ಟ್ರಸ್ಟ್‌ನ ಪಿ.ಪಿ.ತೇಜಕುಮಾರ್ ಹಾಗೂ ದಿಯಾ ಸಲೀಮಾ ಆರ್. ಅವರೊಡಾನೆ ಸಂವಾದ, ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಬಿ. ಕೃಷ್ಣಪ್ಪ – ಹಾಡುಗಾರಿಕೆ

**ಮಧ್ಯಾಹ್ನ:** 12.30 ದೇವರನಾಮ, 12.45 ಜನಪದಸಂಗೀತ, 1.20 ಭಾವಗೀತೆ–ಪಿ. ಕಾಳಿಂಗರಾವ್ ಮತ್ತು ವೃಂದ, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ಹಾಡುವ ಪ್ರತಿಭೆ ಎಂ.ಕೆ. ಅಭಿಜ್ವಲ್ ಪರಿಚಯ, ಪ್ರಸ್ತುತಿ–ಎಂ.ಎಸ್. ಭಾರತಿ, 4.00 ನಾಟಕ–ಹಳೆಯ ಬೇರು, ರಚನೆ ಹಾಗೂ ನಿರ್ದೇಶನ–ಜಯಚಂದ್ರ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ–ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅನುಪ್ರಿಯ ದೇವತಾಲೆ–ವಯೋಲಿನ್, ರಾಮಕೃಷ್ಣ ಕರಂಬೇಲ್ಕರ್–ತಬಲ

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** 51ನೇ ಮಹಾಶಿವರಾತ್ರಿ ಪೂಜೆ, ಬೆಳಗ್ಗೆ ಶ್ರೀ ಅಮೃತೇಶ್ವರ ಸ್ವಾಮಿಗೆ ಪಂಚಾಮೃತ, ಪುರಸ್ಸರ ರುದ್ರಾಭಿಷೇಕ, 108 ಪಾರ್ಥಿವ ಲಿಂಗ ಪೂಜೆ, ಸಂಜೆ 6 ಗಂಟೆಗೆ ಪ್ರದೋಷ ಕಾಲದಲ್ಲಿ ಪಂಚಾಮೃತ ಪುರಸ್ಸರ, ರುದ್ರಾಭಿಷೇಕ, ರಾತ್ರಿ 9 ಗಂಟೆಗೆ ರಾಶಿ ಪೂಜೆ, ರಂಗಪೂಜೆ, ಮಹಾಕೈಲಾಸ ಶಿಖರ ದೀಪಾರಾಧನೆ, ನಾಲ್ಕು ಝಾಮದ ರುದ್ರಾಭಿಷೇಕ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಕೃಷ್ಣದೇವರಾಯ ಯುವಕರ ಸಂಘ ಹಾಗೂ ಟೀಮ್ ಕೆಡಿಪಿ :** ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 30 ಗಜಗಳ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಫುಟ್‌ಬಾಲ್ ಮೈದಾನ, ಶ್ರೀ ಕೃಷ್ಣದೇವರಾಯ ವೃತ್ತ, ವಿಜಯನಗರ 2ನೇ ಹಂತ, ಬೆಳಗ್ಗೆ 9ಕ್ಕೆ.

■ **ಶ್ರೀ ಮುತ್ತಪ್ಪನ್ ದೇವಸ್ಥಾನ ಮತ್ತು ಚಾರಿಟಬಲ್ ಟ್ರಸ್ಟ್ :** ಪ್ರತಿಷ್ಠಾಪನೆ ದಿನ, ಶ್ರೀ ಮುತ್ತಪ್ಪನ್ ವೆಳ್ಳಾಟಂ, ತಿರುವಪ್ಪನ ತಿರ ಮಹೋತ್ಸವ, ಬೆಳಗ್ಗೆ 10ಕ್ಕೆ ತಿರುವಪ್ಪನ, ಬೆಳಗ್ಗೆ 11ಕ್ಕೆ ಭಗವತಿ ತಿರ, ಸಂಜೆ 6.30ಕ್ಕೆ ಭಗವತಿ ವೆಳ್ಳಾಟಂ, ಪಳ್ಳಿವೇಟ, ಮಧ್ಯಾಹ್ನ 12 ರಿಂದ ಅನ್ನದಾನ, ಸ್ಥಳ: ದೇವಸ್ಥಾನ, ಹಿನಕಲ್.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಮಹಾ ಶಿವರಾತ್ರಿ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ 6 ಗಂಟೆಗೆ ರುದ್ರಹೋಮ, 8 ಗಂಟೆಗೆ ನಾದ ಮಂಟಪ ಸಭಾಂಗಣ ಮುಂಭಾಗ ನಂದಿ ಪೂಜೆ, 9ಕ್ಕೆ ಶ್ರೀ ಚಕ್ರಪೂಜೆ, 10 ಗಂಟೆಗೆ ಮಹಾರುದ್ರ ಹೋಮ ಪೂರ್ಣಾಹುತಿ, ನಂತರ ಪುಟ್ಟುಗಂ 13ನೇ ಜನ್ಮ ದಿನಾಚರಣೆ, 11 ಗಂಟೆಯಿಂದ ಮಧ್ಯಾಹ್ನ 2 ಗಂಟೆ ತನಕ ಭಕ್ತಾದಿಗಳಿಂದ ಮಹಾರುದ್ರ ಅಭಿಷೇಕ, ಮಧ್ಯಾಹ್ನ 3 ಗಂಟೆಗೆ ಪ್ರಾರ್ಥನಾ ಮಂದಿರ ಮುಂಭಾಗ ಮೂಲಿಕೇಶ್ವರನಿಗೆ ಪೂಜೆ, ಸಂಜೆ 5.30 ಗಂಗೋತ್ಸವ– ಶ್ರೀದತ್ತ ವೆಂಕಟೇಶ್ವರ ದೇವಾಲಯದಿಂದ ಪುಣ್ಯ ತೀರ್ಥವುಳ್ಳ ಕಳಶಗಳೊಂದಿಗೆ ಮಹಾಶಿವನ ಮೆರವಣಿಗೆ, ಸಂಜೆ 6.30ಕ್ಕೆ ಶ್ರೀ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಂದ ರುದ್ರಾಭಿಷೇಕ, ಭಕ್ತಾದಿಗಳಿಂದ ಸಹಸ್ರ ಕಳಶಾಭಿಷೇಕ, ಸಂಜೆ 7ಕ್ಕೆ ಕರ್ನಾಟಕ ಸಂಗೀತ–ವಿದ್ವಾನ್ ಪಾಲ್‌ಘಟ್ ರಾಮಪ್ರಸಾದ್, ರಾತ್ರಿ 9 ಗಂಟೆಗೆ ಕರ್ನಾಟಕ ಸಂಗೀತ–ವಿದುಷಿ ಮಾಧವಿ ಶರತ್, ರಾತ್ರಿ 11ಕ್ಕೆ ಶ್ರೀ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಅಭಿಷೇಕ, ಹನ್ನೊಂದು ಬಾರಿ ರುದ್ರ ಪ್ರಶ್ನ ವೇದ ಮಂತ್ರಗಳ ಪಠನೆ ಮತ್ತು ವಿವಿಧ ಅಲಂಕಾರಗಳು, 12ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗಿನ ಜಾಗ 3 ರಿಂದ 6 ಗಂಟೆವರೆಗೆ ಶಿವ ಭಜನೆಗಳು –ದಿವ್ಯ ನಾಮ ಸಂಕೀರ್ತನೆ ಮತ್ತು ಪ್ರವಚನ ಸ್ವಾಮೀಜಿ ಅವರಿಂದ, ನಂತರ ಶ್ರೀ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಮಹಾ ಮಂಗಳಾರತಿ, ತೀರ್ಥ ಮತ್ತು ಪ್ರಸಾದ ವಿತರಣೆ, ಸ್ಥಳ: ಆಶ್ರಮದ ಆವರಣ.

■ **ಶ್ರೀ ಕ್ಷೇತ್ರ ಶ್ರೀ ಭೋಗೇಶ್ವರ ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನ :** ಮಹಾಶಿವರಾತ್ರಿ ಜಾತ್ರಾ ಮಹೋತ್ಸವ, ಬೆಳಗ್ಗೆ 5 ಗಂಟೆಗೆ ಸಂಕಲ್ಪ, ರುದ್ರಾಭಿಷೇಕ, ಪಂಚಾಮೃತ, ಅಭಿಷೇಕ, ಶಿವಸಹಸ್ರನಾಮಾರ್ಚನೆ, ಅಷ್ಟೋತ್ತರ, ಅರ್ಚನೆ–ರುದ್ರಾಭಿಷೇಕ, ಶಿವ ಪಂಚಾಕ್ಷರಿ, ತ್ರಿರತಿ ಹೋಮ, ಪೂರ್ಣಾಹುತಿ, ವಿಶೇಷ ಪೂಜಾ ಸೇವೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 9 ರಿಂದ ಭಕ್ತಿಗೀತೆಗಳು, ಬೆಳಗ್ಗೆ 10 ರಿಂದ ಹರಿದ್ರ ಗಣಪತಿ ಭಜನಾ ಮಂಡಳಿ, ಬೆಳಗ್ಗೆ 11 ರಿಂದ ಶ್ರೀ ಶ್ರೀಕರ ಹರಿದಾಸ ಭಜನಾ ಮಂಡಳಿ, ಸ್ಥಳ: ದೇವಸ್ಥಾನದ ಆವರಣ, ರಿಂಗ್ ರಸ್ತೆ, ಬೋಗಾದಿ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30 ರಿಂದ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ವಿಶೇಷ ಆಕರ್ಷಣೆಗಳು : ದ್ಯಾನದ ಗುಹೆ, ಆಧ್ಯಾತ್ಮಿಕ ಚಿತ್ರ ಪ್ರದರ್ಶನ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸಗಳು, ಅನುಭೂತಿ ವಿಡಿಯೋ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗ ದರ್ಶನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ :** 55ನೇ ವರ್ಷದ ಮಹಾಶಿವರಾತ್ರಿ, ಬೆಳಗ್ಗೆ 6 ರಿಂದ ಶ್ರೀ ಗಣಪತಿ ಪೂಜೆ, ಕಳಸ ಸ್ಥಾಪನೆ, ನವಗ್ರಹ ಪೂಜೆ, ಪಂಚಾಮೃತ, ರುದ್ರಾಭಿಷೇಕ, ಅರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 4.30ಕ್ಕೆ ಶ್ರೀ ಮುಕ್ಕಣ್ಣೇಶ್ವರಸ್ವಾಮಿಯವರ ವೈಭವದ ಉತ್ಸವ, ರಾತ್ರಿ 7.30ಕ್ಕೆ ಇಡೀ ರಾತ್ರಿ ಅಖಂಡ ಭಜನೆ, ಸ್ಥಳ: ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಜೆ.ಪಿ.ನಗರ :** 87ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ, ಅಧ್ಯಕ್ಷತೆ : ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಮುಖ್ಯ ಅತಿಥಿಗಳು : ಪಾಲಿಕೆ ಸದಸ್ಯೆ ಶ್ರೀಮತಿ ಶಾರದಾ ಈಶ್ವರ್, ಮುಕುಂದನ್, ಶಿವರಾತ್ರಿ ಆಧ್ಯಾತ್ಮಿಕ ರಹಸ್ಯ : ರಾಜಯೋಗಿನಿ ಬಿ.ಕೆ. ವಾಣಿ, ವಿಶೇಷ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್, ಅತಿಥಿಗಳು : ಬಿ.ಎಂ. ಮಹೇಶ್, ಎಂ. ಭಾಗ್ಯ, ಸ್ಥಳ: ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಸಂಜೆ 6.30ಕ್ಕೆ.

■ **ಶ್ರೀ ಕಾಮೇಶ್ವರ ಕಾಮೇಶ್ವರಿ ದೇವಸ್ಥಾನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೈಂಕರ್ಯ ಸಭಾ :** ಮಹಾಶಿವರಾತ್ರಿ ಪ್ರಯುಕ್ತ ಬೆಳಗ್ಗೆ 8ಕ್ಕೆ ಏಕಾದಶವಾರ ರುದ್ರಾಭಿಷೇಕ, ಮಧ್ಯಾಹ್ನ 12ಕ್ಕೆ ಶ್ರೀಗಳವರ ಪ್ರಾಕಾರೋತ್ಸವ, ಅಖಂಡ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ದೇವಸ್ಥಾನ, ರಾಮಾನುಜ ರಸ್ತೆ.

■ **ಕನ್ನಡ ಸಾಹಿತ್ಯ ಪರಿಷತ್ತು, ವಿಶ್ವ ಚೇತನ ಬಳಗ, ತಿ.ನರಸೀಪುರ ತಾ. :** ಮಹಾಶಿವರಾತ್ರಿ ಹಬ್ಬದ ಸಂಭ್ರಮ ಬಹುಮಾನ ವಿತರಣೆ, ಪ್ರಶಸ್ತಿ ಪ್ರದಾನ, ಉದ್ಘಾಟನೆ : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಗೀತಗಾಯನ ಸಮೂಹ ಅಧ್ಯಕ್ಷ ಟಿ.ಎಸ್. ನಾಗಲಿಂಗಮೂರ್ತಿ, ಪ್ರಾಸ್ತಾವಿಕ ನುಡಿ : ಎಂ.ಶಿವಸ್ವಾಮಿ, ಮುಖ್ಯ ಅತಿಥಿಗಳು : ಎನ್. ಶಾಂತಕುಮಾರಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 9.30 ರಿಂದ.

■ **ಶ್ರೀ ಉತ್ತರಾದಿ ಮಠ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಪ್ರಯುಕ್ತ ಬೆಳಗ್ಗೆ 8 ಗಂಟೆಗೆ ಮಧು ಅಭಿಷೇಕ, ಪಂಚಾಮೃತ ಸೇವೆ, ಸಂಜೆ 5 ರಿಂದ ಸಾಮೂಹಿಕ ರುದ್ರಾಭಿಷೇಕ, ರುದ್ರ ನಮಕ, ಚಮಕ ಪಾರಾಯಣ, ವಿಶೇಷ ಆಹ್ವಾನಿತರು : ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಎನ್.ಎಂ. ನವೀನ್ ಕುಮಾರ್, ಸ್ಥಳ: ದೇವಸ್ಥಾನ, ಯಾದವಗಿರಿ.

■ **ಗುಂಬಳ್ಳಿ ನಂದೀಶ್ ಗೆಳೆಯರ ಬಳಗ :** ಶಿವರಾತ್ರಿ ಹಬ್ಬದ ಪ್ರಯುಕ್ತ ಹಳೆಯ ಚಿತ್ರಗೀತೆಗಳ ಕಾರ್ಯಕ್ರಮ, ಸ್ಥಳ: ಎಸ್.ಬಿ.ಎಂ. ಕಾಲೋನಿ, ಶ್ರೀರಾಂಪುರ, ಸಂಜೆ 5 ರಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮ, ಮಹಾರುದ್ರಾಭಿಷೇಕ, ಹಾಲಭಿಷೇಕ, ಬಿಲ್ವಾರ್ಚನೆ, ನಿವೇದನೆ, ದೂಪದಾರತಿ, ತುಪ್ಪದಾರತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ವಿಶೇಷ ಮಹಾರುದ್ರಾಭಿಷೇಕ, ಸಂಜೆ 7ಕ್ಕೆ ಶ್ರೀ ಸ್ವಾಮಿಯವರ ಉತ್ಸವಮೂರ್ತಿ, ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ದೇವಸ್ಥಾನ, ಲಷ್ಕರ್ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಉತ್ಸವ ದರ್ಶನದ ಸಮಯ, ಬೆಳಗ್ಗೆ 6 ಗಂಟೆಯಿಂದ ಮಾರನೆ ದಿನದ ಬೆಳಗ್ಗೆ 6 ಗಂಟೆಯವರೆಗೆ, ಅಭಿಷೇಕಗಳು, ಸ್ಥಳ: ದೇವಸ್ಥಾನ, ವಾಣಿ ವಿಲಾಸ ಮೊಹಲ್ಲಾ.

■ **ಮಹಾರಾಜ ಶಿಕ್ಷಣ ಸಂಸ್ಥೆಗಳು :** ಮಹಾಶಿವರಾತ್ರಿ ಪ್ರಯುಕ್ತ ಕೈಲಾಸ–ಮಾನಸಸರೋವರ ದರ್ಶನ, ವರ್ಣಮಯ ಚಿತ್ರಗಳೊಂದಿಗೆ (ಸ್ಲಾಯ್ಡ್ ಪ್ರದರ್ಶನ ವೇದ ಉಪನಿಷತ್‌ಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನ, ಪರಿಕಲ್ಪನೆ ಮತ್ತು ಪ್ರಸ್ತುತಿ : ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಮುಖ್ಯ ಅತಿಥಿಗಳು: ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಸ್ಥಳ: ಗೋಪಾಲಸ್ವಾಮಿ ಕಾಲೇಜು ಸಭಾಂಗಣ, ಲಕ್ಷ್ಮೀಪುರಂ, ಸಂಜೆ 6ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಶ್ರೀಪುರಂದರ–ಶ್ರೀ ತ್ಯಾಗರಾಜ ಆರಾಧನೋತ್ಸವ, ಮಧ್ಯಾಹ್ನ 3ಕ್ಕೆ ಪೂಜಾ ಕೈಂಕರ್ಯ, 3.15ಕ್ಕೆ ಸಂಗೀತ ಸೇವೆ, ಸಂಜೆ 6ಕ್ಕೆ ವಿಶೇಷ ಸಂಗೀತ ರೂಪಕ 'ಶ್ರೀ ತ್ಯಾಗರಾಜ ವಾಗ್ಗೇಯ ಭಾಗೀರಥಿ', ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಕಾಳಿದಾಸ ರಸ್ತೆ.

■ **ನಾಗರಿಕ ವೇದಿಕೆ :** ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಹಾಗೂ ಹೂವಿನ ಅಲಂಕಾರ ಮತ್ತು ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಆಕಾಶವಾಣಿಯ ಸುಪ್ರಸಿದ್ಧ ಕಲಾವಿದರಾದ ಡಾ. ಎ.ಡಿ.ಶ್ರೀನಿವಾಸ್ ಮತ್ತು ತಂಡದವರಿಂದ ಭಕ್ತಿಗೀತೆ, ಭಾವಗೀತೆ ಕಾರ್ಯಕ್ರಮ, ಸ್ಥಳ: ಶ್ರೀ ಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಸ್ಥಾನ, ಕುವೆಂಪುನಗರ.

# ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 18 ಶನಿವಾರ 2023

ಸಂಪುಟ: 43 | ಸಂಚಿಕೆ: 301 | ಪುಟಗಳು: 12 + IV

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4






## 2023–24ನೇ ಸಾಲಿನ ಬೊಮ್ಮಾಯಿ ಬಜೆಟ್‌ನಲ್ಲಿ

# 'ಸರ್ವೇ ಜನಾಃ ಸುಖಿನೋ ಭವಂತು'

● ರೈತರಿಗೆ ಬಡ್ಡಿ ರಹಿತ ಸಾಲದ ಮಿತಿ 5 ಲಕ್ಷಕ್ಕೆ ಏರಿಕೆ ● ಸರ್ಕಾರಿ ಪಿಯು–ಪದವಿ ವಿದ್ಯಾರ್ಥಿಗಳಿಗೆ ಶುಲ್ಕ ರಹಿತ ಶಿಕ್ಷಣ ● ಬಿಪಿಎಲ್ ಕಾರ್ಡ್‌ಗೆ 6 ಕೆ.ಜಿ ಅಕ್ಕಿ ● ಭೂ ರಹಿತ ಮಹಿಳಾ ಕಾರ್ಮಿಕರಿಗೆ ತಿಂಗಳಿಗೆ 500 ರೂ. ಸಹಾಯ ಧನ ● ಗ್ರಾಪಂ ಸದಸ್ಯರು, ಅತಿಥಿ ಶಿಕ್ಷಕರು, ಗ್ರಂಥಾಲಯ ಸಿಬ್ಬಂದಿ, ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತರಿಗೆ ಗೌರವ ಧನ ಸಾವಿರ ರೂ.ಗೆ ಹೆಚ್ಚಳ.

ಬೆಂಗಳೂರು, ಫೆ.17(ಕೆಎಂಶಿ)–ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಲೇಬೇಕೆಂದು ಪಣ ತೊಟ್ಟಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾವು ಇಂದು ಮಂಡಿಸಿದ ಮುಂಗಡ ಪತ್ರದಲ್ಲಿ ಎಲ್ಲಾ ಸಮುದಾಯದ ಮತದಾರರನ್ನು ಸೆಳೆಯುವತ್ತ ಗಮನಹರಿಸಿದ್ದಾರೆ.

ರೈತರಿಗೆ ಐದು ಲಕ್ಷದವರೆಗೆ ಬಡ್ಡಿರಹಿತ ಸಾಲ, ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶುಲ್ಕರಹಿತ ಶಿಕ್ಷಣ. ಬಿಪಿಎಲ್ ಕಾರ್ಡುದಾರರಿಗೆ ಮಾಸಿಕ ಉಚಿತ ಅಕ್ಕಿ 5 ರಿಂದ 6 ಕೆಜಿಗೆ ಹೆಚ್ಚಳ. ಭೂರಹಿತ ಮಹಿಳಾ ಕಾರ್ಮಿಕರಿಗೆ ತಿಂಗಳಿಗೆ 500 ರೂ. ಸಹಾಯಧನ ಸೇರಿದಂತೆ ಹತ್ತು ಹಲವು ಜನೋಪಯೋಗಿ ಯೋಜನೆಗಳನ್ನು ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ. ಏಪ್ರಿಲ್–ಮೇ ತಿಂಗಳಲ್ಲಿ ನಡೆಯುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮತದಾರರನ್ನು ಓಲೈಸಲು ಹತ್ತು ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ಪ್ರಕಟಿಸಿದ ಬೊಮ್ಮಾಯಿ ಅವರು, ಸಾರ್ವಜನಿಕರಿಗೆ ಯಾವುದೇ ರೀತಿಯ ಹೊರೆ ಹೇರದಂತೆ ನೋಡಿಕೊಳ್ಳುವಲ್ಲಿಯೂ ಯಶಸ್ವಿಯಾಗಿದ್ದಾರೆ. ಚುನಾವಣಾ ಹಿನ್ನೆಲೆಯಲ್ಲಿ ನಾಲ್ಕು ತಿಂಗಳ ಮಟ್ಟಿಗೆ ಮಾತ್ರ ಲೇಖಾನುದಾನ ಕೋರಿ ಮುಂಗಡ ಪತ್ರ ಮಂಡಿಸಿರುವ ಮುಖ್ಯಮಂತ್ರಿಯವರು ಸರ್ಕಾರದ ಬೊಕ್ಕಸದ ಮೇಲೆ ಹೊರೆಯಾಗದಂತೆ ಜನಪರ ಯೋಜನೆಗಳ ಘೋಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯರು, ಅತಿಥಿ ಶಿಕ್ಷಕರು, ಗ್ರಂಥಾಲಯ ಸಿಬ್ಬಂದಿ, ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಸಹಾಯಕರ ಗೌರವಧನವನ್ನು ಒಂದು ಸಾವಿರಕ್ಕೆ ಹೆಚ್ಚಳ ಮಾಡಿದ್ದಾರೆ. 2.35 ಲಕ್ಷ ವಿದ್ಯುತ್ ಸಂಪರ್ಕ ರಹಿತ ಮನೆಗಳಿಗೆ 124 ಕೋಟಿ ರೂ. ವೆಚ್ಚದಲ್ಲಿ ಸಂಪರ್ಕ ಕೊಡಿಸುವುದಾಗಿ ಭರವಸೆ ನೀಡಿರುವ ಮುಖ್ಯಮಂತ್ರಿಯವರು ಐದು ಸಾವಿರ ವಸತಿ ರಹಿತ ಪೌರಕಾರ್ಮಿಕರಿಗಾಗಿ 3000 ಕೋಟಿ ರೂ. ವೆಚ್ಚದಲ್ಲಿ ಮನೆ ನಿರ್ಮಾಣ ಮಾಡುವುದಾಗಿ ಹೇಳಿದ್ದಾರೆ. ಸಣ್ಣ, ಅತೀ ಸಣ್ಣ ರೈತರಿಗಾಗಿ 180 ಕೋಟಿ ರೂ. ವೆಚ್ಚದಲ್ಲಿ ಜೀವನ್ ಜ್ಯೋತಿ ಕಿಶನ್ ಯೋಜನೆ ಘೋಷಣೆ ಮಾಡಿ ರುವುದಲ್ಲದೆ, ಕಿಸಾನ್ ಕಾರ್ಡ್ ಹೊಂದಿರುವ ರೈತರಿಗೆ ಭೂ ಸಿರಿ ಯೋಜನೆಯಡಿ ಹತ್ತು ಸಾವಿರ ಸಹಾಯಧನ, ತುರ್ತು ಸಂದರ್ಭದಲ್ಲಿ ಅವರಿಗೆ ಬೀಜ, ಗೊಬ್ಬರ ಖರೀದಿಗೆ ಅನುಕೂಲ ಮಾಡಿಕೊಡಲಿದೆ. ಎಸ್‌ಸಿ/ಎಸ್‌ಟಿ ವಸತಿ ಯೋಜನೆಯಡಿ ನೀಡಲಾಗುತ್ತಿದ್ದ ಘಟಕ ಸಹಾಯ ಧನವನ್ನು 1.5 ಲಕ್ಷದಿಂದ 2 ಲಕ್ಷದವರೆಗೆ ಹೆಚ್ಚಳ ಮಾಡಲಾಗಿದೆ. ಯಾವುದೇ ಹೊಸ ತೆರಿಗೆಗಳನ್ನು ಹೇರದ ಸ್ವಂತದ

▶ 8ನೇ ಪುಟಕ್ಕೆ

## ಬೊಮ್ಮಾಯಿ ಬಜೆಟ್‌ನಲ್ಲಿ ಕವಿತೆಗಳ ಝಲಕ್

ಬೆಂಗಳೂರು, ಫೆ.17– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು 2023–24ನೇ ಸಾಲಿನ ಆಯ ವ್ಯಯ ಮಂಡನೆ ವೇಳೆ ಕವಿತೆಗಳ ಸಾಲುಗಳನ್ನು ಓದುವ ಮೂಲಕ ಆಗಾಗ ಗಮನ ಸೆಳೆದರು.

ಬಜೆಟ್‌ಗೂ ಮುನ್ನ ಸಿಎಂ ಬೊಮ್ಮಾಯಿ ರಾಷ್ಟ್ರಕವಿ ಕುವೆಂಪು ಅವರ 'ಹೋಗುತಿದೆ ಹಳೆಯ ಕಾಲ, ಹೊಸ ಕಾಲ ಬರುತಲಿದೆ ಬರುತಲಿದೆ ಹೊಸ ದೃಷ್ಟಿ, ಹೊಸ ಬಯಕೆಗಳಲಿ ಹೋಗುತಿದೆ ಹಳೆ ಬಾಳು, ಹೊಸ ಬಾಳು ಬರುತಲಿದೆ' ಕವಿತೆಯನ್ನು ಓದಿದರು. ಮೊದಲನೆಯ ವಲಯ ಕೃಷಿ ಮತ್ತು ಪೂರಕ ಚಟುವಟಿಕೆಗಳ ಬಗ್ಗೆ ಬಜೆಟ್ ಮಂಡನೆ ಮಾಡುವ ವೇಳೆ ಕೆ.ಎಸ್. ನರಸಿಂಹ ಸ್ವಾಮಿಯವರ 'ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ ಮಾನವ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವಾಸೆ' ಸಾಹಿತ್ಯವನ್ನು ಓದಿದರು. ಮೊದಲನೆಯ ವಲಯ ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ಕುರಿತು ಬಜೆಟ್ ಮಂಡನೆ ▶ 8ನೇ ಪುಟಕ್ಕೆ

## ಬಡ್ಡಿರಹಿತ ಕೃಷಿ ಸಾಲದ ಮಿತಿ 3 ರಿಂದ 5 ಲಕ್ಷಕ್ಕೆ ಏರಿಕೆ

ಬೆಂಗಳೂರು, ಫೆ.17(ಕೆಎಂಶಿ)–ಬಡ್ಡಿ ರಹಿತ ಅಲ್ಪಾವಧಿ ಕೃಷಿ ಸಾಲದ ಮಿತಿಯನ್ನು 3 ರಿಂದ 5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.

ಪ್ರಸಕ್ತ ಸಾಲಿನಿಂದಲೇ ಯೋಜನೆ ಜಾರಿಗೊಳ್ಳಲಿದ್ದು, ಇದರಿಂದ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ರೈತರಿಗೆ ಸುಲಭವಾಗಿ ಹಾಗೂ ಅಗತ್ಯಕ್ಕೆ ತಕ್ಕಂತೆ ಸಾಲ ಸೌಲಭ್ಯ ಒದಗಿಸಿದಂತಾಗುತ್ತದೆ. ಈ ವರ್ಷ 30 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25 ಸಾವಿರ ಕೋಟಿ ರೂ. ವಿತರಿಸಲಾಗುವುದು. ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ರೈತರಿಗೆ ಭೂ ಸಿರಿ ಎಂಬ ನೂತನ ಯೋಜನೆಯಡಿ ▶ 8ನೇ ಪುಟಕ್ಕೆ

ರೈತರಿಗೆ ಪ್ರತಿ ಹಂತದಲ್ಲಿ ಒಂದಲ್ಲ ಒಂದು ರೀತಿ ನೆರವಿಗೆ ನಾನಾ ಯೋಜನೆ ಜಾರಿ




## ಸರ್ಕಾರಿ ಪಿಯು, ಪದವಿ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯ್ತಿ

● ವಿದ್ಯಾರ್ಥಿನಿಯರಿಗೆ ವಿದ್ಯಾವಾಹಿನಿಯಡಿ ಉಚಿತ ಬಸ್ ಪಾಸ್
● 500 ಕನ್ನಡದ ಕಣ್ಮಣಿಗಳಿಗೆ ಉಚಿತ ವೃತ್ತಿಪರ ಶಿಕ್ಷಣ

ಬೆಂಗಳೂರು, ಫೆ.17(ಕೆಎಂಶಿ)–ಸರ್ಕಾರಿ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.

ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅನುವು ಮಾಡಿಕೊಡುವ ದೃಷ್ಟಿಯಿಂದ ಇಂತಹ ದಿಟ್ಟ ಕ್ರಮ ಕೈಗೊಂಡಿದ್ದು, ಇದರಿಂದ ಎಂಟು ಲಕ್ಷ ವಿದ್ಯಾರ್ಥಿಗಳು ಅನುಕೂಲ ಪಡೆಯಲಿದ್ದಾರೆ ಎಂದರು. ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ▶ 8ನೇ ಪುಟಕ್ಕೆ





### ಬಿಡುವು

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 19.2.2023ರ ಭಾನುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

### ಎಕ್ಸ್‌ಟ್ರಾ ಇನ್ನಿಂಗ್ಸ್ ಶಿವರಾತ್ರಿ ವಿಶೇಷ

ಇಂದಿನ 'ಮೈಸೂರು ಮಿತ್ರ' ಸಂಚಿಕೆಯೊಂದಿಗೆ ಸುತ್ತೂರು ಶ್ರೀಗಳು ಹಾಗೂ ಗಣಪತಿ ಸಚ್ಚಿದಾನಂದ ಶ್ರೀಗಳ ವಿಶೇಷ ಲೇಖನ ಒಳಗೊಂಡ 4 ಪುಟಗಳ ವಿಶೇಷಾಂಕ ನೀಡಲಾಗಿದೆ.

## ಮೈಸೂರು ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸಲು 320 ಕೋಟಿ ಅನುದಾನ

ಇಂಟಿಗ್ರೇಟೆಡ್ ಟೌನ್‌ಶಿಪ್, ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿ ಸ್ಥಾಪನೆ

ಬೆಂಗಳೂರು, ಫೆ.17(ಕೆಎಂಶಿ)–ದೆಹಲಿಯ ನೋಯಿಡಾ ಮಾದರಿಯಲ್ಲಿ ಮೈಸೂರು, ರಾಮನಗರ ಸೇರಿದಂತೆ ಆರು ನಗರಗಳ ವ್ಯಾಪ್ತಿಯಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್‌ಗಳನ್ನು ನಿರ್ಮಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.

2023–24ನೇ ಸಾಲಿನ ಮುಂಗಡ ಪತ್ರ ಮಂಡನೆಯಲ್ಲಿ ಪ್ರಸ್ತಾಪಿಸಿರುವ ಮುಖ್ಯಮಂತ್ರಿಯವರು, ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರತಿಷ್ಠಿತ ಖಾಸಗಿ ಸಂಸ್ಥೆಗಳಿಂದ Expression of interest ಆಹ್ವಾನಿಸಲಾಗಿದೆ. ಈ ಟೌನ್‌ಶಿಪ್‌ಗಳು ನಗರ ಯೋಜನೆಗೆ, ಹೊಸ ಉದ್ಯಮಿಗಳಿಗೆ ನೂತನ ಆಯಾಮ ನೀಡಲಿದೆ ಹಾಗೂ ಉತ್ತಮವಾದ ಜೀವನ ಶೈಲಿ ಮತ್ತು ಕೆಲಸದ ವಾತಾವರಣವನ್ನು ಸೃಜಿಸಲಿದೆ ಎಂದರು. ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸಲು 320 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಉನ್ನತೀಕರಣಕ್ಕೆ ಅಗತ್ಯವಾಗಿರುವ ಭೂಸ್ವಾಧೀನಕ್ಕಾಗಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ಮೈಸೂರು, ಶಿವಮೊಗ್ಗ ಹಾಗೂ ಕಲಬುರಗಿಗಳಲ್ಲಿ 202 ಕೋಟಿ ರೂ. ವೆಚ್ಚದಲ್ಲಿ ಕಿದ್ವಾಯಿ ಸಂಸ್ಥೆಯಡಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಮೈಸೂರು–ಕುಶಾಲನಗರ ಮಾರ್ಗದಲ್ಲಿ 4128 ಕೋಟಿ ರೂ. ವೆಚ್ಚ ಮಾಡಿ, 92



ಕಿಲೋ ಮೀಟರ್ ಉದ್ದದ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ ಎಂದರು. ಕೊಡಗು ಜಿಲ್ಲೆಯ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ 100 ಕೋಟಿ ರೂಗಳ ವಿಶೇಷ ಪ್ಯಾಕೇಜ್ ನೀಡಲಾಗುವುದೆಂದರು. ಮೈಸೂರು ಸೇರಿದಂತೆ ನಾಲ್ಕು ಪ್ರಮುಖ ಮಹಾನಗರ ಪಾಲಿಕೆಯ ವ್ಯಾಪ್ತಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಐವಿಎಫ್ ಕ್ಲಿನಿಕ್‌ಗಳನ್ನು 6 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.

ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ರಾಜ್ಯವು ದಾವೆ ಹೂಡಿದ್ದು, ಇದನ್ನು ಶೀಘ್ರದಲ್ಲಿ ಇತ್ಯರ್ಥಪಡಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು. ಮೂಲ ಬಿತ್ತನೆ ಗೂಡುಗಳ ನಿರಂತರ ಉತ್ಪಾದನೆ ಮತ್ತು ಸರಬರಾಜಿಗಾಗಿ ಮೈಸೂರು ಬಿತ್ತನೆ ಪ್ರದೇಶದಲ್ಲಿ ಮೂಲಭೂತ ಸೌಕರ್ಯವನ್ನು ಬಲಪಡಿಸಲು 8 ಕೋಟಿ ಅನುದಾನ ಒದಗಿಸಲಾಗಿದೆ. ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ 'ಪ್ರಸಾದ್' ಯೋಜನೆಯಡಿ ಮೈಸೂರು ನಗರದ ಚಾಮುಂಡಿ ಬೆಟ್ಟದ ಸಮಗ್ರ ಅಭಿವೃದ್ಧಿ ಹಾಗೂ ಸ್ವದೇಶ್ ದರ್ಶನ್ 2.0 ಅಡಿಯಲ್ಲಿ ಹಂಪಿಯ ಸ್ಮಾರಕ ಅಭಿವೃದ್ಧಿ ಮತ್ತು ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಶಾಶ್ವತ ಸೌಲಭ್ಯಗಳ ಅಭಿವೃದ್ಧಿ ಯೋಜನೆಗಳಿಗೆ ಅನುಮತಿ ನೀಡಲಾಗಿದೆ.

ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗಾಗಿ ಕ್ರಮ ಕೈಗೊಂಡಿದ್ದು, ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಬಳಿ ಎರಡೂವರೆ ಎಕರೆ ಜಾಗದಲ್ಲಿ ಅಂತಾರಾಷ್ಟ್ರೀಯ ಮಟ್ಟದ ರಾಜ್ಯ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಯನ್ನು ಹತ್ತು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದೆಂದರು.

## ರೂ. 5,000 ಕೋಟಿ ವೆಚ್ಚದಲ್ಲಿ 5 ಲಕ್ಷ ಮನೆಗಳ ನಿರ್ಮಾಣ



ಬೆಂಗಳೂರು, ಫೆ.17– ಪ್ರಸಕ್ತ ವರ್ಷದಲ್ಲಿ ರೂ. 5,000 ಕೋಟಿ ವೆಚ್ಚದಲ್ಲಿ 5 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಎಲ್ಲರಿಗೂ ಸೂರು ಒದಗಿಸಲು ಸರ್ಕಾರ ವಿಶೇಷ ಆದ್ಯತೆ ನೀಡಿದೆ. ಬಡವರ ಹಿತಾಸಕ್ತಿ ದೃಷ್ಟಿಯಿಂದ ಹಿಂದಿನ ಸರ್ಕಾರದ ಅವಧಿಯಲ್ಲಿ ಘೋಷಿಸಿದ್ದ ಮನೆಗಳಿಗೆ ಎರಡು ವರ್ಷಗಳ ಕೋವಿಡ್ ಸಂಕಷ್ಟದ ನಡುವೆಯೂ 10.173 ಕೋಟಿ ರೂ. ಅನುದಾನ ಹಂಚಿಕೆ ಮಾಡಿ, ಈಗಾಗಲೇ ಸುಮಾರು 5 ಲಕ್ಷ ಮನೆಗಳನ್ನು ಪೂರ್ಣಗೊಳಿಸಿದ್ದಲ್ಲದೇ, 5 ಲಕ್ಷ ಹೊಸ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ ಎಂದರು. ಬೆಂಗಳೂರಿನಲ್ಲಿ ಪ್ರಸಕ್ತ ವರ್ಷ 20,000 ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದು, ಈ ಯೋಜನೆಯಡಿ ಇಚ್ಛೆಪಡುವ ಮನೆಯನ್ನು ▶ 8ನೇ ಪುಟಕ್ಕೆ

## ಸಂಸ್ಕೃತಿ ರಕ್ಷಣೆಗೆ ಆದ್ಯತೆ

ಬೆಂಗಳೂರು, ಫೆ.17(ಕೆಎಂಶಿ)–ಸಂಸ್ಕೃತಿ ರಕ್ಷಣೆಗೆ ಒತ್ತು ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ. ಇದರಡಿ ಪ್ರತಿ ಜಿಲ್ಲೆಯಲ್ಲಿ ಜನಪರ ಹಬ್ಬ ಆಯೋಜನೆ ಮಾಡುವುದಲ್ಲದೆ, ಭುವನೇಶ್ವರಿ ತಾಯಿ ಬೃಹತ್ ಮೂರ್ತಿ ಮತ್ತು ಥೀಮ್ ಪಾರ್ಕ್‌ನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸುವುದಾಗಿ ಹೇಳಿದ್ದಾರೆ. ಮೂರನೇ ವಿಶ್ವಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ಆಯೋಜಿಸುವುದಾಗಿ ಹೇಳಿರುವ ಅವರು, ಕೈಗಾರಿಕೋದ್ಯಮ ಆಡಳಿತ, ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ರಕ್ಷಣೆಗಾಗಿ ಸಮಗ್ರ ಕಾನೂನು ರೂಪಿಸಲಾಗುವುದು. ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಧಕರ ಬಗ್ಗೆ ಪರಿಚಯಿಸಲು ಅವರ ಯಶೋಗಾಥೆಗಳನ್ನು ಪಠ್ಯಪುಸಕದಲ್ಲಿ ಅಳವಡಿಸಲಾಗುವುದು. ಕನ್ನಡ ಪುಸ್ತಕ ಪ್ರಾಧಿಕಾರದ ಚಟುವಟಿಕೆಗಳಿಗೆ ಎರಡು ಕೋಟಿ ನೆರವು ನೀಡುವುದರ ಜೊತೆಗೆ ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿವೇಕಾನಂದ ಜಂಟಿ ಬಾಧ್ಯತಾ ಗುಂಪುಗಳಿಗೆ ತಲಾ ಹತ್ತು ಸಾವಿರದಂತೆ ಸುತ್ತು ನೀಡಿ ಮತ್ತು ಸ್ವಯಂ ಉದ್ಯೋಗ ಕೈಗೊಳ್ಳಲು 1 ಲಕ್ಷದಿಂದ 5 ಲಕ್ಷದವರೆಗೆ ಸಹಾಯಧನ ನೀಡಲಾಗುವುದು ಎಂದು ತಮ್ಮ ಆಯ–ವ್ಯಯದಲ್ಲಿ ತಿಳಿಸಿದ್ದಾರೆ.

## ಕಿವಿ ಮೇಲೆ ಹೂ ಇಟ್ಟುಕೊಂಡು ಬಂದ ಕೈ ನಾಯಕರು...



ಬೆಂಗಳೂರು, ಫೆ.17–ಸಿಎಂ ಬಸವರಾಜ ಬೊಮ್ಮಾಯಿ ಬಜೆಟ್ ಮಂಡನೆಯ ದಿನ ಕಾಂಗ್ರೆಸ್ ನಾಯಕರು ಕಿವಿ ಮೇಲೆ ಚೆಂಡು ಹೂ ಇಟ್ಟುಕೊಂಡು ಸದನ ಪ್ರವೇಶಿಸಿದ್ದು ವಿಶೇಷವಾಗಿತ್ತು. ಕೇಸರಿ ಬಣ್ಣದ ಹೂವು ಇಟ್ಟುಕೊಂಡು ಸದನಕ್ಕೆ ಬಂದಿದ್ದರಿಂದ ಕೆಲಹೊತ್ತು ಕಲಾಪದಲ್ಲಿ ಗದ್ದಲ ಉಂಟಾಯಿತು. ಸಿದ್ದರಾಮಯ್ಯ ಅವರು ಕಿವಿ ಮೇಲೆ ಹೂವು ಇಟ್ಟುಕೊಂಡು ಬಂದಿದ್ದಕ್ಕೆ ಸಚಿವ ಅಶೋಕ ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಸಿಎಂ ಬೊಮ್ಮಾಯಿ ಅವರು, ಇಷ್ಟು ದಿನ ▶ 10ನೇ ಪುಟಕ್ಕೆ



ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣರ 'ಹೊಡೆದು ಹಾಕಿ' ಹೇಳಿಕೆ: ಮೈಸೂರು ದೇವರಾಜ ಪೊಲೀಸ್ ಠಾಣೆಗೆ

## ಕಾಂಗ್ರೆಸ್‌ನಿಂದ ದೂರು ಸಲ್ಲಿಕೆ

● ಕಾಂಗ್ರೆಸ್ ಭವನದಿಂದ ಠಾಣೆವರೆಗೆ ಮೌನ ಪ್ರತಿಭಟನಾ ಮೆರವಣಿಗೆ ● ಕಪ್ಪು ಪಟ್ಟಿ ಧರಿಸಿ ಆಕ್ರೋಶ



ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಬಿ.ಶಿವಕುಮಾರ್ ಅವರಿಗೆ ಕಾಂಗ್ರೆಸ್‌ನಿಂದ ಶುಕ್ರವಾರ ದೂರು ಸಲ್ಲಿಸಲಾಯಿತು.

ಮೈಸೂರು,ಫೆ.17(ಪಿಎಂ)–ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಿ ಎಂಬ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್ ನಾರಾಯಣ್ ಹೇಳಿಕೆ ಆಧರಿಸಿ ಸಚಿವರ ವಿರುದ್ಧ ಸಿಆರ್‌ಪಿಸಿ 503, 504 ಮತ್ತು 506ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿ ಕಾಂಗ್ರೆಸ್ ವತಿಯಿಂದ ಶುಕ್ರವಾರ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಲಾಯಿತು.

ಇದಕ್ಕೂ ಮುನ್ನ ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನಾ ಮೆರವಣಿಗೆ ನಡೆಸಿದರು. 'ನನ್ನನ್ನೂ ಹತ್ಯೆ ಮಾಡಿ..' ಫಲಕಗಳನ್ನಿಡಿದು ಹೆಜ್ಜೆ ಹಾಕಿದ ಕಾಂಗ್ರೆಸಿಗರು, ದಾಸಪ್ಪ ವೃತ್ತ, ಜೆಎಲ್‌ಬಿ ರಸ್ತೆ ಕಾಲ್ನಡಿಗೆಯಲ್ಲಿ ಸಾಗಿ, ಕೃಷ್ಣವಿಲಾಸ ರಸ್ತೆಯಲ್ಲಿರುವ ದೇವರಾಜ ಪೊಲೀಸ್ ಠಾಣೆ ಎದುರು ಜಮಾಯಿಸಿದರು. ಬಳಿಕ ಸ್ಥಳಕ್ಕಾಗಮಿಸಿದ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಿ.ಶಿವಕುಮಾರ್‌ಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ದೂರು ಸಲ್ಲಿಸಲಾಯಿತು.

**ದೂರು:** ಡಾ.ಅಶ್ವತ್ಥ್ ನಾರಾಯಣ ಅವರು ಫೆ.15ರಂದು ಮಂಡ್ಯದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಟಿಪ್ಪುವಿಗೆ ನಂಜೇಗೌಡ, ಉರಿಗೌಡ ಏನು ಮಾಡಿದರೋ ಅದೇ ▶ 10ನೇ ಪುಟಕ್ಕೆ

## ಮೈಸೂರಲ್ಲಿ ಬೃಹತ್ ರ‍್ಯಾಲಿಗೆ ನಿರ್ಧಾರ



ಮೈಸೂರು, ಫೆ.17(ಎಸ್‌ಬಿಡಿ)–ವಿಪಕ್ಷ ನಾಯಕ ಸಿದ್ದರಾಮಯ್ಯನವರನ್ನು ಹೊಡೆದು ಹಾಕಬೇಕು ಎಂದು ಹೇಳಿದ ಸಚಿವ ಅಶ್ವಥ್ ನಾರಾಯಣ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಿನಲ್ಲಿ ಬೃಹತ್ ರ‍್ಯಾಲಿ ನಡೆಸಲು ತೀರ್ಮಾನಿಸಲಾಗಿದೆ. ಹಲವು ಸಂಘಟನೆಗಳ ಪ್ರತಿನಿಧಿಗಳು ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ಖಂಡನಾ ಸಭೆ ನಡೆಸಿ, ಈ ನಿರ್ಧಾರ ಕೈಗೊಂಡಿವೆ. ಫೆ.19ರಂದು ಬೆಳಗ್ಗೆ 11ಕ್ಕೆ ಸಿದ್ಧಾರ್ಥ ನಗರದ ಕನಕ ಭವನದಲ್ಲಿ ಬೃಹತ್ ಸಭೆ ಆಯೋಜಿಸಿ ರ‍್ಯಾಲಿ ಸಂಬಂಧ ರೂಪುರೇಷೆ ಹಾಗೂ ದಿನಾಂಕವನ್ನು ಅಂತಿಮಗೊಳಿಸಲು ನಿರ್ಣಯ ಕೈಗೊಳ್ಳಲಾಯಿತು. ಸಭೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಸಿದ್ದರಾಮಯ್ಯನವರನ್ನು ಹೊಡೆದು ಹಾಕಬೇಕು ಎಂಬ ಹೇಳಿಕೆಯನ್ನು ಶಾಸಕರು ಸದನದಲ್ಲಿ ತೀವ್ರವಾಗಿ ಖಂಡಿಸಬೇಕಿತ್ತು. ಪ್ರತಿಭಟನೆ ನಡೆಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಪಟ್ಟು ಹಿಡಿಯಬೇಕಿತ್ತು. ಅಲ್ಲಿಯುವರೆಗೂ ಸದನ ಮುಂದುವರೆಸಲು ಅವಕಾಶ ನೀಡಬಾರದಿತ್ತು. ಆದರೆ ಶಾಸಕರು ಕೈಚೆಲ್ಲಿ ಕುಳಿತಿದ್ದು ಏಕೆಂಬುದೇ ತಿಳಿಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯನವರನ್ನು ಟಾರ್ಗೆಟ್ ಮಾಡುವ ಮೂಲಕ ಹಿಂದುಳಿದ, ದಲಿತ, ಅಸಹಾಯಕರ ಮೇಲೆ ಆಕ್ರಮಣ ಮಾಡುವುದು ▶ 10ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಆತ : ಕೆಲಸ ಯಾಕೆ ಬಿಟ್ಟು ಬಂದೆ?
ಈತ : ತಲೆ ನೋವು ವಿಪರೀತವಾಯ್ತು.
ಆತ : ಔಷಧಿ ತಗೋಬಹುದಿತ್ತು ನೀನು
ಈತ : ನನಗಲ್ಲ, ನನ್ನಿಂದಾಗಿ ನಮ್ಮ ಬಾಸ್‌ಗೆ!

ಮೈಸೂರು ಮಿತ್ರ

ಶನಿವಾರ, 18 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ..........**

ನಿಜವಾದ ನಂಬಿಕೆ, ನಿಜವಾದ ಜ್ಞಾನ, ನಿಜವಾದ ಆಚರಣೆಯೇ ನಿಜವಾದ ಮುಕ್ತಿಮಾರ್ಗ –ಭಗವಾನ್ ಮಹಾವೀರ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಅನ್ನ ಹಾಕಿದ ಮನೆ ಹಾಳಲ್ಲ, ಗೊಬ್ಬರ ಹಾಕಿದ ಹೊಲ ಹಾಳಲ್ಲ

## ನಿಮ್ಮ ಪತ್ರಗಳು

### ಬೇಕೇ ಬೇಕು, ಜೀವಜಲಕ್ಕಾಗಿ ಜಲಸಂಗ್ರಹಾಗಾರ

ಮಾನ್ಯರೇ,

ಅಂದಿನ ಗಾಣಿಗರ ಕೇರಿಯ (ಇಂದಿನ ತಿಲಕ್‌ನಗರ, ಮೈಸೂರು ನಗರದ ಕೇಂದ್ರ ಭಾಗ) ನಿವಾಸಿಗಳಾದ ನಾವು 22 ಕೊಳವೆ ಬಾವಿಗಳ ನೀರನ್ನೇ ಅವಲಂಬಿಸಿ ಬದುಕಿದ್ದೇವೆ ಮತ್ತು ಕಾವೇರಿ ನೀರು ಇನ್ನೂ ಕನಸಾಗೇ ಉಳಿದಿದೆ. ನಮ್ಮ ದಶಕಗಳ ನಿರಂತರ ಹೋರಾಟದ ನಂತರ ಕರ್ನಾಟಕ ಸರ್ಕಾರವು ಇತ್ತೀಚಿನ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಆದೇಶದ ಸಂ:ಮಮಇ 177 ಪಿಹೆಚ್ ಪಿ 2022 ದಿನಾಂಕ 1–2–2023 ಪ್ರಕಾರ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ತಿಲಕ್ ನಗರ ಮೈಸೂರು ಆವರಣದಲ್ಲಿ ಕುಡಿಯುವ ನೀರು ಸರಬರಾಜಿಗಾಗಿ 10 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರ ನಿರ್ಮಾಣ ಮಾಡಲು ಅನುಮತಿ ಕೊಟ್ಟಿದೆ ಮತ್ತು ತಕ್ಕ ಅನುದಾನವನ್ನೂ ಬಿಡುಗಡೆ ಮಾಡಿದೆ. ಕೆಲವು ಸಣ್ಣಪುಟ್ಟ ಬಹುತೇಕ ಅನುಪಯುಕ್ತ ಗಿಡ ಗಂಟಿಗಳು ಮತ್ತು ಕೆಲವು ಸಣ್ಣ ಮರಗಳನ್ನು ತೆಗೆಯಲು ಅನುಮತಿ ತೆಗೆದುಕೊಂಡು ಅದಕ್ಕೆ ಬೇಕಾದ ಹಣವನ್ನೂ ಪಾವತಿಸಲಾಗಿದೆ ಮತ್ತು ಟ್ಯಾಂಕ್ ಸುತ್ತ ಹಸಿರು ಪಸರಿಸಲು ವ್ಯವಸ್ಥೆಯನ್ನೂ ಮಾಡಲಾಗಿದೆ. ತಿಲಕ್‌ನಗರ ನಿವಾಸಿಗಳು ಮಾಡಿದ ಗುದ್ದಲಿ ಪೂಜೆಯೊಂದಿಗೆ ಅಡಿಪಾಯದ ಕಾಂಕ್ರೀಟ್ ಕಾಮಗಾರಿಯೂ ಮುಗಿದಿದೆ. ಈ ಆದೇಶ ಹೊರಡುವ ಮುನ್ನ ಹಲವಾರು ಆಕ್ಷೇಪಣೆಗಳು, ಅಹವಾಲುಗಳು ಬಂದಿರುವುದನ್ನೂ ಗಣನೆಗೆ ತೆಗೆದುಕೊಂಡಾಗಿದೆ ಮತ್ತು ಮಾನ್ಯ ಇಲಾಖಾ ಸಚಿವರ ಟಿಪ್ಪಣಿಯನ್ನೂ ಗಮನದಲ್ಲಿಟ್ಟುಕೊಂಡಾಗಿದೆ ಎಂದು ತಿಳಿಸಲಾಗಿದೆ. ಇಂದಿಗೂ ವಿಕಲಚೇತನರ ಅಂಧರ ಮತ್ತು ಮೂಗರ ಶಾಲೆ ವಿದ್ಯಾರ್ಥಿಗಳು ಮತ್ತು ದೊಡ್ಡಮ್ಮಣ್ಣಿ ಅಂಧರ ಮೂಗರ ಹಾಸ್ಟೆಲ್ ವಾಸಿಗಳೂ ಸಹ ಕೊಳವೆ ಬಾವಿ ನೀರನ್ನೇ ಅವಲಂಬಿಸಿದ್ದಾರೆ.

**10 ಲಕ್ಷ ಲೀಟರ್ ಜಲ ಸಂಗ್ರಹಾಗಾರದ ಉಪಯುಕ್ತತೆಗಳು:**

* ತಿಲಕ್‌ನಗರದ ಸುಮಾರು 40–50,000 ಜನರಿಗೆ ಜೀವಜಲ ಸಮಯಕ್ಕೆ ಸರಿಯಾಗಿ ಸರಬರಾಜಾಗುವುದು, ರಾತ್ರಿ ಹೊತ್ತಿನಲ್ಲಿ ನೀರು ಬಿಟ್ಟಾಗ 3 ಅಡಿ ಆಳದ ತೊಟ್ಟಿಗಳಿಂದ ನೀರನ್ನು ಎತ್ತಿ ಶೇಖರಣೆ ಮಾಡುವ ಬವಣೆ ತಪ್ಪುವುದು.
* ವಿಕಲ ಚೇತನರ, ಅಂಧರ ಮತ್ತು ಮೂಗರ ಶಾಲೆ, ಅಡುಗೆಮನೆ, ಡಿ.ಎಡ್ ಕಾಲೇಜು, ಬ್ರೈಲ್ ಮುದ್ರಣಾಲಯ, ಕಚೇರಿ ಬ್ಲಾಕ್, ಆವರಣದಲ್ಲಿರುವ ಇತರೆ ಕಟ್ಟಡಗಳಿಗೆ ಮತ್ತು ಹಾಸ್ಟೆಲ್ಲಿಗೂ ಒಳ್ಳೆ ನೀರು ಸಿಗುವುದು.
* ಜಲಸಂಗ್ರಹಾಗಾರವು ನಗರದ ಸಾಕಷ್ಟು ಮೇಲ್ಮಟ್ಟದಲ್ಲಿರುವುದರಿಂದ, ಗುರುತ್ವಾಕರ್ಷಣೆಯ ಮೂಲಕ ವಾರ್ಡ್ 25 ನಿವಾಸಿಗಳಿಗಲ್ಲದೆ ಸುತ್ತ ಮುತ್ತ ಇರುವ ಇತರೆ ವಾರ್ಡ್ ನಿವಾಸಿಗಳಿಗೂ, ಸ್ಕೂಲು, ಕಾಲೇಜು ಮತ್ತು ಆಸ್ಪತ್ರೆಗಳಿಗೂ ನೀರು ಸರಬರಾಜಾಗುವುದು.
* ಅಂಧರ ಮತ್ತು ಮೂಗರ ಶಾಲೆಯ ಜಾಗದ ಒಟ್ಟಾರೆ ವಿಸ್ತೀರ್ಣ ಸುಮಾರು 9 ಎಕರೆಗಳು – ಅಂದರೆ 369 ಗುಂಟೆಗಳು – ಅಂದರೆ ಸುಮಾರು 12,300 ಚದರಗಳು; ಸುಮಾರು 7 ಎಕರೆ ಜಾಗ ಅಂದರೆ 287 ಗುಂಟೆ, ದಶಕಗಳಿಂದ ಖಾಲಿ ಬಿದ್ದಿದೆ; ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಬೇಕಾಗಿರುವುದು ಈಶಾನ್ಯ ಮೂಲೆಯಲ್ಲಿ ಇರುವ ಸುಮಾರು 60'X60' ಅಂದರೆ 360 ಚದರ ಅಡಿ ಮಾತ್ರ.
* ಟ್ಯಾಂಕ್ ನಿರ್ಮಾಣದಿಂದ ಸಾವಿರಾರು ಸಂಸಾರಗಳ ಹಾಗೂ ಮುಂದಿನ ಪೀಳಿಗೆಗಳ ಕುಡಿಯುವ ನೀರಿನ ದಶಕಗಳ ಹಿಂದಿನ ಸಮಸ್ಯೆ ಬಗೆ ಹರಿಯುವುದು. ಅಲ್ಲದೆ, ಮುಂದಿನ ದಿನಗಳಲ್ಲಿ, ಆ ಆವರಣದಲ್ಲಿ ಯಾವ ಕಟ್ಟಡ ನಿರ್ಮಾಣವಾದರೂ, ಅದಕ್ಕೂ ಸಹ ನೀರು ಕೊಡುವ ಸಾಮರ್ಥ್ಯ ಹೊಂದಿರುತ್ತದೆ.

**ಕೊನೆ ಮಾತು:** ನಮಗೂ ಕುಡಿಯುವ ನೀರು ಕೊಡಿ, ತಿಲಕ್‌ನಗರ ನಿವಾಸಿಗಳು ಇರುವುದು ಸಣ್ಣ ಪುಟ್ಟ ಮನೆಗಳಲ್ಲಿ, ರಾತ್ರಿ ನೀರು ಬಂದಾಗ ತುಂಬಿಸಿಕೊಳ್ಳಲು ಸಂಪ್, ಪಂಪ್ ಅಥವಾ ಮನೆ ಮೇಲೆ ಟ್ಯಾಂಕ್‌ಗಳಿಲ್ಲ. ಖಾಲಿ ಬಿದ್ದಿರುವ ಜಾಗದಲ್ಲಿ ಮೇಲ್ಮಟ್ಟದ ಜಲ ಸಂಗ್ರಹಾಗಾರವು ಜನತೆಗೆ ವರಪ್ರಾಯಕವಾಗುವುದರಲ್ಲಿ ಸಂದೇಹವಿಲ್ಲ, ಅಷ್ಟು ದೊಡ್ಡ ಆವರಣದ ಒಂದು ಸಣ್ಣ ಚುಕ್ಕಿಯಷ್ಟು ಜಾಗದಲ್ಲಿ ಟ್ಯಾಂಕ್ ಕಟ್ಟಿದರೆ ಅಂಧ ಮತ್ತು ಮೂಗರ ಶಾಲೆಯ ವಿದ್ಯಾರ್ಥಿಗಳಿಗಾಗಲೀ ಮತ್ತು ಹಿರಿಯ ವಿಕಲಾಂಗ ಬಂಧುಗಳಿಗಾಗಲೀ ಅನಾನುಕೂಲವಾಗುವುದಿಲ್ಲ. ಆದರೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಬಾಳೋಣ ಉಳಿದವರಿಗೂ ಬದುಕಲು ಬಿಡೋಣ.

**–ವಸಂತಕುಮಾರ್ ಮೈಸೂರು ಮಠ, ಮೈಸೂರು.**

### ಮೈಸೂರು–ಬೆಂಗಳೂರು ದಶಪಥ ರಸ್ತೆ ಟೋಲ್ ದರ ರೂ.100ಕ್ಕೆ ಇಳಿಸಿ

ಮಾನ್ಯರೆ,

ಮೈಸೂರು–ಬೆಂಗಳೂರು ದಶಪಥ ರಸ್ತೆಯು ಮುಂದಿನ ತಿಂಗಳು ಉದ್ಘಾಟನೆಯಾಗುವುದೆಂದು ತಿಳಿದು ಸಂತೋಷವಾಯಿತು. ಈ ದಶಪಥ ರಸ್ತೆಯ ತ್ವರಿತ ನಿರ್ಮಾಣಕ್ಕೆ ಸ್ಥಳೀಯ ಸಂಸದರಾದ ಪ್ರತಾಪ ಸಿಂಹ ಅವರ ಶ್ರಮ ಕಾರಣ. ಈ ಕಾರಣಕ್ಕಾಗಿ ಅವರನ್ನು ಅಭಿನಂದಿಸಲೇಬೇಕು.

ಆದರೆ ಈ ರಸ್ತೆಯಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರಲು ಎರಡೂ ಕಡೆಯಿಂದ ಟೋಲ್ ರೂ.250 ಆಗಬಹುದೆಂದು ತಿಳಿದು ಅಚ್ಚರಿ ಪಡುವಂತಾಗಿದೆ.

ಈಗ ನೀವು ಮೈಸೂರಿನಿಂದ ಬೆಂಗಳೂರಿಗೆ ಯಾವುದೇ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸಿದರೂ ಕೇವಲ ಎರಡು ಗಂಟೆ ಹದಿನೈದು ನಿಮಿಷಗಳಲ್ಲಿ ಬೆಂಗಳೂರನ್ನು ತಲುಪಬಹುದು. ನೀವು ರಸ್ತೆಯ ಮೂಲಕ ದಶಪಥ ರಸ್ತೆಯಲ್ಲಿ ಬೆಂಗಳೂರನ್ನು ತಲುಪಲು ಇದಕ್ಕಿಂತಲೂ ಸ್ವಲ್ಪ ಹೆಚ್ಚಿನ ಸಮಯವೇ ಬೇಕಾಗುತ್ತದೆ. ರಸ್ತೆಯ ಮೂಲಕ ಬೆಂಗಳೂರಿಗೆ ರೂ.250 ಟೋಲ್ ಕೊಟ್ಟು ಹೋಗಿ–ಬರುವುದರ ಬದಲು ಇಬ್ಬರು ಪ್ರಯಾಣಿಕರು ಆರಾಮವಾಗಿ ರೈಲಿನಲ್ಲಿ ಸಿಗುವ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರಬಹುದು. ಮೈಸೂರಿನಿಂದ– ಬೆಂಗಳೂರಿಗೆ ಹೋಗಿ ಬರಲು ಈ ದಶಪಥ ರಸ್ತೆಯ ಟೋಲ್ ದರವನ್ನು ರೂ.100ಕ್ಕೆ ಇಳಿಸಿ, ಸಾಮಾನ್ಯ ಜನರು ಈ ರಸ್ತೆಯಲ್ಲಿ ಪ್ರಯಾಣಿಸುವಂತಾಗಲಿ.

**–ಬೂಕನಕೆರೆ ವಿಜೇಂದ್ರ, ಮೈಸೂರು**

### ಸಮಾಜಮುಖಿ ಕೆಲಸಗಳು ಮಾಡಲಿ...

ಮಾನ್ಯರೆ,

ಇತ್ತೀಚೆಗೆ ಹೆಚ್.ಡಿ. ಕೋಟೆ ಮತ್ತು ಸರಗೂರಿನಲ್ಲಿ ಜೆಡಿಎಸ್ ಮುಖಂಡ ಮತ್ತು ಹುಲಿಯೂರು ದುರ್ಗದ ಕರಿಕಲ್ಲು ಉದ್ಯಮಿ ಕೃಷ್ಣನಾಯಕರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹೆಸರಿನಲ್ಲಿ ಅಪ್ಪಾಜಿ ಕ್ಯಾಂಟೀನ್‌ಗಳನ್ನು ತೆರೆದು ಕಡಿಮೆ ದರದಲ್ಲಿ ಶುಚಿ–ರುಚಿಯಾದ ಊಟ, ತಿಂಡಿ ನೀಡಿ ಈ ಭಾಗದ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು, ಹಿರಿಯ ನಾಗರಿಕರ ಹಸಿವು ನೀಗಿಸಿ ಮಾನವೀಯತೆ ಮೆರೆದಿದ್ದಾರೆ. ಕೃಷ್ಣನಾಯಕರ ಪ್ರಕಾರ ಇದು ಚುನಾವಣಾ ದೃಷ್ಟಿಯಿಂದ ಮಾಡಿದ್ದಲ್ಲ. ಈ ಸೇವೆ ಎಂಎಲ್‌ಎ ಟಿಕೆಟ್ ಕೈ ತಪ್ಪಿದರೂ ಮುಂದುವರೆಯಲಿದೆ. ಉದ್ಯಮಿಗಳು ಇವರನ್ನು ನೋಡಿ ಇವರ ಹಾದಿಯಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಲಿ.

**– ಅಭಿಮಾನಿಗಳು, ಹಿತೈಷಿಗಳು, ಹೆಚ್.ಡಿ. ಕೋಟೆ.**



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

# ನೀರು, ನೆತ್ತರು ಜತೆಯಾಗಿ ಹರಿಯದು...!?

ಪುಲ್ವಾಮಾದಲ್ಲಿ ಭಯೋತ್ಪಾದಕರು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ವಾಹನದ ಮೇಲೆ ನಡೆಸಿದ ದಾಳಿಯಲ್ಲಿ ನಲ್ವತ್ತು ಸಿಆರ್‌ಪಿಎಫ್ ಜವಾನರು ಹುತಾತ್ಮರಾಗಿದ್ದರು. ಪ್ರತೀಕಾರ ರೂಪದಲ್ಲಿ ಭಾರತವು ದಿ. 26.2.2019 ರಂದು ಬಾಲಾಕೋಟ್ ಮೇಲೆ ವೈಮಾನಿಕ ದಾಳಿ ನಡೆಸಿ ಭಯೋತ್ಪಾದಕ ತಾಣಗಳನ್ನು ನಾಶಪಡಿಸಿ ನೂರಾರು ಭಯೋತ್ಪಾದಕರನ್ನು ಕೊಂದು ಹಾಕಿತು. ಈ ಸಂದರ್ಭದಲ್ಲಿ ಪಾಕಿಸ್ತಾನವು ಭಾರತದ ಮೇಲೆ ಪರಮಾಣು ದಾಳಿ ಮಾಡಬಹುದೆಂಬ ಬಲವಾದ ಶಂಕೆಯಿಂದ ದೆಹಲಿ ಆತಂಕದಲ್ಲಿತ್ತು. ಆದರೆ ತನ್ನ ರಾಜತಾಂತ್ರಿಕ ಅನುಭವ ಮತ್ತು ಜಾಣ್ಮೆಯಿಂದ ಸಂಭಾವ್ಯ ಪರಮಾಣು ದಾಳಿ ತಪ್ಪಿತು ಎಂದು ಅಮೇರಿಕದ ಮಾಜಿ ಕಾರ್ಯದರ್ಶಿ ಮೈಕ್ ಪೊಂಪಿಯೋ ಇತ್ತೀಚೆಗೆ ಬಿಡುಗಡೆಯಾಗಿರುವ ತಮ್ಮ ಪುಸ್ತಕ `Never Give an Inch : Fighting for the America I Love" ನಲ್ಲಿ ಉಲ್ಲೇಖಿಸುತ್ತಾ ಅಮೇರಿಕವು ಎರಡೂ ದೇಶಗಳನ್ನು ವಿನಾಶದಿಂದ ಉಳಿಸಿತು ಎಂದು ತಿಳಿಸಿದ್ದಾರೆ. ಈ ವಿಷಯದ ಸತ್ಯಾಸತ್ಯತೆ ಏನೇ ಇರಲಿ ನಿರಂತರವಾಗಿ ಭಾರತಕ್ಕೆ ಕಿರುಕುಳ ನೀಡುತ್ತಿರುವ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಲು ಭಾರತವು ಸಿಂಧೂ ಮತ್ತದರ ಉಪನದಿಗಳ ನೀರನ್ನೇ ಅಸ್ತ್ರವಾಗಿ ಬಳಸಲು ಸಿದ್ಧತೆ ನಡೆಸಿದೆ. ಇದಕ್ಕೆ ಪೂರಕವಾಗಿ 63 ವರ್ಷಗಳಷ್ಟು ಹಳೆಯದಾದ ಸಿಂಧೂನದಿ ನೀರು ಹಂಚಿಕೆ ಒಪ್ಪಂದವನ್ನು ಪುನರ್‌ಪರಿಶೀಲಿಸಲು ಭಾರತವು ಮುಂದಾಗಿದೆ.

#### ಸಿಂಧೂ–ಉಪನದಿಗಳ ನೀರಿನ ಪ್ರಾಮುಖ್ಯತೆ

1948ರಲ್ಲಿ ಈ ಪ್ರದೇಶಕ್ಕೆ ಭೇಟಿ ನೀಡಿದ್ದ ಓರ್ವ ಬ್ರಿಟಿಷ್ ಜನರಲ್‌ನ ಅಭಿಪ್ರಾಯದಂತೆ "ಕಾಶ್ಮೀರ ವಿವಾದಕ್ಕೆ ಮುಖ್ಯ ಕಾರಣ ಭೂಮಿ ಅಲ್ಲವೇ ಅಲ್ಲ. ಅದು ಸಿಂಧೂ ನದಿ ನೀರಿನ ಬಗ್ಗೆ ಪಾಕ್‌ಗೆ ಇರುವ ಅಭದ್ರತೆಯ ಆತಂಕವಾಗಿದೆ. ತನ್ನ ಜಲಮೂಲಗಳ ಮೇಲೆ ಭಾರತಕ್ಕೆ ಪರಮಾಧಿಕಾರವಿರುವುದನ್ನು ಪಾಕಿಗಳು ಸಹಿಸುವುದಿಲ್ಲ.

ವಿಶ್ವಬ್ಯಾಂಕ್‌ನ ಹಿರಿಯ ನೀರಾವರಿ ತಜ್ಞರಾಗಿದ್ದ ಹಾಗೂ ಪ್ರಸ್ತುತ ಹಾರ್ವರ್ಡ್ ವಿವಿಯಲ್ಲಿ ಪ್ರಾಧ್ಯಾಪಕರಾಗಿರುವ ಭಾರತ ಉಪಖಂಡದ ನೀರಾವರಿ ತಜ್ಞ ಜಾನ್ ಬ್ರಿಸ್‌ಕೋಸ್ ಪಾಕ್ ಆತಂಕವನ್ನು ಈ ರೀತಿ ವಿವರಿಸುತ್ತಾರೆ "ಸಿಂಧೂ ನದಿ ನೀರಿನ ವಿಚಾರದಲ್ಲಿ ಪಾಕ್‌ಗೆ ಬೇರೆ ಯಾವ ಮಾರ್ಗಗಳು ಉಳಿದಿಲ್ಲ. ಪ್ರಾದೇಶಿಕವಾಗಿ ನದಿ ಪಾತ್ರದ ಮೇಲ್ಭಾಗದಲ್ಲಿರುವ ಭಾರತವು ಈ ವಿಚಾರದಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿದೆ.


ಕಾಶ್ಮೀರವನ್ನು ಭಾರತ ಅಕ್ರಮವಾಗಿ ಆಕ್ರಮಿಸಿದೆ ಎನ್ನುತ್ತಿರುವ ಭಯೋತ್ಪಾದಕ ಸಂಘಟನೆ ಜಮಾತ್–ಉದ್–ದಾವಾ "ಪಾಕ್‌ಗೆ ನೀರು ಬಿಡಲು ಸತಾಯಿಸುತ್ತಿರುವ ಭಾರತದ ಕ್ರಮವು ಅದರ ಮೇಲೆ ಜಿಹಾದ್ ಘೋಷಿಸಲು ಸರಿಯಾದ ಕಾರಣ ಎಂದು ಸಾರಿ ಹೇಳುತ್ತಿದೆ". ಈ ಹೇಳಿಕೆಗಳ ಹಿನ್ನೆಲೆಯಲ್ಲಿ ಸಿಂಧೂ ನದಿಯ ಮತ್ತದರ ಉಪನದಿಗಳ ವಿಶಾಲತೆ, ಅಗಾಧತೆ ಹಾಗೂ ನೀರಿನ ಹರಿವಿನ ಪ್ರಮಾಣ ಅಂದಾಜು ಮಾಡಬಹುದು.

#### ಸಿಂಧೂ ನದಿಯ ಅಗಾಧತೆ

ಹಿಮಾಲಯದಲ್ಲಿ ಹುಟ್ಟಿ 2000 ಮೈಲಿ ಹರಿಯುವ ಸಿಂಧೂ ಜಗತ್ತಿನ ಅತೀ ಉದ್ದದ ನದಿಗಳಲ್ಲಿ ಒಂದಾಗಿದೆ. ಈ ನದಿಯ ಒಟ್ಟು ಜಲಾನಯನ ಪ್ರದೇಶ 4.50 ಲಕ್ಷ ಚದರ ಮೈಲಿಯಾಗಿದ್ದು ಇದರಲ್ಲಿ 1.75 ಲಕ್ಷ ಚದರ ಮೈಲಿ ಹಿಮಾಲಯ ಹಿಂದು ಕುಶ್ ಹಾಗೂ ಕಾರಕೋರಂ ಪರ್ವತ ಶ್ರೇಣಿಗಳ ತಪ್ಪಲಲ್ಲಿ ಇದ್ದರೆ, ಉಳಿದ ಪ್ರದೇಶ ಪಾಕಿಸ್ತಾನದ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿದೆ. ನದಿಯ ವಾರ್ಷಿಕ ಹರಿವು ನೈಲ್ ನದಿಯ ಎರಡು ಪಟ್ಟು ಅಂದರೆ 243 ಘನ ಕಿ.ಮೀ. ಆಗಿದೆ. ಸಿಂಧೂ ನದಿಯ ಒಟ್ಟು ಹಿನ್ನೀರಿನ ಪ್ರದೇಶವು 374700 ಚದರ ಮೈಲಿಯಾಗಿದ್ದು, ಇದರಲ್ಲಿ ಸುಮಾರು 204.300 ಚದರ ಮೈಲಿ (ಶೇ. 56) ಪಾಕ್ ಪ್ರದೇಶದಲ್ಲಿದೆ. ಸಿಂಧೂ ಮತ್ತದರ ಉಪನದಿಗಳು ವಾರ್ಷಿಕ ಸರಾಸರಿ ಸುಮಾರು 154 ಮಿಲಿಯನ್ ಎಕರೆ (ಘನ) ಅಡಿ ನೀರನ್ನು ತರುತ್ತವೆ. ಇದರಲ್ಲಿ ಪಶ್ಚಿಮದ ಮೂರು ನದಿಗಳಾದ ಸಿಂಧೂ, ಝೀಲಂ ಮತ್ತು ಚಿನಾಬ್ ನದಿಗಳು 144.91 ಮಿಲಿಯನ್ ಎಕರೆ (ಘನ) ಅಡಿ ಮತ್ತು 9.14 ಮಿಲಿಯನ್ ಎಕರೆ (ಘನ) ಅಡಿ ನೀರು ಪೂರ್ವದ ನದಿಗಳಾದ ಸಟ್ಲೇಜ್, ಬಿಯಾಸ್ ಮತ್ತು ರಾವಿ ನದಿಗಳಿಂದ ಬರುವುದು. ಇದರಲ್ಲಿ 104.73 ಮಿಲಿಯನ್ ಎಕರೆ ಘನ ಅಡಿ ನೀರಾವರಿ ಉದ್ದೇಶಗಳಿಗಾಗಿ ತಿರುಗಿಸಲಾಗಿದೆ. 39.94 ಮಿ.ಎ.ಘನ ಅಡಿ ಸಮುದ್ರಕ್ಕೆ ಸೇರುವುದು ಮತ್ತು 9.9 ಮಿ.ಎ.(ಘ) ಅಡಿ ಆವಿಯಾಗುವಿಕೆ, ಬಾಷ್ಪೀಕರಣ ಸೇರಿದಂತೆ ಪ್ರಾಕೃತಿಕವಾಗಿ ನಷ್ಟವಾಗುವುದು. ಅಪಾರ ಜಲರಾಶಿ ಹೊಂದಿರುವ ಈ ನದಿಗಳ ನೀರು ಎರಡೂ ದೇಶಗಳಿಗೆ ವಿಶೇಷವಾಗಿ ಪಾಕಿಸ್ತಾನದ ಜೀವನದಿಗಳಾಗಿವೆ.

#### ಸಿಂಧೂ ನದಿ ನೀರು ಹಂಚಿಕೆ ಒಪ್ಪಂದ (ಐಡಬ್ಲ್ಯುಟಿ)

ದೇಶ ವಿಭಜನೆಯೊಂದಿಗೆ ಭಾರತದಲ್ಲಿ ಹುಟ್ಟಿ ಪಾಕಿಸ್ತಾನದಲ್ಲಿ ಹರಿದು ಅರಬ್ ಸಾಗರ ಸೇರುತ್ತಿದ್ದ ನದಿಗಳ ನೀರಿನ ನ್ಯಾಯಬದ್ಧ ಹಂಚಿಕೆಯಾಗಬೇಕಿತ್ತು. ಅದಕ್ಕಾಗಿ ವಿಶ್ವ ಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಎರಡೂ ದೇಶಗಳ ಪರಿಣಿತರ ಹಾಗೂ ನಾಯಕರ ಮಧ್ಯೆ ಒಂಬತ್ತು ವರ್ಷಗಳ ಕಾಲ ಸುದೀರ್ಘ ಮಾತುಕತೆಗಳ ನಂತರ ಒಪ್ಪಂದ ಸೂತ್ರ ರೂಪಿಸಲಾಯಿತು. ದಿ.19.9.1960 ರಲ್ಲಿ ಪಾಕ್‌ನ ಆಗಿನ ಅಧ್ಯಕ್ಷರಾಗಿದ್ದ ಅಯೂಬ್ ಖಾನ್ ಮತ್ತು ಭಾರತದ ಪ್ರಧಾನಿ ನೆಹರೂರವರು ಕರಾಚಿಯಲ್ಲಿ ಸಭೆ ಸೇರಿ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದಕ್ಕೆ ಸಹಿ ಹಾಕಿದರು. ಈ ಐತಿಹಾಸಿಕ ಒಪ್ಪಂದಕ್ಕೆ ಮಧ್ಯಸ್ಥಿಕೆ ವಹಿಸಿದ್ದ ವಿಶ್ವ ಬ್ಯಾಂಕ್ ಪರವಾಗಿ ಡಬ್ಲ್ಯುಎಬಿ ಇಲಿಫ್ ಸಹಿ ಹಾಕಿದ್ದರು. ಇದಕ್ಕೆ ಸಿಂಧೂ ನದಿ ನೀರಿನ ಒಪ್ಪಂದ (ಐಡಬ್ಲ್ಯುಟಿ) ಎನ್ನಲಾಯಿತು.



> "ವಿಶ್ವಬ್ಯಾಂಕ್‌ನ ಹಿರಿಯ ನೀರಾವರಿ ತಜ್ಞರಾಗಿದ್ದ ಹಾಗೂ ಪ್ರಸ್ತುತ ಹಾರ್ವರ್ಡ್ ವಿವಿಯಲ್ಲಿ ಪ್ರಾಧ್ಯಾಪಕರಾಗಿರುವ ಭಾರತ ಉಪಖಂಡದ ನೀರಾವರಿ ತಜ್ಞ ಜಾನ್ ಬ್ರಿಸ್‌ಕೋಸ್ ಪಾಕ್ ಆತಂಕವನ್ನು ಈ ರೀತಿ ವಿವರಿಸುತ್ತಾರೆ "ಸಿಂಧೂ ನದಿ ನೀರಿನ ವಿಚಾರದಲ್ಲಿ ಪಾಕ್‌ಗೆ ಬೇರೆ ಯಾವ ಮಾರ್ಗಗಳು ಉಳಿದಿಲ್ಲ. ಪ್ರಾದೇಶಿಕವಾಗಿ ನದಿ ಪಾತ್ರದ ಮೇಲ್ಭಾಗದಲ್ಲಿರುವ ಭಾರತವು ಈ ವಿಚಾರದಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿದೆ.

ಒಪ್ಪಂದದನ್ವಯ ಪಶ್ಚಿಮದಲ್ಲಿ ಹರಿಯುವ ಮೂರು ನದಿಗಳಾದ ಸಿಂಧೂ, ಝೀಲಂ ಮತ್ತು ಚಿನಾಬ್‌ಗಳ ಮೇಲೆ ಪಾಕ್‌ಗೆ ಹೆಚ್ಚಿನ ಹಕ್ಕು ನೀಡಿದರೂ ಈ ನದಿಗಳ ಮೂಲ ಭಾರತದಲ್ಲಿರುವ ಕಾರಣ ಶೇ.20 ರಷ್ಟು ನೀರನ್ನು ಭಾರತಕ್ಕೆ ಬಳಸುವ ಹಕ್ಕು ನೀಡಲಾಯಿತು. ಈ ಪ್ರಕಾರ ಭಾರತಕ್ಕೆ 13.32 ಲಕ್ಷ ಎಕರೆ ನೀರಾವರಿಗೆ ಹಾಗೂ 18600 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಅವಕಾಶ ಭಾರತಕ್ಕಿದೆ. ಆದರೆ ಹಿಂದೆ ಆಳಿದವರು ಪಾಕ್ ಮೇಲಿನ ಮೋಹದಿಂದ ಕೇವಲ 8 ಲಕ್ಷ ಎಕರೆ ಮಾತ್ರ ನೀರಾವರಿಗೆ ಒಳಪಡಿಸಿ, 3034 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗುತ್ತಿದೆ. ಪೂರ್ವದಿಂದ ಹರಿಯುವ ಮೂರು ನದಿಗಳಾದ ಸಟ್ಲೇಜ್, ಬಿಯಾಸ್ ಮತ್ತು ರಾವಿ ಪಾಕ್ ಪ್ರದೇಶ ಪ್ರವೇಶಿಸುವ ಮೊದಲ ಭಾಗದ ನೀರನ್ನು ಪೂರ್ಣವಾಗಿ ಭಾರತದ ಉಪಯೋಗಕ್ಕೆ ಮೀಸಲಿಡಲಾಗಿದೆ. ಆದರೂ ಪಶ್ಚಿಮದ ನದಿಗಳ ನೀರಿನ ಬಳಕೆಗೆ ಕಾಲುವೆಗಳನ್ನು ನಿರ್ಮಿಸಲು ಅಂದಾಜು ಅವಧಿ ಹತ್ತು ವರ್ಷಗಳ ಕಾಲ ವಿಶೇಷ ನಿಯಮದಡಿ ಭಾರತಕ್ಕೆ ಮಂಜೂರಾದ ನದಿಗಳ ನೀರನ್ನು ಪಾಕ್‌ಗೆ ಪೂರೈಸಬೇಕಾಯಿತು ಮಾತ್ರವಲ್ಲ ಪೂರ್ವ ನದಿಗಳ ನೀರಿನ ನಷ್ಟಕ್ಕೆ ಒಮ್ಮೆ ಭಾರತದಿಂದ ಹಣಕಾಸಿನ ಪರಿಹಾರವನ್ನು ನೀಡಲಾಯಿತು. ಹತ್ತು ವರ್ಷಗಳ ಬಳಿಕ ಮೇಲಿನ ನಿಷೇಧ ತೆರವಾದ ಬಳಿಕ ಮಾರ್ಚ್ 31, 1970 ರಿಂದ ಮೂರು ನದಿಗಳ ನೀರಿನ ಬಳಕೆ ಮೇಲಿನ ಪೂರ್ಣ ಹಕ್ಕುಗಳನ್ನು ಭಾರತ ಮರಳಿ ಪಡೆಯಿತು. ಈ ಒಪ್ಪಂದ ನೀರಿನ ಹಂಚಿಕೆಗೆ ಬದಲಿಗೆ ನದಿಗಳ ಹಂಚಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡಿತು. ಒಪ್ಪಂದದ ಸಮರ್ಪಕ ಅನುಷ್ಠಾನಕ್ಕೆ ಶಾಶ್ವತ ಸಿಂಧೂ ಆಯೋಗ (Permanent Indus Commission) ರಚಿಸಿದ್ದು ಇದರಲ್ಲಿ ಎರಡೂ ದೇಶಗಳ ಆಯುಕ್ತರು ಇದ್ದಾರೆ.

#### ಕಿಶನ್‌ಗಂಗಾ (ನೀಲಂ ನದಿ) ಮತ್ತು ರಾಟಲ್ ಜಲ ವಿದ್ಯುತ್ ಯೋಜನೆ

ಭಾರತವು ಝೀಲಂ ಮತ್ತು ಚಿನಾಬ್ ನದಿ ವ್ಯಾಪ್ತಿಯ ಕಿಶನ್ ಗಂಗಾ ನದಿಯಲ್ಲಿ 330 ಮೆ. ವ್ಯಾ. ಮತ್ತು ರಾಟಲ್‌ನಲ್ಲಿ 850 ಮೆ.ವ್ಯಾ. ಸಾಮರ್ಥ್ಯದ ಜಲವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲು ನಿರ್ಧರಿಸಿದ್ದು, ಪಾಕ್ ಈ ಯೋಜನೆಗಳ ಅನುಷ್ಠಾನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಇದರಲ್ಲಿ ರಾಟಲ್ ಯೋಜನೆಯ ಯೋಜಿತ ಶೇಖರಣಾ ಸಾಮರ್ಥ್ಯ 24 ದಶಲಕ್ಷ ಘನ ಮೀಟರ್‌ಗಳಿಂದ ಎಂಟು ದಶಲಕ್ಷ ಘನ ಮೀಟರ್‌ಗಳಿಗೆ ಇಳಿಸಬೇಕೆಂದು ಪಾಕ್ ಬಯಸುತ್ತದೆ. ಭಾರತವು ಪೂರ್ವದ ನದಿಗಳಲ್ಲಿನ ಪ್ರಸ್ತುತ ಪಾಕಿಸ್ತಾನಕ್ಕೆ ಹರಿದು ಹೋಗುತ್ತಿರುವ ತನ್ನ ಬಳಕೆ ಹಕ್ಕಿನ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿದಲ್ಲಿ ಜಮ್ಮು–ಕಾಶ್ಮೀರ ಹಾಗೂ ಪೂರ್ವೋತ್ತರದ ಕೆಲವು ಪ್ರದೇಶಗಳು ಸಮೃದ್ಧವಾಗಲಿವೆ. ಆದರೆ ಈ ನದಿಗಳ ನೀರನ್ನೇ ಆಶ್ರಯಿಸಿರುವ ಪಾಕಿಸ್ತಾನದ ಲಕ್ಷಾಂತರ ಎಕರೆ ಕೃಷಿ ಭೂಮಿಗೆ ಹೊಡೆತ ಬೀಳುವುದನ್ನು ಅರ್ಥ ಮಾಡಿಕೊಂಡಿರುವ ಪಾಕ್ ಜನತೆ ಹಾಗೂ ರಾಜಕಾರಣಿಗಳು ಕಂಗಾಲಾಗಿದ್ದಾರೆ. ಈಗಾಗಲೇ ಆರ್ಥಿಕ ಸಂಕಷ್ಟದಿಂದ ಹತಾಶರಾಗಿರುವ ಪಾಕಿಗಳಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಕಾರಣದಿಂದ ಈ ಎರಡು ಯೋಜನೆಗಳ ಬಗ್ಗೆ ತನ್ನ ತಾಂತ್ರಿಕ ಆಕ್ಷೇಪಗಳ ವಿಮರ್ಶೆಗಾಗಿ ತಟಸ್ಥ ತಜ್ಞರನ್ನು ನಿಯುಕ್ತಿ ಮಾಡುವಂತೆ ಪಾಕಿಸ್ತಾನವು 2015 ರಲ್ಲಿ ಕೋರಿತ್ತು. ಆದರೆ 2016 ರಲ್ಲಿ ಪಾಕ್ ತನ್ನ ಕೋರಿಕೆಯನ್ನು ಏಕಪಕ್ಷೀಯವಾಗಿ ಹಿಂಪಡೆದು ಈ ವಿಚಾರದಲ್ಲಿ ಮಧ್ಯಸ್ಥಿಕೆ ಮುಖೇನ ನ್ಯಾಯಿಕ ವ್ಯವಸ್ಥೆಯ ಮೊರೆ ಹೋಗುವುದಾಗಿ ತಿಳಿಸಿತ್ತು. ಆದರೆ ಪಾಕ್‌ನ ಈ ರೀತಿಯ ಏಕಪಕ್ಷೀಯ ವರ್ತನೆ ಒಪ್ಪಂದದ ವಿಧಿಗಳಿಗೆ ತದ್ವಿರುದ್ಧವಾಗಿದ್ದು, ವಿವಾದಗಳನ್ನು ಶ್ರೇಷ್ಠ ಮಟ್ಟದ ನ್ಯಾಯ ತೀರ್ಮಾನ ವ್ಯವಸ್ಥೆಯಡಿಯಲ್ಲೇ ತೀರ್ಮಾನವಾಗಬೇಕೆಂದು ಒಪ್ಪಂದ ವಿಧಿ ಹೇಳುತ್ತದೆ ಎಂಬುದು ಭಾರತದ ವಾದವಾಗಿದೆ. ಈ ಎರಡೂ ಯೋಜನೆಗಳಲ್ಲಿ ಒಪ್ಪಂದದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಲಾಗಿತ್ತು ಎಂದೂ ಭಾರತ ಪ್ರತಿಪಾದಿಸುತ್ತಿದೆ. ಸರಕಾರಿ ಮೂಲಗಳ ಪ್ರಕಾರ ವಿಶ್ವ ಬ್ಯಾಂಕ್ ಪಾಕ್ ಪರ ನಿಲುವು ತೆಗೆದುಕೊಳ್ಳುತ್ತಿದೆ ಎಂದು ನವದೆಹಲಿ ಆರೋಪಿಸಿದೆ. ಐಡಬ್ಲ್ಯುಟಿ ನಿಯಮಾವಳಿಗಳ ಪ್ರಕಾರ ಭಿನ್ನಾಭಿಪ್ರಾಯಗಳನ್ನು ತಟಸ್ಥ ತಜ್ಞರು ತನಿಖೆ ಮಾಡಬೇಕೆಂದು ಭಾರತದ ಒತ್ತಾಯವನ್ನು ವಿಶ್ವಬ್ಯಾಂಕ್ ನಿರಾಕರಿಸಿತು. ಆನಂತರ ಭಾರತವು ವಿಶ್ವಬ್ಯಾಂಕ್ ವಿರುದ್ಧ ಅತ್ಯಂತ ಕಠಿಣ ನಿಲುವು ತಾಳಿದೆ. ಇದರ ಪರಿಣಾಮ ಎಂಬಂತೆ ಕಿಶನ್‌ಗಂಗಾ ಯೋಜನೆಯಿಂದ ಪಾಕ್ ಪ್ರವೇಶಿಸುವ ನೀರಿನ ಪ್ರಮಾಣ ಶೇ.40 ರಷ್ಟು ಕಡಿಮೆಯಾಗುತ್ತಿದೆ ಎಂಬ ಪಾಕ್ ಆಕ್ಷೇಪಗಳನ್ನು ತಳ್ಳಿ ಹಾಕಿ ವಿಶ್ವಬ್ಯಾಂಕ್ ಭಾರತಕ್ಕೆ ಜಲವಿದ್ಯುತ್ ಘಟಕಗಳನ್ನು ನಿರ್ಮಿಸಲು ಒಪ್ಪಿಗೆ ನೀಡಿದ್ದು, ಈ ನಿರ್ಧಾರ ಭಾರತಕ್ಕೆ ಮಹತ್ವದ್ದಾಗಿದೆ.

#### ಉರಿ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆ

1965, 1971 ಮತ್ತು 1999ರ ಮೂರು ಯುದ್ಧಗಳು ಸಿಂಧೂ ನದಿ ಒಪ್ಪಂದದ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮ ಬೀರದೇ ಮುಂದುವರಿದಿತ್ತು. ಆದರೆ 18.9.2016 ರಂದು ಕಾಶ್ಮೀರದ ಉರಿ ಸೇನಾ ಶಿಬಿರದ ಮೇಲೆ ಪಾಕ್ ಬೆಂಬಲಿತ ಉಗ್ರರು ನಡೆಸಿದ ಪೈಶಾಚಿಕ ದಾಳಿ ಸಿಂಧೂ ಒಪ್ಪಂದದ ಮೇಲೆ ಪರಿಣಾಮ ಬೀರುವ ಹಂತಕ್ಕೆ ಬಂದಿದೆ. ಅದುವರೆಗೆ ಉಗ್ರರು ಮನಸ್ಸೋ ಇಚ್ಛೆ ರಕ್ತಪಾತ ಮಾಡಿದರೂ ರಾಜತಾಂತ್ರಿಕ ಮಟ್ಟದಲ್ಲಿ ಆರೋಪ–ಪ್ರತ್ಯಾರೋಪಗಳಿಗೆ ಸೀಮಿತವಾಗುತ್ತಿತ್ತು. ಕೆಲಕಾಲ ವಾಣಿಜ್ಯ ವ್ಯವಹಾರಗಳ ಮೇಲೆ ಅಂಕಿತ ಪರಿಣಾಮ ಬೀರುತ್ತಿತ್ತು. ಆದರೆ ಭಾರತವು ಈಗ ನದಿಗಳ ನೀರನ್ನೇ ಪಾಕ್‌ನ್ನು ಮಣಿಸಲು ಅಸ್ತ್ರವಾಗಿ ಬಳಸುವ ಮಾತುಗಳು ಕೇಳಿ ಬರುತ್ತಿವೆ. ಇದಕ್ಕೆ ಸಾಕ್ಷಿಯೆಂಬಂತೆ ಉರಿ ಕಾಂಡದ ನಂತರ 28.9.2016 ರಂದು ಪ್ರಧಾನಿ ಮೋದಿಯವರು ನೀರು ಮತ್ತು ರಕ್ತ ಜತೆಯಾಗಿ ಹರಿಯದು ಎನ್ನುವ ಮೂಲಕ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದ ಪುನರ್ ಪರಿಶೀಲನೆಗೆ ಪ್ರಧಾನಿ ಮೋದಿ ಪ್ರಸ್ತಾಪಿಸಿದ್ದರು. ಇದರಿಂದ ಆತಂಕಗೊಂಡಿದ್ದ ಅಂದು ಪ್ರಧಾನಿಯಾಗಿದ್ದ ನವಾಜ್ ಷರೀಫರ ವಿದೇಶ ವ್ಯವಹಾರಗಳ ಸಲಹೆಗಾರರಾಗಿದ್ದ ಸರ್ತಾಜ್ ಅಜೀಜ್‌ರು ಒಂದು ವೇಳೆ ಭಾರತ ಸಿಂಧೂ ನದಿ ಒಪ್ಪಂದ ರದ್ದುಪಡಿಸಿದರೆ ಆ ಕೃತ್ಯವು ಪಾಕ್ ವಿರುದ್ಧ ಯುದ್ಧದ ಕೃತ್ಯವಾಗುವುದೆಂದು ಬೆದರಿಕೆ ಹಾಕಿದ್ದರು.

ಪುಲ್ವಾಮಾ ದಾಳಿಯ ನಂತರ ಉತ್ತರ ಪ್ರದೇಶದ ಬಾಗಪತ್‌ನಲ್ಲಿ ದಿ.20.2.2019 ರಂದು ಕೇಂದ್ರ ಸಚಿವರಾದ ನಿತಿನ್ ಗಡ್ಕರಿಯವರು ತಮ್ಮ ಭಾಷಣದಲ್ಲಿ ದುಷ್ಟ ಪಾಕ್‌ಗೆ ಬುದ್ಧಿ ಕಲಿಸಲು ಭಾರತ ನಿಶ್ಚಯಿಸಿದ್ದು ಪಾಕ್‌ಗೆ ಹರಿಯುವ ಮೂರು ನದಿಗಳ ನೀರನ್ನು ಯಮುನಾ ನದಿಗೆ ಹರಿಯುವಂತೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದರು.

#### ಪಾಕಿಸ್ತಾನಕ್ಕೆ ನೋಟೀಸ್

ಪಾಕಿಸ್ತಾನವು ಸಿಂಧೂ ನದಿ ಜಲಬಳಕೆ ಒಪ್ಪಂದವನ್ನು ಉಲ್ಲಂಘಿಸಿದೆ. ಈ ತಪ್ಪನ್ನು ಸರಿಪಡಿಸಲು ಮುಂದಿನ 90 ದಿನಗಳೊಳಗೆ ಪಾಕಿಸ್ತಾನವು ಭಾರತದ ಜತೆ ಅಂತರ ಸರಕಾರಿ ಮಾತುಕತೆಗಳಿಗೆ ಬರಬೇಕು ಎಂದು ಭಾರತವು ನೋಟೀಸು ನೀಡಿದೆ. ಸಿಂಧೂ ನದಿಗೆ ಸಂಬಂಧಪಟ್ಟ ಆಯುಕ್ತರ ಮುಖಾಂತರ ಜನವರಿ 25 ರಂದು ಪಾಕ್‌ಗೆ ನೋಟೀಸು ಕಳುಹಿಸಲಾಗಿದೆ ಎರಡು ಜಲ ವಿದ್ಯುತ್ ಯೋಜನೆಗಳಿಗೆ ಸಂಬಂಧಿತ ಭಿನ್ನಾಭಿಪ್ರಾಯಗಳಿಗೆ ಪರಿಹಾರ ಕಲ್ಪಿಸುವುದು ಕೂಡಾ ಭಾರತದ ಪ್ರಸ್ತುತ ನೋಟೀಸಿನ ಮತ್ತೊಂದು ಆಶಯವಾಗಿದೆ. ಪಾಕಿಸ್ತಾನ ಈ ನೋಟೀಸಿಗೆ ಉತ್ತರಿಸದಿದ್ದಲ್ಲಿ ಸಕಾರಾತ್ಮಕವಾಗಿ ಸ್ಪಂದಿಸದಿದ್ದಲ್ಲಿ ಭಾರತವು ಏಕಪಕ್ಷೀಯವಾಗಿ ಕ್ರಮಗಳನ್ನು ಕೈಗೊಳ್ಳಲಿದೆ. ಹೀಗಾದಲ್ಲಿ ಪಾಕಿಸ್ತಾನದ ಪರಿಸ್ಥಿತಿ ಇನ್ನೂ ಚಿಂತಾಜನಕವಾಗಲಿದೆ.

ಒಂದು ದೇಶವನ್ನು ನಾಶಪಡಿಸಲು ಯುದ್ಧವನ್ನೇ ಮಾಡಬೇಕಾಗಿಲ್ಲ. ಆ ದೇಶದ ಆರ್ಥಿಕತೆಯನ್ನು ನಾಶಪಡಿಸಿದರು ಸಾಕಾಗುತ್ತದೆ. ದೆಹಲಿಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಪಾಕಿಸ್ತಾನ ಬಲಿಷ್ಠವಾಗಿತ್ತು. ಕಾಂಗ್ರೆಸ್ 2014ರಲ್ಲಿ ಅಧಿಕಾರ ಕಳೆದುಕೊಂಡಾಗ ಪಾಕಿಸ್ತಾನ ದುರ್ಬಲವಾಯಿತು. 2016 ರಲ್ಲಿ ನೋಟ್ ಬ್ಯಾನ್ ಮಾಡಲಾಯಿತು. ಇದಾದ ಏಳು ವರ್ಷಗಳ ನಂತರ ಪಾಕಿಸ್ತಾನವೀಗ ಅಕ್ಷರಶಃ ದಿವಾಳಿಯಾಗಿದೆ. ಹಿಂದೊಮ್ಮೆ ಮೋದಿ ಹೇಳಿದಂತೆ ಪಾಕಿಸ್ತಾನವೀಗ ಭಿಕ್ಷಾಪಾತ್ರೆ ಹಿಡಿದಿದೆ. ಮೂರು ನದಿಗಳ ನೀರು ತಡೆದಲ್ಲಿ ಪಾಕಿಸ್ತಾನ ಸರ್ವನಾಶವಾಗಲಿದೆ.

# ಕೆಎಎಸ್ ಅಧಿಕಾರಿಗಳ ವಿಚಾರವಾಗಿ ಸಂಸದ ಪ್ರತಾಪ ಸಿಂಹ ಹೇಳಿಕೆಗೆ ಕೆಎಎಸ್ ಅಧಿಕಾರಿಗಳ ಸಂಘ ಖಂಡನೆ

ಮೈಸೂರು, ಫೆ.17(ಎಸ್‌ಬಿಡಿ)– ಕೆಎಎಸ್ ಅಧಿಕಾರಿಗಳ ಬಗ್ಗೆ ಹಗುರವಾಗಿ ಮಾತನಾಡಿರುವ ಸಂಸದ ಪ್ರತಾಪ್ ಸಿಂಹ ಅವರು ಬೇಷರತ್ತಾಗಿ ತಮ್ಮ ಹೇಳಿಕೆ ಹಿಂಪಡೆಯಬೇಕು ಎಂದು ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ ಆಗ್ರಹಿಸಿದೆ.

ಮೈಸೂರಿನ ಮಾನಸಗಂಗೋತ್ರಿಯಲ್ಲಿ ಮೊನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡುವ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ ಅವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಕೆಎಎಸ್ ಅಧಿಕಾರಿ ವಿ.ಆರ್.ಶೈಲಜಾ ವಿರುದ್ಧ ಹಗುರವಾಗಿ ಮಾತನಾಡಿದ್ದಾರೆ. ಆ ವೇಳೆ ಕರ್ನಾಟಕ ಆಡಳಿತ ಸೇವೆಯನ್ನು ಅನಾವಶ್ಯಕವಾಗಿ ಎಳೆದು ತಂದು ಕೆಎಎಸ್ ಅಧಿಕಾರಿಗಳೆಲ್ಲಾ ಕನಿಷ್ಟ ಎನ್ನುವಂತೆ ದೂಷಿಸಿದ್ದಾರೆ. ವಿ.ಆರ್.ಶೈಲಜಾ ಅವರು ಓರ್ವ ದಕ್ಷ, ಪ್ರಾಮಾಣಿಕ ಹಿರಿಯ ಕೆಎಎಸ್ ಅಧಿಕಾರಿ. ಇವರ ಕಾರ್ಯಶೈಲಿಗೆ ಸಂಬಂಧಿಸಿದಂತೆ ವಿಚಾರಿಸುವ ಅಗತ್ಯವಿದ್ದರೆ ಅದಕ್ಕೆ ಸೂಕ್ತ ವಿಧಾನಗಳಿವೆ. ಹಾಗೆ ಮಾಡದೆ ಜವಾಬ್ದಾರಿ ಸೇವೆಯಲ್ಲಿರುವ ಸಂಸದರು ಅತ್ಯಂತ ಹಗುರವಾಗಿ ಮಾತನಾಡಿದ್ದು ಶೋಭೆ ತರುವ ಸಂಗತಿಯಲ್ಲ ಎಂದು ಖಂಡಿಸಲಾಗಿದೆ.


ಕರ್ನಾಟಕ ಆಡಳಿತ ಸೇವೆ(ಕೆಎಎಸ್) ಶತಮಾನ ಪೂರೈಸಿರುವ ದೇಶದ ಏಕೈಕ ರಾಜ್ಯ ಆಡಳಿತ ಸೇವೆಯಾಗಿದ್ದು ತನ್ನದೇ ಆದ ಭವ್ಯ ಇತಿಹಾಸ ಹೊಂದಿದೆ. ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಕೆಎಎಸ್ ಅಧಿಕಾರಿಗಳ ಸೇವೆಯ ಬಗ್ಗೆ ರಾಜ್ಯ ಮಾತ್ರವಲ್ಲದೆ ರಾಷ್ಟ್ರದೆಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ಸರ್‌ಎಂ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ನವರತ್ನ ರಾಜಾರಾಂ ಅವರಂತಹ ಮಹನೀಯರಿದ್ದ ಮೈಸೂರು ಸಿವಿಲ್ ಸರ್ವಿಸ್‌ನಿಂದ ಪ್ರಾರಂಭವಾದ ಸೇವೆಯಿದು. ಕನ್ನಡ ನಾಡು, ನುಡಿ ಮತ್ತು ಅಭಿವೃದ್ಧಿ ವಿಚಾರದಲ್ಲಿ ಈವರೆಗೂ ಕೆಎಎಸ್ ಅಧಿಕಾರಿಗಳು ಅತ್ಯಂತ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ಮೇಲ್ಪಂಕ್ತಿಯನ್ನು ಮುಂದುವರೆಸಿದ್ದೇವೆ. ಪತ್ರಕರ್ತರಾಗಿ ಪ್ರಸ್ತುತ ಜವಾಬ್ದಾರಿಯುತ ಜನಪ್ರತಿನಿಧಿಯಾಗಿರುವ ಪ್ರತಾಪ್ ಸಿಂಹ ಅವರು, ಕರ್ನಾಟಕ ಆಡಳಿತ ಸೇವೆ ಮತ್ತು ಈ ಸೇವೆಯ ಅಧಿಕಾರಿಗಳ ಬಗ್ಗೆ ತರವಲ್ಲದ ರೀತಿಯಲ್ಲಿ ಮಾತನಾಡಿರುವುದನ್ನು ತೀವ್ರವಾಗಿ ಖಂಡಿಸಿ, ಅವರು ಬೇಷರತ್ತಾಗಿ ತಮ್ಮ ಹೇಳಿಕೆ ಹಿಂಪಡೆಯುವಂತೆ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ ಒತ್ತಾಯಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಡಾ.ರವಿ ಎಂ. ತಿರ್ಲಾಪೂರ ಹಾಗೂ ಕಾರ್ಯದರ್ಶಿ ಡಾ.ಬಿ.ಆರ್.ಹರೀಶ್‌ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಹಿರಂಗ ಹರಾಜು

ಮೈಸೂರು, ಫೆ.17–ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ವಲಯ ಕಛೇರಿ ಹಾಗೂ ಅಧೀನದ ಎಸಿಬಿ ಪೊಲೀಸ್ ಠಾಣೆಗಳಿಗೆ ಸಂಬಂಧಿಸಿದ ಇಲಾಖಾ ವಾಹನಗಳ ಹಳೆಯ ನಿರುಪಯುಕ್ತ 68 ಸಂಖ್ಯೆಯ ಟೈರ್‌ಗಳು ಹಾಗೂ 01 ಸಂಖ್ಯೆಯ ರೇಡಿಯೇಟರ್‌ಗಳನ್ನು ಬಹಿರಂಗ ಹರಾಜು ಮಾಡುವ ಮೂಲಕ ವಿಲೇವಾರಿ ಮಾಡಲು ಫೆ.22 ರಂದು ಬೆಳಗ್ಗೆ 11 ಘಂಟೆಗೆ ದಕ್ಷಿಣ ವಲಯದ ಪೊಲೀಸ್ ಅಧೀಕ್ಷಕರ ಕಛೇರಿಯ ಆವರಣದಲ್ಲಿ ಸಾರ್ವಜನಿಕ ಬಹಿರಂಗ ಹರಾಜನ್ನು ಏರ್ಪಡಿಸಲಾಗಿದೆ.

ಹಳೆಯ ನಿರುಪಯುಕ್ತ 68 ಟೈರ್‌ಗಳು ಹಾಗೂ 01 ರೇಡಿಯೇಟರ್ ಅನ್ನು ಗರಿಷ್ಟ ಮೊತ್ತಕ್ಕೆ ವಿಲೇವಾರಿ ಮಾಡಲು ಹರಾಜನ್ನು ಏರ್ಪಡಿಸಲಾಗಿದೆ. ಆಸಕ್ತಿ ಇರುವ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸಿ ಅವುಗಳನ್ನು ಪಡೆಯಬಹುದಾಗಿದೆ ಎಂದು ನಗರದ ದಕ್ಷಿಣ ವಲಯ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*












ಶುಭ ಕೋರುವವರು :
ದಿಲೀಪ್
ಮಾಲೀಕರು ಬೆಸ್ಟ್ ಚಿಕನ್













ಸಂಪೂರ್ಣ ಹದಗೆಟ್ಟ ಹೆಬ್ಬೆಟ್ಟಗೇರಿ-ದೇವಸ್ತೂರು ಗ್ರಾಮಗಳ ರಸ್ತೆ

# ಗ್ರಾಮಸ್ಥರಿಂದ ರಸ್ತೆತಡೆ, ಸಂಚಾರ ಅಸ್ತವ್ಯಸ್ತ, ಪರದಾಟ



ಮಡಿಕೇರಿ, ಫೆ.17– ಹೆಬ್ಬೆಟ್ಟಗೇರಿ–ದೇವಸ್ತೂರು ಗ್ರಾಮಗಳಿಗೆ ತೆರಳುವ ರಸ್ತೆ ಸಂಪೂರ್ಣ ಗುಂಡಿ ಬಿದ್ದಿದ್ದು, ವಾಹನ ಸಂಚಾರ ದುಸ್ತರವಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ರಸ್ತೆ ದುರಸ್ತಿಗೆ ಒತ್ತಾಯಿಸಿ ಗ್ರಾಮಸ್ಥರು ರಸ್ತೆ ತಡೆ ಪ್ರತಿಭಟನೆ ನಡೆಸಿದರು.

ನಂದಿಮೊಟ್ಟೆ ಜಂಕ್ಷನ್ ಬಳಿ ಜಮಾಯಿಸಿದ ಗ್ರಾಮಸ್ಥರು ಜಿಲ್ಲಾಡಳಿತ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಪ್ರತಿಭಟನಾಕಾರರು ಪಟ್ಟುಹಿಡಿದರು. ರಸ್ತೆ ತಡೆ ನಡೆಸಿದ ಪರಿಣಾಮ ಆರ್‌ಟಿಓ, ಅಬ್ಬಿಫಾಲ್ಸ್, ಮಾಂದಲ್‌ಪಟ್ಟಿ ರಸ್ತೆಯಲ್ಲಿ ವಾಹನ ಸಂಚಾರ ಕೆಲಕಾಲ ಸ್ಥಗಿತಗೊಂಡಿತ್ತು. ಇದರಿಂದ ಸಾರ್ವಜನಿಕರು ಮತ್ತು ವಾಹನ ಸವಾರರು ಪರದಾಡಬೇಕಾಯಿತು.

**ವಾಹನ ಸಂಚಾರ ದುಸ್ತರ:** ಹೆಬ್ಬೆಟ್ಟಗೇರಿ ಗ್ರಾಮಸ್ಥರಾದ ರಮೇಶ್ ಮಾತನಾಡಿ, ನಂದಿಮೊಟ್ಟೆ ಜಂಕ್ಷನ್‌ನಿಂದ ಹೆಬ್ಬೆಟ್ಟಗೇರಿ ಹಾಗೂ ದೇವಸ್ತೂರು ಗ್ರಾಮಗಳಿಗೆ ತೆರಳುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಈ ಗ್ರಾಮಗಳಲ್ಲಿ ಶಾಲೆ ಮುಚ್ಚಲ್ಪಟ್ಟಿರುವುದರಿಂದ ಹಾಗೂ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಕೂಡ ಇಲ್ಲದಿರುವುದರಿಂದ ಬಹುತೇಕ ಮಂದಿ ಖಾಸಗಿ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಆದರೆ, ರಸ್ತೆ ಹದಗಟ್ಟಿರುವುದರಿಂದ ಆಟೋ ಹಾಗೂ ಖಾಸಗಿ ವಾಹನಗಳು ಈ ರಸ್ತೆಯಲ್ಲಿ ಬರಲು ಹಿಂದೇಟು ಹಾಕುತ್ತಿದ್ದು, ಬರುವ ವಾಹನಗಳಿಗೆ ದುಬಾರಿ ಬಾಡಿಗೆ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಅಧಿಕಾರಿ ತರಾಟೆಗೆ:** ಪ್ರತಿಭಟನೆಯ ಮಾಹಿತಿ ಅರಿತು ಸ್ಥಳಕ್ಕಾಗಮಿಸಿದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಯುವರಾಜು, ಈ ರಸ್ತೆ ಹಿಂದೆ ಜಿ.ಪಂ. ವ್ಯಾಪ್ತಿಗೆ ಒಳಪಟ್ಟಿತ್ತು. 2020ರ ಬಳಿಕ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬಂದಿದೆ ಇದೀಗ 11 ಲಕ್ಷ ರೂ. ವೆಚ್ಚದಲ್ಲಿ ಶೀಘ್ರದಲ್ಲೇ ರಸ್ತೆಯ ಗುಂಡಿ ಮುಚ್ಚುವ ಕೆಲಸ ಮಾಡಲಾಗುತ್ತದೆ ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥರು, ನೀವು ಗುಂಡಿ ಮುಚ್ಚುವುದು ಬೇಡ. ರಸ್ತೆಯಲ್ಲಿ ಹರಡಿರುವ ಜಲ್ಲಿಕಲ್ಲು ತೆಗೆದುಕೊಡಿ, ಮಣ್ಣಿನಿಂದ ನಾವೇ ಸಮತಟ್ಟು ಮಾಡಿಕೊಳ್ಳುತ್ತೇವೆ ಎಂದು ಆಕ್ರೋಶ ಹೊರಗೆಡವಿದರು. ಕೆಲವು ಭಾಗದಲ್ಲಿ ರಸ್ತೆಯೇ ಇಲ್ಲವಾಗಿದ್ದು, 11 ಲಕ್ಷ ರೂ.ಗಳಲ್ಲಿ ರಸ್ತೆ ದುರಸ್ತಿ ಸಾಧ್ಯವಿದೆಯೇ ಎಂದು ಎಂದು ಅಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆ.ನಿಡುಗಣೆ ಗ್ರಾ.ಪಂ. ಅಧ್ಯಕ್ಷ ಡೀನ್ ಬೋಪಣ್ಣ ಮಾತನಾಡಿ, ಗುತ್ತಿಗೆದಾರರ ಬೇಜವಾಬ್ದಾರಿತನದಿಂದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಗಳು ಆಗುತ್ತಿಲ್ಲ. ಗಾಳಿಬೀಡು ವ್ಯಾಪ್ತಿಯಲ್ಲೂ ಹೀಗೆಯೇ ಆಗಿದೆ. ಕೆಲಸ ಮಾಡದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿದರು.

**ರಸ್ತೆ ದುರಸ್ತಿಗೆ ಕ್ರಮ:** ಗ್ರಾಮಸ್ಥರ ಆಕ್ರೋಶಕ್ಕೆ ಮಣಿದ ಲೋಕೋಪಯೋಗಿ ಇಲಾಖೆ ಅಧಿಕಾರಿ ಯುವರಾಜು, ಸೋಮವಾರದೊಳಗಾಗಿ ರಸ್ತೆ ದುರಸ್ತಿ ಕಾರ್ಯ ಪ್ರಾರಂಭಿಸಲಾಗುತ್ತದೆ. ಹಣದ ಕೊರತೆ ಕಂಡು ಬಂದಲ್ಲಿ ಹೆಚ್ಚುವರಿ ಅನುದಾನ ಬಳಸಿ ರಸ್ತೆ ದುರಸ್ತಿ ಮಾಡಿಕೊಡುವುದಾಗಿ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ನಿಗದಿತ ಸಮಯಕ್ಕೆ ರಸ್ತೆ ದುರಸ್ತಿಯಾಗದಿದ್ದಲ್ಲಿ ಜೆಸಿಬಿ ಮೂಲಕ ರಸ್ತೆಯನ್ನು ಸಂಪೂರ್ಣವಾಗಿ ಅಗೆದು ರಸ್ತೆ ತಡೆ ಹಾಗೂ ಚುನಾವಣೆ ಬಹಿಷ್ಕರಿಸಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಕೆ.ನಿಡುಗಣೆ ಗ್ರಾ.ಪಂ. ಮಾಜಿ ಸದಸ್ಯ ರಘು, ಹೆಬ್ಬೆಟ್ಟಗೇರಿ ಗ್ರಾಮಸ್ಥರಾದ ಗಣೇಶ್, ವಿನೋದ್, ಫಿಲೋಮಿನಾ, ನೇತ್ರಾ, ಪುರುಷೋತ್ತಮ, ದೇವಸ್ತೂರು ಗ್ರಾಮಸ್ಥರಾದ ಕುಕ್ಕೇರ ಲಕ್ಷ್ಮಣ್, ನಯನ್, ಸುಜಿತ್, ಸತೀಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಬಿಸಿಯೂಟ ನೌಕರರ ಬಂಧನ ವಿರೋಧಿಸಿ ಪ್ರತಿಭಟನೆ



ಮಡಿಕೇರಿ, ಫೆ.17– ಹೋರಾಟದ ಸಂದರ್ಭ ಬಿಸಿಯೂಟದ ನೌಕರರನ್ನು ಬೆಂಗಳೂರಿನಲ್ಲಿ ತಡೆದು ಬಂಧಿಸಿರುವುದನ್ನು ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿ.ಐ.ಟಿ.ಯು ನೇತೃತ್ವದಲ್ಲಿ ಕೊಡಗು ಜಿಲ್ಲಾ ಬಿಸಿಯೂಟ ನೌಕರರ ಸಂಘ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು. ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಸಂಘದ ಪ್ರಮುಖರು ಹಾಗೂ ಪದಾಧಿಕಾರಿಗಳು ಘೋಷಣೆಗಳನ್ನು ಕೂಗಿ ಬೇಡಿಕೆಯ ಈಡೇರಿಕೆಗೆ ಆಗ್ರಹಿಸಿದರು.

ಈ ಸಂದರ್ಭ ಮಾತನಾಡಿದ ಸಂಘದ ಅಧ್ಯಕ್ಷೆ ಪ್ರಮೀಳಾ, ಇಂದಿನ ಸರ್ಕಾರ ಹೆಣ್ಣು ಮಕ್ಕಳನ್ನು ಬೀದಿಗೆ ತಳ್ಳಿದೆ. ಬೆಳಗ್ಗೆ 9 ಗಂಟೆಗೆ ಶಾಲೆಗೆ ತೆರಳಿದರೆ, ಸಂಜೆ 4 ಗಂಟೆಗೆ ಮನೆಗೆ ಹಿಂದಿರುಗುತ್ತೇವೆ. ಆದರೆ, ಸರ್ಕಾರ ನಮಗೆ ರೂ.3,600ರಿಂದ 3,700 ಮಾತ್ರ ಗೌರವ ಧನ ನೀಡುತ್ತದೆ. ಈ ವೇತನದಲ್ಲಿ ಜೀವನ ಹೇಗೆ ಸಾಗಿಸಲು ಸಾಧ್ಯ ಎಂದು ಪ್ರಶ್ನಿಸಿದರು. ತಿಂಗಳ ವೇತನ ಕೂಡ ಸರಿಯಾದ ಸಮಯಕ್ಕೆ ಲಭ್ಯವಾಗುತ್ತಿಲ್ಲ. ಸರ್ಕಾರ ನಮ್ಮನ್ನು ಕಡೆಗಣಿಸಿದೆ ಎಂದು ದೂರಿದರು.

ಸರ್ಕಾರ ನಮ್ಮ ಕೆಲಸದ ಸಮಯ ವಿಸ್ತರಣೆ ಮಾಡಿದರೂ ಸಮಸ್ಯೆಯಿಲ್ಲ. ಆದರೆ, ಹೆಚ್ಚಿನ ವೇತನ ನೀಡಲಿ. 20 ವರ್ಷದಿಂದ ಕಾರ್ಯನಿರ್ವಹಿಸಿದರೂ ವೇತನ ಹೆಚ್ಚಳವಿಲ್ಲ. ಕೆಲವು ನೌಕರರನ್ನು ಏಕಾಏಕಿ ಕೆಲಸದಿಂದ ಕಿತ್ತುಹಾಕಲಾಗಿದೆ. ಇಂತಹ ನಿರ್ಧಾರ ಖಂಡನೀಯ ಎಂದ ಅವರು, 60 ವರ್ಷ ಮೇಲ್ಪಟ್ಟ ನೌಕರರಿಗೆ ಇಡುಗಂಟು ನೀಡಬೇಕು. ಕನಿಷ್ಠ 6 ಸಾವಿರ ವೇತನ ನೀಡಬೇಕು ಎಂದು ಒತ್ತಾಯಿಸಿದರು.

ಇತ್ತೀಚೆಗೆ ಪ್ರತಿಭಟನೆ ಸಂದರ್ಭ ಮಹಿಳೆಯರ ಮೇಲೆ ಪೊಲೀಸರು ದೌರ್ಜನ್ಯ ಎಸಗಿ, ಹೋರಾಟ ಮಾಡಬಾರದು ಎಂದು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಮಗೆ ರಕ್ಷಣೆಯಿಲ್ಲದಾಗಿದ್ದು, ಇಂದು ಬೀದಿಯಲ್ಲಿ ನಿಲ್ಲುವಂತಾಗಿದೆ. ಶಾಲೆಯ ಮಕ್ಕಳನ್ನು ಮಾತ್ರ ನಾವು ನೋಡುವುದಾದರೆ ನಮ್ಮ ಮಕ್ಕಳ ರಕ್ಷಣೆ ಯಾರು ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಸಿ.ಐ.ಟಿ.ಯು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್. ಭರತ್, ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಸಂಘದ ಪೊನ್ನಂಪೇಟೆ ತಾಲೂಕು ಅಧ್ಯಕ್ಷೆ ಜಯಂತಿ, ಕುಶಾಲನಗರ ತಾಲೂಕು ಅಧ್ಯಕ್ಷೆ ಚಾಮುಂಡಿ, ಹಾಗೂ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಕಾಡುಪ್ರಾಣಿ ದಾಳಿಯಿಂದ ಕರು ಬಲಿ; ಚಿರತೆ ದಾಳಿ, ಶಂಕೆ

ಕುಶಾಲನಗರ, ಫೆ.17– ಕರುವೊಂದು ಕಾಡು ಪ್ರಾಣಿಯ ದಾಳಿಗೊಳಗಾಗಿ ಸಾವನ್ನಪ್ಪಿರುವ ಘಟನೆ ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಕೂಡ್ಲೂರು ಬಸವೇಶ್ವರ ಬಡಾವಣೆಯಲ್ಲಿ ಸಂಭವಿಸಿದ್ದು, ಕರುವು ಚಿರತೆ ದಾಳಿಯಿಂದ ಸಾವನ್ನಪ್ಪಿದೆ ಎಂದು ಮಾಲೀಕರು ಸಂಶಯ ವ್ಯಕ್ತಪಡಿಸುತ್ತಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಯಾಗಿದೆ.

ಬಸವೇಶ್ವರ ಬಡಾವಣೆಯ ಜಿ.ವಿ.ಕುಮಾರ್ ಎಂಬುವರ ಕರು ಪ್ರಾಣಿ ದಾಳಿಯಿಂದ ಸಾವನ್ನಪ್ಪಿದ್ದು, ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ ಸ್ಥಳೀಯ ವಾರ್ಡ್ ಸದಸ್ಯ ಕೆ.ಬಿ.ಶಂಶುದ್ದೀನ್ ಅವರು, ಕೂಡಲೇ ವಲಯ ಅರಣ್ಯಾಧಿಕಾರಿಗಳ ಗಮನಕ್ಕೆ ತಂದರು. ನಂತರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅರಣ್ಯ ಇಲಾಖೆಯ ಅಧಿಕಾರಿಗಳು, ಮುಂದಿನ ಕ್ರಮ ಕೈಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಬಿ.ಶಂಶುದ್ದೀನ್, ಚಿರತೆ ದಾಳಿ ಬಗ್ಗೆ ಸಂಶಯ ವ್ಯಕ್ತಪಡಿಸಿ ಅಧಿಕಾರಿಗಳ ಗಮನಕ್ಕೆ ತಂದರು. ಸ್ಥಳಕ್ಕೆ ಸಿಸಿ ಕ್ಯಾಮರಾ ಅಳವಡಿಸುವ ಬಗ್ಗೆ ಹಾಗೂ ಕಾಡಿಗೆ ಸಿಬ್ಬಂದಿಗಳನ್ನು ಕಳುಹಿಸಿ ಪರಿಶೀಲನೆ ನಡೆಸುವ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕರು ಸಾವಿಗೆ ಶೀಘ್ರದಲ್ಲಿ ಪರಿಹಾರ ಒದಗಿಸಿಕೊಡುವ ಬಗ್ಗೆಯೂ ಅಧಿಕಾರಿಗಳಲ್ಲಿ ಮನವಿ ಮಾಡಲಾಗಿದೆ. ಗ್ರಾಮಸ್ಥರು ಆತಂಕಕ್ಕೀಡಾಗದೇ, ರಾತ್ರಿ ವೇಳೆ ಸುರಕ್ಷಿತವಾಗಿರುವಂತೆ ತಿಳಿಸಿದ್ದಾರೆ. ಈ ಸಂದರ್ಭ ಉಪ ವಲಯ ಅರಣ್ಯಾಧಿಕಾರಿ ಅನಿಲ್ ಡಿಸೋಜ, ಅರಣ್ಯ ಸಿಬ್ಬಂದಿ ಮಂಜೇಗೌಡ ಹಾಗೂ ಗ್ರಾಮಸ್ಥರು ಇದ್ದರು.

# ಮನೆಯಲ್ಲಿ ಗಾಂಜಾ ಪತ್ತೆ; ನಾಲ್ವರ ಬಂಧನ, ಗಾಂಜಾ ವಶ

ಮಡಿಕೇರಿ, ಫೆ.17– ನಗರದ ಮನೆಯೊಂದರಲ್ಲಿ 500 ಗ್ರಾಂ. ಅಕ್ರಮ ಗಾಂಜಾ ಪತ್ತೆಯಾಗಿದ್ದು, 4 ಮಂದಿ ಆರೋಪಿಗಳನ್ನು ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ನಗರದ ರಾಣಿಪೇಟೆಯ ಮನೆಯೊಂದರಲ್ಲಿ ಅಕ್ರಮವಾಗಿ ಗಾಂಜಾ ದಾಸ್ತಾನು ಮಾಡಿರುವ ಕುರಿತು ಮಾಹಿತಿ ಪಡೆದ ಪೊಲೀಸರು ಶ್ವಾನ ದಳ, ಕಂದಾಯ ಇಲಾಖೆ, ನಗರ ಸಭೆ ಅಧಿಕಾರಿಗಳ ಸಹಿತ ಮನೆಯ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಮಾಲು ಸಹಿತ ನಾಲ್ವರು ಆರೋಪಿಗಳನ್ನು ಸ್ಥಳದಲ್ಲೇ ಬಂಧಿಸಲಾಗಿದೆ.

ಮಡಿಕೇರಿ ನಗರ ನಿವಾಸಿಗಳಾದ ಅಜ್ಗರ್, ನೌಶಾದ್, ಮಂಜು ಮತ್ತು ರಫೀಕ್ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ನಗರ ಠಾಣಾ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ನಾಳೆ, ನಾಡಿದ್ದು ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮೇಳ

ನಾಗಮಂಗಲ, ಫೆ.17– ತಾಲೂಕಿನ ಶ್ರೀಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ 10ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಫೆ.19, 20ರಂದು ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮೇಳ ನಡೆಯಲಿದೆ ಎಂದು ಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಓ ಡಾ.ಎನ್.ಎಸ್ ರಾಮೇಗೌಡ ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಪ್ರೊ.ಟಿ.ಜಿ. ಸೀತಾರಾಮ ಉದ್ಘಾಟಿಸುವರು. ಕಂದಾಯ ಸಚಿವ ಆರ್.ಅಶೋಕ್, ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ, ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಭಾಗವಹಿಸುವವರು.

ಬಿ.ಗೋವಿಂದ ರಮೇಶ್ ಅವರಿಂದ ಸರ್ಕಾರಿ ಕಲಿಕಾ ಕಾರ್ಯಕ್ರಮ, ಡಾ.ವಿಜಯಲಕ್ಷ್ಮಿ ಐಬಾಳೇಕುಂದ್ರಿ ಅವರಿಂದ ಮಕ್ಕಳಲ್ಲಿ ಹೃದಯ ರಕ್ತನಾಳದ ಆರೋಗ್ಯ ನಿರ್ಧರಿಸುವ ಅಂಶಗಳು, ಅಕ್ಷಯ ಗೋಖಲೆ ಅವರಿಂದ ಭಾರತೀಯ ಹಾಗೂ ವಿಜ್ಞಾನ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ

ಫೆ.20ರಂದು ಶ್ರೀ ಅವರಿಗೆ ವಾರ್ಷಿಕ ಪಟ್ಟಾಭಿಷೇಕ ನಡೆಯಲಿದ್ದು, ಕೇಂದ್ರ ಸಚಿವ ಭಗವಂತ ಖೂಬಾ, ಶಾಸಕರಾದ ಸಿ.ಎಸ್.ಪುಟ್ಟರಾಜು, ಸುರೇಶಗೌಡ, ಮಸಾಲೆ ಜಯರಾಮ್ ಭಾಗವಹಿಸುವರು.

2 ದಿನ ಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ವಿಶೇಷವಾಗಿ 2023ನೇ ಸಾಲಿನ ವಿಜ್ಞಾನ ಪ್ರಶಸ್ತಿಯನ್ನು ಇನ್ಫೋಸಿಸ್‌ನ ಸುಧಾಮೂರ್ತಿಯವರಿಗೆ ಪ್ರದಾನ ಮಾಡಲಾಗುವುದು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ರವೀಂದ್ರ, ಕಾಲೇಜು ಆಡಳಿತ ಮಂಡಳಿ ಸದಸ್ಯ ಹೆಚ್.ಟಿ. ಕೃಷ್ಣೇಗೌಡ, ರಿಜಿಸ್ಟ್ರಾರ್ ಚಂದ್ರೇಗೌಡ ಹಾಗೂ ಕಾಲೇಜು ಸಿಬ್ಬಂದಿ ಉಪಸ್ಥಿತರಿದ್ದರು.

# ದಳವಾಯಿ ಕೋಡಿಹಳ್ಳಿ ಗ್ರಾಪಂಗೆ ಅವಿರೋಧ ಆಯ್ಕೆ



ಹಲಗೂರು, ಫೆ.17– ಇಲ್ಲಿಗೆ ಸಮೀಪದ ದಳವಾಯಿ ಕೋಡಿಹಳ್ಳಿ ಗಾಪಂ ಅಧ್ಯಕ್ಷರಾಗಿ ಲಕ್ಷ್ಮೀ ಮತ್ತು ಉಪಾಧ್ಯಕ್ಷರಾಗಿ ನಿಂಗಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷೆ ಲಕ್ಷ್ಮೀ ಮಾತನಾಡಿ, ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೂ ನನ್ನ ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮಗಳ ಸಹಕಾರದೊಂದಿಗೆ ಪ್ರಾಮಾಣಿಕವಾಗಿ ಸರ್ಕಾರದ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ನಮ್ಮ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳನ್ನು ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಈ ವೇಳೆ ಪಿಡಿಓ ಮಂಜಮ್ಮ, ಚುನಾವಣಾಧಿಕಾರಿ ಸ್ವಾಮಿ, ಅಭಿಷೇಕ್, ಗ್ರಾಪಂ ಮಾಜಿ ಅಧ್ಯಕ್ಷರಾದ ಬಿ.ಸಿ.ರವಿ, ಮಂಜುನಾಥ್, ಸದಸ್ಯರಾದ ರವಿ, ಪ್ರಸಾದ್, ಶಿವರಾಜ್, ಇಂದ್ರ ಶಿವಣ್ಣ ಪಾರ್ವತಿ, ಶೃತಿ, ನಿಂಗಮ್ಮ ನಾಗೇಗೌಡ, ಆನಂದ್, ನಾಗರಾಜು, ಮಾಲಾಶ್ರೀ, ನಾಗರತ್ನ ಕಾಂಗ್ರೆಸ್ ಮುಖಂಡರು ಇದ್ದರು.

ಮಾಜಿ ಸಿಎಂ ಸಿದ್ದರಾಮಯ್ಯರ ಹೊಡೆದು ಹಾಕಿ ಎಂಬ ಹೇಳಿಕೆ ಖಂಡಿಸಿ

# ಸಚಿವ ಅಶ್ವತ್ಥ್ ನಾರಾಯಣ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮಂಡ್ಯ, ಫೆ.17– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಿ ಎಂದು ಪ್ರಚೋದನಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ ವಿರುದ್ಧ ಕಾನೂನು ಕ್ರಮ ಕೈಗೊಂಡು ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ವೃತ್ತದಲ್ಲಿ ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ನೇತೃತ್ವದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಮಾನವ ಸರಪಳಿ ರಚಿಸಿ, ಮೈಸೂರು–ಬೆಂಗಳೂರು ಹೆದ್ದಾರಿ ರಸ್ತೆ ತಡೆ ನಡೆಸಿದರು. ಬಳಿಕ ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ನಡುವೆ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಸಚಿವ ಅಶ್ವಥ ನಾರಾಯಣ ಭಾವಚಿತ್ರಕ್ಕೆ ಕಪ್ಪು ಮಸಿ ಬಳಿದು ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ತಾಲೂಕಿನ ಸಾತನೂರು ಗ್ರಾಮದ ಹೊರವಲಯದ ಕಂಬದ ನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಸಚಿವ ಅಶ್ವಥ್ ನಾರಾಯಣ ಅವರು ಭಾಷಣ ಮಾಡುವ ವೇಳೆ ಟಿಪ್ಪುವನ್ನು ಮೇಲಕ್ಕೆ ಕಳುಹಿಸಿದಂತೆ ಸಿದ್ದರಾಮಯ್ಯ ಅವರನ್ನು ಮೇಲಕ್ಕೆ ಕಳುಹಿಸಬೇಕು ಎಂದು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಇದು ಅವರ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಇದನ್ನು ಕಾಂಗ್ರೆಸ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ ಎಂದರು.

ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಸಿದ್ದರಾಮಯ್ಯ ಸಚ್ಚಾರಿತ್ರ ರಾಜಕಾರಣಿ, ತಮ್ಮ 5 ವರ್ಷದ ಆಡಳಿತಾವಧಿಯಲ್ಲಿ ಒಂದೇ ಒಂದು ಕಪ್ಪುಚುಕ್ಕೆ ಇಲ್ಲದಂತೆ ಜನಪರ ಆಡಳಿತ ನಡೆಸಿದ್ದಾರೆ. ಇಂತಹ ನಾಯಕರ ಬಗ್ಗೆ ಮಾತನಾಡುವಾಗ ಎಚ್ಚರ ವಹಿಸಬೇಕು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಾಮಾಣಿಕ, ದಕ್ಷ ಅಧಿಕಾರಿಗಳಾಗಿದ್ದರೆ ಸಚಿವ ಅಶ್ವತ್ಥ್‌ನಾರಾಯಣ ವಿರುದ್ಧ ಸುಮೋಟೋ ಕೇಸ್ ದಾಖಲಿಸಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಲೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಸಚಿವ ಅಶ್ವತ್ಥ್ ನಾರಾಯಣ ಅವರು ಬಹಿರಂಗವಾಗಿ ಕ್ಷಮೆಯಾಚಿಸಿ ತಮ್ಮ ಹೇಳಿಕೆ ವಾಪಸ್ ಪಡೆದರೆ ಒಳ್ಳೆಯದು. ಇಲ್ಲದಿದ್ದರೆ, ರಾಜ್ಯವ್ಯಾಪಿ ಕಾಂಗ್ರೆಸ್ ಕಾರ್ಯಕರ್ತರು ಅಶ್ವತ್ಥ ನಾರಾಯಣ ಹೋದಲ್ಲೆಲ್ಲ ಘೇರಾವ್ ಮಾಡುವುದಾಗಿ ಎಚ್ಚರಿಸಿದ ಅವರು, ಜನಮಾನಸದಲ್ಲಿರುವ ಸಿದ್ದರಾಮಯ್ಯ ಅವರನ್ನು ನೀವೆಷ್ಟೇ ತೆಗಳಿದರೂ ಎತ್ತರದ ಸ್ಥಾನಕ್ಕೆ ಏರಲಿದ್ದಾರೆ. ಮುಂದೇ ಇದೇ ಧೋರಣೆ ಅನುಸರಿಸಿದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಸವಾಲು ಹಾಕಿದರು.

ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಹೆಚ್.ಬಿ.ರಾಮು ಮಾತನಾಡಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಕಾಂಗ್ರೆಸ್ ಮಹಿಳಾಧ್ಯಕ್ಷೆ ಅಂಜನಾ, ಕಾಂಗ್ರೆಸ್ ಮುಖಂಡರಾದ ಗಣಿಗ ರವಿಕುಮಾರ್, ಎಂ.ಎಸ್.ಚಿದಂಬರ್, ಮುನವರ್ ಖಾನ್, ಡಾ.ಕೃಷ್ಣ, ಕೀಲಾರ ರಾಧಾಕೃಷ್ಣ, ರಾಮಲಿಂಗಯ್ಯ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಕುರುಬರ ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್. ಸುರೇಶ್, ಮಾಜಿ ಅಧ್ಯಕ್ಷ ದೊಡ್ಡಯ್ಯ, ಜಿಪಂ ಮಾಜಿ ಸದಸ್ಯ ನಾಗೇಂದ್ರ ಕುಮಾರ್, ಮುಖಂಡ ರಾದ ಎಂ.ಡಿ.ಕೃಷ್ಣಮೂರ್ತಿ, ರಮೇಶ್, ಕೋ.ಪು.ಗುಣಶೇಖರ್ ಹಾಗೂ ಮಾಧ್ಯಮ ಸಂಯೋಜಕ ಎನ್.ಕೃಷ್ಣೇಗೌಡ ಹಾಜರಿದ್ದರು.

# ಕಾವೇರಿ ಸಾಯಿಧಾಮದಲ್ಲಿ ಶಿವರಾತ್ರಿ ಜಾಗರಣೆ

ಪಾಂಡವಪುರ, ಫೆ.17– ತಾಲೂಕಿನ ದೊಡ್ಡೇಗೌಡನಕೊಪ್ಪಲು ಸಮೀಪವಿರುವ




ಕಾವೇರಿ ಸಾಯಿಧಾಮದಲ್ಲಿ 15ನೇ ವರ್ಷದ ಮಹಾಶಿವರಾತ್ರಿಯನ್ನು ಫೆ.18ರಂದು ಅದ್ದೂರಿಯಾಗಿ ಆಚರಿಸಲಾಗುವುದು. ಜಾಗರಣೆ ಪ್ರಯುಕ್ತ ಶ್ರೀಓಂಕಾರೇಶ್ವರ ಸ್ವಾಮಿಗೆ ಮಾನಸ ಸರೋವರದಿಂದ ತಂದಿರುವ ಪವಿತ್ರ ಜಲದಿಂದ ರುದ್ರಾಭಿಷೇಕ, ಲಕ್ಷ ಪುಷ್ಪಾರ್ಚನೆ ಜಾವ ಜಾವದ ಪೂಜೆ ನೆರವೇರಿಸಲಾಗುವುದು. ಚನ್ನಪಟ್ಟಣ ತಾಲೂಕಿನ ಮೆಣಸಿನಹಳ್ಳಿ, ಭೂಹಳ್ಳಿ ಹಾಗೂ ವಿಠಲನಹಳ್ಳಿ ಗ್ರಾಮಸ್ಥರಿಂದ ಅಖಂಡ ಭಜನೆ ಏರ್ಪಡಿಸಲಾಗಿದೆ ಎಂದು ಓಂಕಾರೇಶ್ವರ ಚಾರಿಟಬಲ್ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

# ನಾಲೆಗೆ ಉರುಳಿದ ಬಸ್: 10 ಮಂದಿಗೆ ಗಂಭೀರ ಗಾಯ

ಮಂಡ್ಯ,ಫೆ.17– ಗಾರ್ಮೆಂಟ್ಸ್ ನೌಕರರನ್ನು ಕರೆದೊಯ್ಯುವ ಬಸ್ ರಸ್ತೆ ಬದಿಯ ನಾಲೆಗೆ ಉರುಳಿ ಬಿದ್ದ ಪರಿಣಾಮ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಡಣಾಯಕನಪುರ ಗ್ರಾಮದ ಬಳಿ ಶುಕ್ರವಾರ ಸಂಜೆ ಸಂಭವಿಸಿದೆ.

ಘಟನೆಯಲ್ಲಿ ಚಾಲಕ ಸೇರಿದಂತೆ ಹಲವರಿಗೆ ಕೈ–ಕಾಲು ಮುರಿತವಾಗಿದ್ದು, ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಎಲ್ಲಾ ಗಾಯಾಳುಗಳನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮಂಡ್ಯ ತಾಲೂಕಿನ ಶಿವಾರ ಮಾರ್ಗದ ನೌಕರರನ್ನು ಕರೆದೊಯ್ಯುವ ಖಾಸಗಿ ಬಸ್ ಆಗಿದ್ದು, ಗಾರ್ಮೆಂಟ್ಸ್‌ನಿಂದ ಕೆಲಸವನ್ನು ಮುಗಿಸಿಕೊಂಡು ಶಿವಾರ ಸೇರಿದಂತೆ ಸುತ್ತಮುತ್ತಲ ಗ್ರಾಮಕ್ಕೆ ತೆರಳುತ್ತಿದ್ದ ಬಸ್ ಡಣಾಯಕನಪುರ ಗ್ರಾಮದಲ್ಲಿ ಆಯತಪ್ಪಿ ನಾಲೆಗೆ ಉರುಳಿ ಬಿದ್ದಿದೆ. ನಾಲೆಯಲ್ಲಿ ಹೆಚ್ಚಾಗಿ ನೀರು ಇರದ ಪರಿಣಾಮ ಅದೃಷ್ಟವಶಾತ್ ಪ್ರಾಣಾಪಾಯದಿಂದ ಎಲ್ಲರೂ ಪಾರಾಗಿದ್ದಾರೆ. ಈ ಸಂಬಂಧ ಕೆರಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜನಪರವಲ್ಲದ ಬಜೆಟ್, ಪ್ರಯೋಜನವಿಲ್ಲ, ಅಭಿವೃದ್ಧಿ ಪೂರಕ, ಎಲ್ಲಾ ವಲಯಗಳಿಗೂ ಆದ್ಯತೆ, ಜನಪರ, ಬುರುಡೆ ಬಜೆಟ್




ಚಾಮರಾಜನಗರ, ಫೆ.17– ಚಾಮರಾಜನಗರ ತಾಲೂಕಿನ ಬದನಗುಪ್ಪೆ ಬಳಿ ಕೈಗಾರಿಕಾ ವಸಾಹತು ಸ್ಥಾಪನೆ, ಯಳಂದೂರು ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿರುವುದು ಹಾಗೂ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಮಾನವ–ಪ್ರಾಣಿ ಸಂಘರ್ಷವನ್ನು ನಿಯಂತ್ರಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂಬ ಮೂರು ಅಂಶಗಳನ್ನು ಹೊರತುಪಡಿಸಿದಂತೆ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಜಿಲ್ಲೆಗೆ ವಿಶೇಷ ಅನುದಾನ ನೀಡಿಲ್ಲ. ಇದರಿಂದ ಜಿಲ್ಲೆಯ ಜನತೆಗೆ ನಿರಾಶೆಯಾಗಿದೆ.

ಜಿಲ್ಲೆಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಣೆ ಆಗಲಿದೆ. ನಾನಾ ಯೋಜನೆಗಳು ಜಿಲ್ಲೆಗೆ ಬರಲಿವೆ ಎಂದು ಜಿಲ್ಲೆಯ ಜನತೆ ಭಾವಿಸಿದ್ದರು. ಆದರೆ, ಜನರ ಭರವಸೆಗಳು ಹುಸಿಯಾಗಿದೆ. ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (ಕೆಎಸ್‌ಎಸ್‌ಐಡಿಸಿ) ವತಿಯಿಂದ ಬದನಗುಪ್ಪೆ ಸೇರಿದಂತೆ 9 ಸ್ಥಳಗಳಲ್ಲಿ ಹೊಸದಾಗಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗುವುದು. ಯಳಂದೂರು ಪಟ್ಟಣದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆ ಸಾಮರ್ಥ್ಯ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ಇದಲ್ಲದೇ ಮಾನವ–ಪ್ರಾಣಿ ಸಂಘರ್ಷವನ್ನು ನಿಯಂತ್ರಿಸಲು ಸಂಘರ್ಷ ಕ್ಷೇತ್ರದಿಂದ ಸೆರೆ ಹಿಡಿಯಲ್ಪಟ್ಟ ವನ್ಯ ಪ್ರಾಣಿಗಳನ್ನು ಅವುಗಳ ನೈಸರ್ಗಿಕ ಆವಾಸ ಸ್ಥಾನ ಪ್ರದೇಶವನ್ನು ಗುರುತಿಸಿ ಬಿಡುಗಡೆ ಮಾಡಲು ಬಂಡೀಪುರ ರಾಷ್ಟ್ರೀಯ ಉದ್ಯಾನವನಗಳಲ್ಲಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಈ ಮೂರು ಅಂಶಗಳನ್ನು ಹೊರತುಪಡಿಸಿದರೆ ಜಿಲ್ಲೆಗೆ ಯಾವುದೇ ನಿಖರವಾದ ಯೋಜನೆಗಳನ್ನು ಘೋಷಿಸಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ ಬಜೆಟ್ ಅನ್ನು ಬಿಜೆಪಿ ಜನಪ್ರತಿನಿಧಿಗಳು, ಮುಖಂಡರು ಸ್ವಾಗತಿಸಿದ್ದಾರೆ. ಕಾಂಗ್ರೆಸ್, ಜೆಡಿಎಸ್, ಬಿಎಸ್‌ಪಿ ಜನಪ್ರತಿನಿಧಿಗಳು ಹಾಗೂ ಮುಖಂಡರು, ರೈತ ಸಂಘಟನೆಗಳು ಬಜೆಟ್ ಅನ್ನು ಖಂಡಿಸಿವೆ ಬಜೆಟ್ ಬಗ್ಗೆ ಜಿಲ್ಲೆಯ ಮುಖಂಡರ ಅಭಿಪ್ರಾಯ ಇಂತಿದೆ.



"ರಾಜ್ಯ ಸರ್ಕಾರ ಕಳೆದ ಬಾರಿ ಮಂಡಿಸಿದ ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳಲ್ಲಿ ಕೇವಲ ಶೇ.10ರಷ್ಟು ಮಾತ್ರ ಅನುಷ್ಠಾನಗೊಂಡಿದೆ. ಉಳಿದ ಶೇ.90ರಷ್ಟು ಯೋಜನೆಗಳು ಅನುಷ್ಠಾನಗೊಂಡಿಲ್ಲ. ಆದ್ದರಿಂದ ಸರ್ಕಾರ ಈ ಬಜೆಟ್ ಮಂಡಿಸುವ ಅಗತ್ಯತೆ ಇರಲಿಲ್ಲ. ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಸುಳ್ಳು ಬಜೆಟ್ ಮಂಡಿಸಲಾಗಿದೆ. ಇದು ಜನಪರವಲ್ಲದ ಬಜೆಟ್.

–ಆರ್. ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷರು.



"ಬಜೆಟ್‌ನಲ್ಲಿ ರೈತರಿಗೆ ಐದು ಲಕ್ಷದವರೆಗೆ ಬಡ್ಡಿ ರಹಿತ ಸಾಲ ವಿತರಣೆ, ರೈತರಿಗೆ ಕೃಷಿ ಸಾಲ ವಿತರಣೆಗೆ 25 ಸಾವಿರ ಕೋಟಿ ಕಾಯ್ದಿರಿಸಿರುವುದು, ನೀರಾವರಿ ಯೋಜನೆಗೆ 25 ಸಾವಿರ ಕೋಟಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದು ಸೇರಿದಂತೆ ಬೊಮ್ಮಾಯಿ ಅವರು ಜನಪರ ಬಜೆಟ್ ಮಂಡಿಸಿದ್ದಾರೆ.

–ಅಮ್ಮನಪುರ ಮಲ್ಲೇಶ್, ಬಿಜೆಪಿ ರೈತ ಮುಖಂಡ



"ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಕರ್ನಾಟಕದ ಜನತೆಗೆ ಚಂದಮಾಮನನ್ನು ತೋರಿಸಿದ್ದಾರೆ. ರೈತರ ಅಭಿವೃದ್ಧಿಗೆ ಒತ್ತು ನೀಡಿಲ್ಲ. ನಿರುದ್ಯೋಗವನ್ನು ಹೋಗಲಾಡಿಸಲು ಯೋಜನೆ ರೂಪಿಸಿಲ್ಲ. ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಈ ಬಜೆಟ್‌ನಲ್ಲಿ ಯಾವುದೇ ಪ್ರಯೋಜನವಾಗಿಲ್ಲ.

–ಕೆ.ಪಿ. ಸದಾಶಿವಮೂರ್ತಿ, ಜಿಪಂ ಮಾಜಿ ಸದಸ್ಯರು



"ರಾಜ್ಯ ಬಜೆಟ್ ಅಭಿವೃದ್ಧಿಗೆ ಪೂರಕವಾಗಿದೆ. ಇದೊಂದು ಉತ್ತಮ ಬಜೆಟ್ ಆಗಿದ್ದು, ಸರ್ವರಿಗೂ ಸಮಬಾಳು ಎಂಬಂತಿದೆ. ಎಲ್ಲಾ ವರ್ಗದ ಜನರಿಗೂ ಆದ್ಯತೆ ನೀಡಲಾಗಿದೆ. ರೈತರ ಅಭಿವೃದ್ಧಿಗೆ ಒತ್ತು, ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ.

–ಎ. ರಾಮಚಂದ್ರ, ಮಾಜಿ ಅಧ್ಯಕ್ಷರು, ಕೇಂದ್ರ ಪರಿಹಾರ ಸಮಿತಿ



"ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಿಲ್ಲ. ಚಾಮರಾಜನಗರ ಜಿಲ್ಲೆಯಾಗಿ 25ವರ್ಷ ಕಳೆದರೂ ನಗರದ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಅನುದಾನವನ್ನು ಬಜೆಟ್‌ನಲ್ಲಿ ನೀಡಲಾಗುವುದು ಎಂದು ನಿರೀಕ್ಷೆ ಮಾಡಲಾಗಿತ್ತು. ಈ ನಿರೀಕ್ಷೆ ಹುಸಿಯಾಗಿದೆ.

–ನಾಗಯ್ಯ, ಜಿಲ್ಲಾಧ್ಯಕ್ಷರು ಬಿಎಸ್‌ಪಿ




"ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಯೋಜನೆ ನೀಡಿಲ್ಲ. ಇದರಿಂದ ಜಿಲ್ಲೆಗೆ ಏನೂ ಪ್ರಯೋಜನವಿಲ್ಲ. ಹಿಂದುಳಿದ ಜಿಲ್ಲೆಗಳಿಗೆ ಬಹಳ ಅನ್ಯಾಯವಾಗಿದೆ. ಇದೊಂದು ಸುಳ್ಳಿನ ಬಜೆಟ್.

–ಸಿ. ಪುಟ್ಟರಂಗಶೆಟ್ಟಿ, ಶಾಸಕರು.



"ರಾಜ್ಯ ಬಜೆಟ್‌ನಲ್ಲಿ ಎಲ್ಲಾ ವಲಯಗಳಿಗೂ ಆದ್ಯತೆ ನೀಡಲಾಗಿದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ಮುಖ್ಯಮಂತ್ರಿಗಳು ಎಲ್ಲಾ ಕ್ಷೇತ್ರಗಳಿಗೂ ಆದ್ಯತೆ ನೀಡುವ ಮೂಲಕ ಎಲ್ಲಾ ವರ್ಗದ ಜನರ ಹಿತ ಕಾಪಾಡಿದ್ದಾರೆ. ಇದೊಂದು ಜನಪರವಾದ ಜನಪ್ರಿಯ ಬಜೆಟ್ ಎಂದರೆ ತಪ್ಪಾಗುವುದಿಲ್ಲ.

–ಜಿ. ನಾಗಶ್ರೀ ಪ್ರತಾಪ್, ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಬಿಜೆಪಿ



"ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಬಜೆಟ್ ಬುರುಡೆ ಬಜೆಟ್. ಇನ್ನೊಂದು ತಿಂಗಳೊಳಗೆ ವಿಧಾನಸಭಾ ಚುನಾವಣೆಯ ಶಿಷ್ಟಾಚಾರ ಜಾರಿಯಾಗುತ್ತಿದೆ. ಹೀಗಾಗಿ, ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹೇಗೆ ಸಾಧ್ಯ.

–ವಾಟಾಳ್ ನಾಗರಾಜ್, ಮಾಜಿ ಶಾಸಕರು.



"ಬಜೆಟ್‌ನಲ್ಲಿ ರೈತರಿಗೆ ಐದು ಲಕ್ಷ ರೂ.ವರೆಗೆ ಬಡ್ಡಿ ರಹಿತ ಸಾಲ ನೀಡುವುದಾಗಿ ಘೋಷಿಸಿರುವುದು ಸ್ವಾಗತಾರ್ಹ. ಆದರೆ, ಇದು ಅನುಷ್ಠಾನಗೊಂಡ ರೈತರ ಕೈ ಸೇರಬೇಕು. ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಇತ್ತ ಕಡೆ ಸರ್ಕಾರ ಗಮನ ಹರಿಸಬೇಕು.

–ಹೆಬ್ಬಸೂರು ಬಸವಣ್ಣ, ಜಿಲ್ಲಾಧ್ಯಕ್ಷರು ರೈತ ಸಂಘ.



"ಮುಖ್ಯಮಂತ್ರಿಗಳಾದ ಬೊಮ್ಮಾಯಿ ಅವರು ಮಂಡಿಸಿದ ಬಜೆಟ್ ಜನಪರವಾದದ್ದು, ರಾಜ್ಯದ ಅಭಿವೃದ್ಧಿಗೆ ಈ ಬಜೆಟ್ ಪೂರಕವಾಗಿದೆ. ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೂ ಬಜೆಟ್ ಪೂರಕವಾಗಿದೆ.

–ಡಾ.ಎ.ಆರ್. ಬಾಬು, ಬಿಜೆಪಿ ಮುಖಂಡರು, ಚಾಮರಾಜನಗರ.

# ಸಚಿವ ಅಶ್ವಥ್‌ನಾರಾಯಣ್ ಹೇಳಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರ, ಫೆ.17– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಚಿವ ಅಶ್ವಥ್‌ನಾರಾಯಣ್ ನೀಡಿರುವ ಪ್ರಚೋದನಾಕಾರಿ ಹೇಳಿಕೆ ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್, ರಾಷ್ಟ್ರೀಯ ವಿದ್ಯಾರ್ಥಿ ಘಟಕ ಹಾಗೂ ಸಾಮಾಜಿಕ ಜಾಲತಾಣದ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ಸಚಿವ ಅಶ್ವಥ್‌ನಾರಾಯಣ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕನಿಷ್ಠ ವೇತನ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಎಸ್‌ಪಿಕೆ ಉಮೇಶ್ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಅಶ್ವಥ್ ನಾರಾಯಣ್ ಟಿಪ್ಪು ಸುಲ್ತಾನ್ ಮುಗಿಸಿದ ರೀತಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಿ ಎಂದು ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯವಾಗಿದೆ. ಈ ರೀತಿ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಅಶ್ವಥ್‌ನಾರಾಯಣ್ ಬಹಿರಂಗವಾಗಿ ಕ್ಷಮೆ ಕೇಳಬೇಕು. ಅವರ ಮೇಲೆ ಪೊಲೀಸ್ ಇಲಾಖೆ ಕೊಲೆ ಪ್ರಕರಣ ದಾಖಲು ಮಾಡಿ ಬಂಧಿಸಿ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಚಿವ ಅಶ್ವಥ್‌ನಾರಾಯಣ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು. ಬಿಜೆಪಿ ಪಕ್ಷದಿಂದ ಉಚ್ಚಾಟಿಸಬೇಕು ಎಂದು ಆಗ್ರಹಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ಮಾತನಾಡಿದರು. ಪ್ರತಿಭಟನೆಯಲ್ಲಿ ಎಂ.ಸ್ವಾಮಿ, ಎಚ್.ಎಂ.ಮಧು, ಮುಸಾಯಿಬ್, ಯೋಗೇಂದ್ರ, ಸೋಮೇಶ್, ನಾಗೇಂದ್ರ, ಮುಖಂಡರಾದ ಸಿ.ಆರ್.ಮಹೇಶ್, ಅಯ್ಯೂಬ್‌ಖಾನ್, ಸೈಯದ್ ಇಸ್ಲಾಮಿಕ್, ಗಾಳೀಪುರ ಪುಟ್ಟಸ್ವಾಮಿ, ನಾಗರಾಜು ಇತರರು ಭಾಗವಹಿಸಿದ್ದರು.




ಗೌರವಾನ್ವಿತ ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕಿರಿಯ ಶ್ರೇಣಿ, ಮೈಸೂರು

ಅಸಲು ದಾವಾ ಸಂಖ್ಯೆ 408/2021

ವಾದಿ: ಶ್ರೀಮತಿ ವೀಣಾ ರಾವ್

ವಿರುದ್ಧ

ಪ್ರತಿವಾದಿಗಳು :ಶ್ರೀಮತಿ. ರೂಪ ಮತ್ತು ಮತ್ತೊಬ್ಬರು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು/ ವಾದಿ ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, 1ನೇ ಪ್ರತಿವಾದಿಯಾದ ಶ್ರೀಮತಿ ರೂಪ ಕೋಂ ಲೇಟ್ ಶ್ರೀನಿವಾಸ್ 2ನೇ ಪ್ರತಿವಾದಿಯಾದ ಶ್ರೀ, ಹರ್ಷಿತ್‌ಗೌಡ 1 ಮತ್ತು 2ನೇ ಪ್ರತಿವಾದಿಗಳ ವಿಳಾಸ ಮನೆ ನಂ. 19, 9ನೇ ಮೇನ್, ಕಪಾಲಿ ಹೌಸ್, ಸರಸ್ವತಿಪುರಂ, ಮೈಸೂರು, ಇವರುಗಳ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ದಾವೆಯನ್ನು ಹೂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಮೈಸೂರು ಮಿತ್ರ ದಿನಪತ್ರಿಕೆಗೆ ಪ್ರಕಟಿಸುತ್ತಿದ್ದು, 1 ಮತ್ತು 2ನೇ ಪ್ರತಿವಾದಿಗಳು ಮಾನ್ಯ ನ್ಯಾಯಾಲಯದಲ್ಲಿ 02-03-2023 ದಿನಾಂಕದಂದು 11.00 ಗಂಟೆಗೆ ವಕೀಲರ ಮುಖಾಂತರ ಅಥವಾ ತಾವುಗಳೇ ಸ್ವತ: ಹಾಜರಾಗಿ ನಿಮ್ಮ ವಕಾಲತ್ ವಹಿಸತಕ್ಕದ್ದು ಇಲ್ಲವಾದಲ್ಲಿ ಏಕಪಕ್ಷೀಯವಾಗಿ ಮಾನ್ಯ ನ್ಯಾಯಾಲಯ ಆದೇಶವನ್ನು ಮಾಡುತ್ತದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ: 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕಿರಿಯ ಶ್ರೇಣಿ, ಮೈಸೂರು.

ಅರ್ಜಿದಾರರ ಪರ ವಕೀಲರು:ಶ್ರೀ ಮೋಹನ್‌ರಾಜ್ ಎಸ್.ಪಿ, ಕೆ.ಎ.ಆರ್.213/2005, ವಕೀಲರು, ನಂ.2824, 1ನೇ ಎ ಮುಖ್ಯರಸ್ತೆ, 8ನೇ ಕ್ರಾಸ್, ಜಯನಗರ ಮೈಸೂರು.

## PUBLIC NOTICE

Notice is hereby given to the public that State Bank of India, SMECC Branch, Mysuru, Branch Code: 40694 is extending credit facility to M/s. Sri Rajasthan Marbles and the property mentioned in the schedule being offered as a Collateral to bank. The title documents pertaining to the Schedule Property is laminated. In that regard, any person having any claims, mortgage, charge, trust or otherwise on the schedule property are requested to inform the same in writing along with the proof to The Manager, State Bank of India, SMECC Branch, Mysuru, Branch Code: 40694, within 15 days from the date of the notice.

**SCHEDULE**

All the piece and parcel of the House Property bearing No. 912 CH: 20, measuring East to West 65 Feet, North to South 62 feet, totally measuring 4030 square feet, situated at First Main Road, Lakshmipuram, Chamaraja Mohalla, Mysuru & bounded on the: East by: Road ; West by: Remaining property ; North by: Conservancy ; South by: No. 912/A.

For State Bank of India
Sd/- Chief Manager, SME Centre, Mysuru
Place: Mysuru
Date: 17-02-2023



## PUBLIC NOTICE

The public at large is hereby notified that my client intends to purchase the schedule property from Mrs. Sariya Khanum, W/o Mr. Mohammed Kaleem Ulla, residing at No. #3, 1st Floor, 7th 'A' Cross, near S.K. School, Someshwara Nagar, Bangalore South, Jayanagar 3rd Block, Bangalore South, Bangalore-560 011. If any person/s has/have any kind of right, title, interest, objections or claims over the schedule property, they may lodge their claims / objections with the undersigned within 7 days from the date of this notification with the supporting documents by registered post acknowledgement due failing which, my client will take it for granted that there are no claims / charges from whom so ever. Any claims / objections received after this stipulated period of 7 days will be considered as no claim and the same will be ignored and my client shall proceed to complete the sale transaction.

SCHEDULE OF THE PROPERTY

All that piece and parcel of the residential house constructed ont he Site bearing No. 2200, situated at 2nd Stage, 2nd Phase, Devanur Extension, Rajivnagar, N.R. Mohalla, Mysore, site measring East to West (9.00 + 7.50)/2 Meters and North to South 12.00 Meters in total 99.00 square meters and more fully described in the schedule below.

East by: 18.00 Meter road ; West by: Property bearing No. 2201 ; North by: Property bearing No. 2199 ; South by: 9.00 meter road.

**Sd/- Sridhar L. Holla, Advocate**
**No. 237, Kshetraiah Road,**
**K.R. Mohalla, Mysore-570 024.**
**Mob: 9844258544, 9902613515.**
**Email: sridharholla@gmail.com**
**Place: Mysore**
**Date: 17-02-2023**

## PUBLIC NOTICE

Notice is hereby issued to the general public that Sri Karthik N. Urs, late Nanjaraja Urs, Gowrav K. Urs, S/o Karthik N. Urs and Ridhya K. Urs, D/o Karthik N. Urs (being minor rep. by her natural guardian father Karthin N. Urs) all are residing at No. 1046, 13th Cross, 5th Main, Vijayanagar 1st Stage, Mysuru-570 017 have agreed to sell the schedule property to my clients Sri Raja M. Maiya, S/o Sri Harikrishna and Smt. Neetha Raja Maiya, W/o Sri Raja M. Maiya both are residing at Plot No. 13 & 14, Flat No. 104, Madan Gopal Residency, Surya Nagar, Hyderabad-500 094. Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned at No. 1092, C & D Block, Lalithadri Road, Kuvempunagar, Mysuru-570 023 within seven (7) days from the date of this public notice, failing which such claim/s shallbe considered to have been waived and / or given up and my client shall be entitled to compete the sale transactions, that there are no claims of whatsoever nature with respect to the sehedule property.

**SCHEDULE**

The site bearing No. 69 carved out in converted landed property bearing Sy. No. 10 measuring 6 acres, Sy. No. 11 3 acres 10 guntas, Sy. No. 12/1 measuring 7 acres 23 guntas and 12/2 measuring 1 acre 33 guntas, in total 18 acres 26 guntas situated at "Daivik Nisarga City" layout, formed by the Mysuru Mahanagara Palike Employees House Building Co-operative Society Ltd., along with "M/s. Daivik Developers", Halalu Village, Kasaba Hobli, Mysuru Taluk, Mysuru District, measruing East to West 12.00 mts. and North to South (9.30 + 9.15)/2 Mts. in total 110.70 sq.mts. and bounded on East: Site bearing No. 90, West: 09.00 Mts. Road,; North: 09.00 Mts. Road and South: Site bearing No. 70.

Sd/- B.D. Pradeep, BBM, LL.B, Advocate,
KAR / 1078 / 1998, No. 1092, C & D Block, Lalithadri Road, Kuvempunagar, Mysuru-570 023. Mob: 9845104526
Date: 16-02-2023




ಕರ್ನಾಟಕ ಸರ್ಕಾರ
ಮುಖ್ಯ ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,
ಉಪ-ವಿಭಾಗಿಯ ಆಸ್ಪತ್ರೆ, ಪಾಂಡವಪುರ, ಮಂಡ್ಯ ಜಿಲ್ಲೆ
**E-Mail address: sdhppura@gmail.com**
**Ph no: 08236-295160/61**
ಕ್ರ.ಸಂ:ಉ.ವಿ.ಆ/ಪಾಂ.ಪುರ/ಸರಬ/ಹೊರಗುತ್ತಿಗೆಗ್ರೂಪ್-ಡಿ(02)/2022-23
ದಿನಾಂಕ:13.02.2023

### ಟೆಂಡರ್ ಅಧಿಸೂಚನೆ

ಉಪ-ವಿಭಾಗೀಯ ಆಸ್ಪತ್ರೆ, ಪಾಂಡವಪುರ ಆಸ್ಪತ್ರೆಗೆ 2023-24ನೇ ಸಾಲಿಗೆ 13 ಗ್ರೂಪ್ 'ಡಿ' ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೂಲಕ ಗುತ್ತಿಗೆಯನ್ನು ನೀಡುವ ಸಂಬಂಧ ಅರ್ಹ ಟೆಂಡರ್‌ದಾರರಿಂದ/ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವಿಳಾಸ **http://eproc.karnataka.gov.in**ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಗಳನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. (1) ಟೆಂಡರ್ ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ : **14.02.2023 ರಿಂದ.** (2) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **15.03.2023 ಸಂಜೆ 5.00 ರವರೆಗೆ.** (3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16.03.2023 ಬೆಳಿಗ್ಗೆ 11.00 ಗಂಟೆ ನಂತರ.** (4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ : **ತಾಂತ್ರಿಕ ಲಕೋಟೆಯನ್ನು ತೆರೆದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು.** (5) ಟೆಂಡರಿನ ಅಂದಾಜು ಮೊತ್ತ : **ರೂ.27,00,000-00** (ರೂ. ಇಪ್ಪತ್ತೇಳು ಲಕ್ಷ ರೂ.ಗಳು ಮಾತ್ರ). (6) ಟೆಂಡರ್‌ಗೆ ನಿಗಧಿಪಡಿಸಿದ ಇ.ಎಂ.ಡಿ. (2.5%) : **ರೂ.67,500/- (ರೂ.ಅರವತ್ತೇಳು ಸಾವಿರದ ಐದು ನೂರು ರೂ.ಗಳು ಮಾತ್ರ).**

ಸಹಿ/-ಮುಖ್ಯ ಆಡಳಿತ ವೈದ್ಯಾಧಿಕಾರಿಗಳು,
ಉಪ-ವಿಭಾಗೀಯ ಆಸ್ಪತ್ರೆ, ಪಾಂಡವಪುರ, ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/685/2022-23

ಮೂರನೇ ಪುಟದಿಂದ

## 'ಸರ್ವೇ ಜನಾಃ ಸುಖಿನೋ ಭವಂತು'

ಆದಾಯವನ್ನು ಶೇಕಡಾ ಇಪ್ಪತ್ತರಷ್ಟು ಹೆಚ್ಚಳವಾಗುವಂತೆ ನೋಡಿಕೊಂಡಿದ್ದಾರೆ. ಮದ್ಯದ ಮೇಲೆ ಯಾವುದೇ ಹೊರೆ ಹೇರದಿದ್ದರೂ ವಾರ್ಷಿಕ ಆದಾಯ ಮಿತಿಯನ್ನು 29 ಸಾವಿರದಿಂದ 35 ಸಾವಿರ ಕೋಟಿ ಗುರಿ ವಿಧಿಸಿದ್ದಾರೆ. ಇದೇ ಮೊದಲ ಬಾರಿ ಮೂರು ಲಕ್ಷ ಕೋಟಿ ರೂಪಾಯಿಗಳ ಗಡಿ ದಾಟಿರುವ ರಾಜ್ಯ ಬಜೆಟ್ 1,64,653 ಕೋಟಿ ರೂಪಾಯಿಗಳ ಸ್ವಂತ ಆದಾಯವನ್ನು ನಿರೀಕ್ಷೆ ಮಾಡಿದ್ದು, ತೆರಿಗೆಯೇತರ ಮೂಲಗಳಿಂದ 11 ಸಾವಿರ ಕೋಟಿ ರೂಪಾಯಿ ಆದಾಯ ನಿರೀಕ್ಷಿಸಿದೆ. ಇದೇ ರೀತಿ ಕೇಂದ್ರದ ಅನುದಾನಗಳಿಂದ 37,252 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಲಾಗಿದ್ದು, ಕೇಂದ್ರದ ಸಹಾಯಧನದ ರೂಪದಲ್ಲಿ 13005 ರೂಪಾಯಿಗಳಷ್ಟು ಆದಾಯವನ್ನು ನಿರೀಕ್ಷೆ ಮಾಡಿದೆ. ಈ ಮಧ್ಯೆ ಬಜೆಟ್ ಗಾತ್ರವನ್ನು ಸರಿದೂಗಿಸಲು 77,750 ಕೋಟಿ ರೂಪಾಯಿಗಳಷ್ಟು ಸಾಲ ಎತ್ತಲು ನಿರ್ಧರಿಸಲಾಗಿದ್ದು, ಋಣೇತರ ಸ್ವೀಕೃತಿ ಮತ್ತು ಸಾಲ ವಸೂಲಾತಿಯ ಮೂಲಕ 251 ಕೋಟಿ ರೂಪಾಯಿ ಸಂಗ್ರಹಿಸಲಿದೆ.

ಬಜೆಟ್‌ನಲ್ಲಿ ಸಂಗ್ರಹವಾಗುವ ಹಣದಲ್ಲಿ ಶಿಕ್ಷಣಕ್ಕೆ 37,690 ಕೋಟಿ ರೂಪಾಯಿ ನೀಡಲು ತೀರ್ಮಾನಿಸಲಾಗಿದ್ದು, ಜಲ ಸಂಪನ್ಮೂಲಕ್ಕೆ 22,854 ಕೋಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬಾಬ್ತಿಗೆ 20,494 ಕೋಟಿ, ನಗರಾಭಿವೃದ್ಧಿಗೆ 17,398 ಕೋಟಿ ರೂಪಾಯಿ ನೀಡಲಾಗಿದೆ. ಆರೋಗ್ಯಕ್ಕೆ 15,151 ಕೋಟಿ, ಒಳಾಡಳಿತ ಮತ್ತು ಸಾರಿಗೆಗೆ 14509 ಕೋಟಿ,ಇಂಧನಕ್ಕೆ 13803 ಕೋಟಿ, ಸಮಾಜ ಕಲ್ಯಾಣಕ್ಕೆ 11,163 ಕೋಟಿ ರೂಪಾಯಿ ನೀಡಲಾಗಿದೆ.

### 3 ರಿಂದ 5 ಲಕ್ಷಕ್ಕೆ ಏರಿಕೆ

10 ಸಾವಿರ ರೂ.ಗಳ ಸಹಾಯಧನ ನೀಡಲು ನಿರ್ಧರಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ರೈತರಿಗೆ ಭಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ ಮುಂತಾದ ಪರಿಕರಗಳನ್ನು ಖರೀದಿಸಲು ಅನುಕೂಲವಾಗಲಿದೆ. ಈ ಮೊತ್ತದಲ್ಲಿ ರಾಜ್ಯ ಸರ್ಕಾರದ 2,500 ರೂ. ನಬಾರ್ಡ್‌ನ 7500 ರೂ. ಸೇರಿದ್ದು, ರಾಜ್ಯದ 50 ಲಕ್ಷ ರೈತರಿಗೆ ಅನುಕೂಲವಾಗಲಿದೆ ಎಂದರು. ರಾಜ್ಯದ 56 ಲಕ್ಷ ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಿಗೆ 180 ಕೋಟಿ ರೂ. ವೆಚ್ಚದಲ್ಲಿ ಜೀವನ್ ಜ್ಯೋತಿ ವಿಮಾ ಯೋಜನೆಯ ನೆರವಿನೊಂದಿಗೆ ಅವರ ಬದುಕಿಗೆ ಭದ್ರತೆ ಒದಗಿಸಲು ಕ್ರಮ ವಹಿಸಲಾಗುವುದು.

ಅಲ್ಲದೆ, ಕೃಷಿಯಂತ್ರಧಾರೆ ಕೇಂದ್ರಗಳಲ್ಲಿ 300 ಹೈಟೆಕ್ ಹಾರ್ವೆಸ್ಟರ್‌ಗಳನ್ನು ಹಂತ ಹಂತವಾಗಿ ಒದಗಿಸಲು ಆಯವ್ಯಯದಲ್ಲಿ 100 ಹೈಟೆಕ್ ಹಾರ್ವೆಸ್ಟರ್‌ಗಳಿಗೆ ತಲಾ 50 ಲಕ್ಷ ರೂ.ನಂತೆ 50 ಕೋಟಿ ಒದಗಿಸಿರುವುದಾಗಿ ಹೇಳಿದರು.

ಇಸ್ರೋ ಸಂಸ್ಥೆ ಸಹಯೋಗದಲ್ಲಿ ಡಿಜಿಟಲ್ ಕೃಷಿಯಲ್ಲಿ ಜಿಯೋ-ಸ್ಪೇಷಿಯಲ್ ತಾಂತ್ರಿಕತೆಗಳನ್ನು ಅಳವಡಿಸಲು 50 ಕೋಟಿ ರೂ. ವೆಚ್ಚದಲ್ಲಿ ಹೊಸ ಕಾರ್ಯಕ್ರಮ ರೂಪಿಸಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ತಲಾ 10 ಲಕ್ಷ ರೂ.ವರೆಗಿನ ಬಂಡವಾಳಕ್ಕೆ 5 ವರ್ಷಗಳ ಅವಧಿಗೆ ಬ್ಯಾಂಕ್ ಮೂಲಕ ಮುಖ್ಯಮಂತ್ರಿ ರೈತ ಉನ್ನತಿ ಯೋಜನೆಯಡಿ ಬಡ್ಡಿ ಸಹಾಯಧನ ಒದಗಿಸುವುದಾಗಿ ಪ್ರಕಟಿಸಿದರು.

ರೈತಸಿರಿ ಯೋಜನೆಯಡಿ ಕಿರುಧಾನ್ಯಗಳ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ಹತ್ತು ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುವುದು. ಪ್ರತಿ ತಾಲೂಕಿಗೆ ಒಂದರಂತೆ ತಲಾ 50 ಹೆಕ್ಟೇರ್ ಪ್ರದೇಶದಲ್ಲಿ ಗುಂಚ ಮಾದರಿಯಲ್ಲಿ ನಾಲ್ಕು ವರ್ಷಗಳಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶವನ್ನು ನೈಸರ್ಗಿಕ ಮತ್ತು ಸಮಗ್ರ ಕೃಷಿಗೆ ಒಳಪಡಿಸುವುದಾಗಿ ತಿಳಿಸಿದರು.

### ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ

ವಿದ್ಯಾವಾಹಿನಿ ಎಂಬ ಯೋಜನೆಯಡಿಯಲ್ಲಿ 350 ಕೋಟಿ ರೂ. ವೆಚ್ಚದಲ್ಲಿ ಬಸ್ ಪಾಸ್ ಸೌಲಭ್ಯ ಒದಗಿಸಲಾಗಿದೆ. ಇದರಿಂದ ಎಂಟು ಲಕ್ಷ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲಿದೆ. ತಾಲೂಕು ಮಟ್ಟದಲ್ಲಿ ಉನ್ನತ ಶಿಕ್ಷಣವನ್ನು ಬಲಪಡಿಸಲು 125 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ಕೊಠಡಿಗಳು, ಶೌಚಾಲಯ, ವಿಜ್ಞಾನ ಪ್ರಯೋಗಾಲಯಗಳನ್ನು ಪ್ರಾರಂಭಿಸಲಾಗುವುದು. ಅಷ್ಟೇ ಅಲ್ಲದೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಿಗೆ ಅಗತ್ಯ ಮೂಲಸೌಲಭ್ಯ ಮತ್ತು ಶೈಕ್ಷಣಿಕ ಉಪಕರಗಳನ್ನು ಒದಗಿಸುವುದಾಗಿ ಹೇಳಿದ್ದಾರೆ.

**ಕನ್ನಡಕ್ಕೆ ಕಾಣಿಕೆ:** ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣವನ್ನು ಪೂರೈಸುವ 500 ಅತ್ಯುತ್ತಮ ವಿದ್ಯಾರ್ಥಿಗಳಿಗೆ ಸಿಇಟಿ ಮೂಲಕ ಸರ್ಕಾರಿ ಕೋಟಾದಲ್ಲಿ ಆಯ್ಕೆಯಾದ ವೃತ್ತಿಪರ ಶಿಕ್ಷಣದ ಸಂಪೂರ್ಣ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭರಿಸಲಿದೆ. ಪ್ರತಿ ಜಿಲ್ಲೆಯಲ್ಲಿ ಒಂದರಂತೆ ಅತೀ ಹೆಚ್ಚು ದಾಖಲಾತಿ ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಿಗೆ ವೃದ್ಧಿ ಯೋಜನೆಯಡಿ ತಲಾ ಎರಡು ಕೋಟಿ ರೂ.ನಂತೆ. 124 ಕೋಟಿ ರೂ. ವೆಚ್ಚದಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುವುದು. ಕೆ.ಆರ್.ಪೇಟೆ, ಹಾಸನ, ಹಾವೇರಿ, ಬೆಂಗಳೂರು, ರಾಮನಗರ, ತಳಕಲ್ ಹಾಗೂ ಕಾರವಾರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲೇ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಾಗಿ ಉನ್ನತೀಕರಿಸಲಾಗುವುದು. ಪ್ರೊ. ಸಡಗೋಪನ್ ನೇತೃತ್ವದ ತಜ್ಞರ ಸಮಿತಿಯು ಕೆಐಟಿಗಳಾಗಿ ಅಭಿವೃದ್ಧಿಪಡಿಸಲು ಅಗತ್ಯವಿರುವ ಸೌಲಭ್ಯಗಳು ಮತ್ತು ಮೂಲಸೌಕರ್ಯಗಳ ಕುರಿತು ವರದಿ ಸಲ್ಲಿಸಿದೆ. ಸಮಿತಿಯ ಶಿಫಾರಸ್ಸಿನ ಅನ್ವಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶಕ್ಕಾಗಿ 50 ಕೋಟಿ ರೂ. ನೀಡಲಾಗಿದೆ.

ಪ್ರಸಕ್ತ ವರ್ಷ 7601 ಶಾಲಾ ಮತ್ತು ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು 1194 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ರಾಜ್ಯದ 93 ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಒದಗಿಸಲು ಎಲ್ಲಾ ಪದವಿಪೂರ್ವ ಕಾಲೇಜುಗಳಲ್ಲಿ 632 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಸಕ್ತ ವರ್ಷದಲ್ಲಿ ಹೆಚ್ಚುವರಿಯಾಗಿ 1,230 ಕೊಠಡಿಗಳ ನಿರ್ಮಾಣ ಮಾಡಲಾಗುವುದು. ಅಧಿಕ ಮಳೆಯಿಂದಾಗಿ ಹಾನಿಯಾಗಿರುವ 2,777 ಕೊಠಡಿಗಳ ದುರಸ್ತಿ, ಅಧಿಕ ದಾಖಲಾತಿಯಿರುವ ಶಾಲಾ-ಕಾಲೇಜುಗಳಲ್ಲಿ ಹೆಚ್ಚುವರಿ ಶೌಚಾಲಯಗಳ ನಿರ್ಮಾಣ, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕೊಠಡಿಗಳ 260 ತರಗತಿ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

### ಬೊಮ್ಮಾಯಿ ಬಜೆಟ್‌ನಲ್ಲಿ ಕವಿತೆಗಳ ಝಲಕ್

ಮಾಡುವ ವೇಳೆ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಬರೆದ 'ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯ ಹಚ್ಚೋಣ ಮತಗಳೆಲ್ಲವು ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕೋಣ' ಸಾಲುಗಳನ್ನು ಓದಿದರು. ಆರನೆ ವಲಯ ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಗಳು ಕುರಿತು ಬಜೆಟ್ ಮಂಡನೆ ಮಾಡುವ ವೇಳೆ ಡಿವಿಜಿ ಅವರು ಬರೆದ 'ಜಾನಪದಗಳು, ರಾಜ್ಯ ಸಾಮ್ರಾಜ್ಯಗಳು, ಗುರುಸ್ಥಾನಗಳು, ಧರ್ಮಗಳು, ಭಾಷೆ ವಿದ್ಯೆಗಳು, ಕಾಣಿಸದೆ ಸಾಗಿಹವು ಕಾಲಪ್ರವಾಹದಲಿ ಮಾನವತೆ ನಿಂತಿಹುದು ಮಂಕುತಿಮ್ಮ' ಎಂಬ ಸಾಲುಗಳನ್ನು ಓದುವ ಮೂಲಕ ಜಾನಪದ, ರಾಜ್ಯ ಸಾಮ್ರಾಜ್ಯ, ಗುರುಸ್ಥಾನಗಳು, ಧರ್ಮಗಳು, ಭಾಷೆ ವಿದ್ಯೆಗಳು ಪ್ರಸ್ತುತ ಪ್ರಜಾಪ್ರಭುತ್ವದಲ್ಲಿ ಇಲಾಖೆಗಳಾಗಿ ಮಾರ್ಪಟ್ಟಿವೆ. ಆದರೆ ಇವು ಅನಾಧಿಕಾಲದಿಂದಲೂ ಇದ್ದು, ನಾವು ನೆಪಕ್ಕೆ ಮಾತ್ರ ಎಂದೆಂದಿಗೂ ಇವು ನಿಲ್ಲುವುದಿಲ್ಲ ಎಂಬ ಆಶಯ ವ್ಯಕ್ತವಾಗಿದೆ.

### 5 ಲಕ್ಷ ಮನೆಗಳ ನಿರ್ಮಾಣ

ಆನ್‌ಲೈನ್‌ನಲ್ಲಿ ಫಲಾನುಭವಿಗಳೇ ಆಯ್ಕೆ ಮಾಡಿಕೊಳ್ಳುವ ಪಾರದರ್ಶಕ ವ್ಯವಸ್ಥೆ ರೂಪಿಸಲಾಗಿದೆ. ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಲ್ಲಿ ಎಲ್ಲಾ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಿದೆ. ಈ ಉದ್ದೇಶಕ್ಕೆ ಪ್ರಸಕ್ತ ವರ್ಷದಲ್ಲಿ 500 ಕೋಟಿ ರೂ. ಒದಗಿಸಲಾಗಿದ್ದು, ಅವಶ್ಯಕತೆ ಇದ್ದಲ್ಲಿ ಹೆಚ್ಚುವರಿ ಅನುದಾನ ಒದಗಿಸಲಾಗುವುದು ಎಂದರು. ಅತಿವೃಷ್ಟಿಯಿಂದ ಸಂಪೂರ್ಣವಾಗಿ ಹಾನಿಯಾಗಿರುವ ಮನೆಗಳ ಪುನರ್ ನಿರ್ಮಾಣಕ್ಕೆ ನೀಡುತ್ತಿರುವ ಸಹಾಯಧನವನ್ನು ಸರ್ಕಾರ 5 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ವಿವಿಧ ವರ್ಗಗಳಡಿ ಕಳೆದ 4 ವರ್ಷಗಳಲ್ಲಿ 3,01,884 ಮನೆಗಳ ಪುನರ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು, ಇದಕ್ಕೆ ಇಲ್ಲಿಯವರೆಗೂ 2,627 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಸರ್ಕಾರಿ ಮಾಲೀಕತ್ವದಲ್ಲಿ ಇರುವ ಕೊಳಗೇರಿ ಪ್ರದೇಶದಲ್ಲಿ ವಾಸಿಸುವ 1.14 ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ನೀಡಿದ್ದು, ವರ್ಷಾಂತ್ಯದಲ್ಲಿ ಎಲ್ಲಾ 3.36 ಲಕ್ಷ ಕುಟುಂಬಗಳಿಗೂ ಭೂ ಮಾಲೀಕತ್ವದ ಹಕ್ಕು ಪತ್ರ ನೀಡಲಾಗುವುದು ಎಂದು ಅವರು ಹೇಳಿದರು.



# ಮೈಸೂರಲ್ಲಿ ಮಹಾಶಿವರಾತ್ರಿ ಆಚರಣೆಗೆ ಭಕ್ತಿ, ಸಂಭ್ರಮದ ಸಿದ್ಧತೆ



## ಅರಮನೆ ಆವರಣದ ತ್ರಿನೇಶ್ವರಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿ ವಶಕ್ಕೆ ಚಿನ್ನದ ಕೊಳಗ



### ಗುರುಕುಲದಲ್ಲೂ ಪೂಜೆ



ಮೈಸೂರಿನ ರಾಮಾನುಜ ರಸ್ತೆಯಲ್ಲಿ ಗುರುಕುಲದಲ್ಲಿರುವ 101 ಶಿವಲಿಂಗ ದರ್ಶನಕ್ಕೆ ಶಿವರಾತ್ರಿ ಹಬ್ಬದ ದಿನ ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ಪದ್ಧತಿ ಚಾಲ್ತಿಯಲ್ಲಿದೆ. ಒಂದೇ ಸ್ಥಳದಲ್ಲಿ 101 ಶಿವಲಿಂಗ ಇರುವುದರಿಂದ ಎಲ್ಲ ಲಿಂಗಗಳಿಗೂ ಬಿಲ್ವಪತ್ರೆ ಸಮರ್ಪಿಸಿದರೆ ಒಳಿತಾಗಲಿದೆ ಎಂಬ ನಂಬಿಕೆ ಇದೆ. ಈ ಹಿನ್ನೆಲೆಯಲ್ಲಿ ಗುರುಕುಲದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಲ್ಲದೆ, ಪಕ್ಕದಲ್ಲೇ ಇರುವ ಕಾಮಕಾಮೇಶ್ವರಿ ದೇವಾಲಯದಲ್ಲೂ ವಿಶೇಷ ಪೂಜಾ ಮಹೋತ್ಸವ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮೈಸೂರು,ಫೆ.17(ಎಂಟಿವೈ)- ಸಾಂಸ್ಕೃತಿಕ ಮೈಸೂರಲ್ಲಿ ಮಹಾಶಿವರಾತ್ರಿ ಹಬ್ಬ ಸಂಭ್ರಮ ಮನೆ ಮಾಡಿದ್ದು, ವಿವಿಧ ಶಿವನ ದೇವಾಲಯದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಅರಮನೆ ಆವರಣದ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಜಿಲ್ಲಾ ಖಜಾನೆಯಿಂದ 11ಕೆಜಿ ತೂಕದ ಚಿನ್ನದ ಕೊಳಗ(ಮುಖವಾಡ) ವನ್ನು ತಂದು ದೇವಾಲಯದ ಆಡಳಿತ ಮಂಡಳಿ ಸುಪರ್ದಿಗೆ ನೀಡಲಾಯಿತು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಕೆಲವು ನಿರ್ಬಂಧದೊಂದಿಗೆ ಶಿವರಾತ್ರಿ ಹಬ್ಬ ಸರಳವಾಗಿ ಆಚರಿಸಿದ್ದ ಮೈಸೂರಿನ ಜನ, ಈ ವರ್ಷ ಸಡಗರ ಸಂಭ್ರಮದಿಂದ ಶಿವರಾತ್ರಿ ಆಚರಣೆಗೆ ಮುಂದಾಗಿದ್ದಾರೆ. ಇದರೊಂದಿಗೆ ವಿವಿಧ ದೇವಾಲಯಗಳಲ್ಲೂ ಶಿವರಾತ್ರಿ ಹಬ್ಬದ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎರಡು ವರ್ಷದ ಬಳಿಕ ಶಿವರಾತ್ರಿ ದಿನ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಭದ್ರತೆಯೊಂದಿಗೆ, ಭಕ್ತರು ಸಾಲಾಗಿ ದೇವಾಲಯ ಪ್ರವೇಶಿಸಲು ವ್ಯವಸ್ಥೆ ಮಾಡಲಾಗಿದೆ.

**ಚಿನ್ನದ ಕೊಳಗ:** ಪ್ರತಿ ವರ್ಷ ಶಿವರಾತ್ರಿ ದಿನ ಮೈಸೂರು ಅರಮನೆ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜಾ ಮಹೋತ್ಸವ ಜರುಗಲಿದೆ ಪುರಾಣ ಪ್ರಸಿದ್ಧ ಈ ದೇವಾಲಯದಲ್ಲಿ ಶಿವನ ಲಿಂಗಕ್ಕೆ ಚಿನ್ನದ ಕೊಳಗ ಧಾರಣೆ ಮಾಡುವುದು ಸಂಪ್ರದಾಯವಾಗಿದೆ ಮೈಸೂರು ಸಂಸ್ಥಾನದ ರಾಜವಂಶಸ್ಥ ಜಯಚಾಮರಾಜೇಂದ್ರ ಒಡೆಯರ್ ಅವರು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಜನನದ ಹಿನ್ನೆಲೆಯಲ್ಲಿ 11 ಕೆಜಿ ತೂಕದ ಚಿನ್ನದ ಕೊಳಗ(ಮುಖವಾಡ)ವನ್ನು 1954ರಲ್ಲಿ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಅರ್ಪಿಸಿದ್ದರು. ಅಂದಿನಿಂದ ಶಿವರಾತ್ರಿ ಹಬ್ಬದ ದಿನ ಮಾತ್ರ ಚಿನ್ನದ ಕೊಳಗವನ್ನು ತ್ರಿನೇಶ್ವರ ಸ್ವಾಮಿ ಶಿವಲಿಂಗಕ್ಕೆ ಧರಿಸಿ, ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಬಿಗಿ ಭದ್ರತೆಯಲ್ಲಿ ಮುಜರಾಯಿ ತಹಶೀಲ್ದಾರ್ ಕೃಷ್ಣ, ಚಾಮುಂಡಿಬೆಟ್ಟದ ದೇವಾಲಯದ ಆಡಳಿತಾಧಿಕಾರಿ ಗೋವಿಂದ ರಾಜು, ಸಹಾಯಕ ಆಡಳಿತಾಧಿಕಾರಿ ದಿನೇಶ್ ಸೇರಿದಂತೆ ಇನ್ನಿತರರು ಬಿಗಿ ಭದ್ರತೆಯೊಂದಿಗೆ ಜಿಲ್ಲಾ ಖಜಾನೆಯಿಂದ ಕೊಳಗವನ್ನು ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಾಲಯಕ್ಕೆ ತಂದರು. ಬಳಿಕ ಕೊಳಗದಲ್ಲಿರುವ ವಿವಿಧ ಆಭರಣಗಳನ್ನು ಮತ್ತೊಮ್ಮೆ ಪರಿಶೀಲಿಸಿ, ದೇವಾಲಯದ ಸುಪರ್ದಿಗೆ ನೀಡಲಾಯಿತು. ಈ ವೇಳೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ದೇವಾಲಯದ ಆಗಮಿಕ ಎಂ.ಎಸ್.ಸಂತಾನ್ ದೀಕ್ಷಿತ್, ಸ್ಥಾನಿಕ ವಿ.ಮೋಹನ್, ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಮುಜರಾಯಿ ಇಲಾಖೆಯ ಶೀಲಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು ಚಿನ್ನದ ಕೊಳಗವನ್ನು ಸ್ವೀಕರಿಸಿದರು.

**ಈ ಬಾರಿ ಎರಡು ದಿನ ವೀಕ್ಷಣೆಗೆ ಅವಕಾಶ**


ಪ್ರತಿ ವರ್ಷ ಚಿನ್ನದ ಕೊಳಗದೊಂದಿಗೆ ಕಂಗೊಳಿಸುತ್ತಿದ್ದ ತ್ರಿನೇಶ್ವರನನ್ನು ನೋಡುವ ಸೌಭಾಗ್ಯ ಒಂದೇ ಒಂದು ದಿನ ಮಾತ್ರ ಸಿಗುತ್ತಿತ್ತು ಆದರೆ, ಈ ಬಾರಿ ಎರಡು ದಿನ ಚಿನ್ನದ ಕೊಳಗ ಶಿವಲಿಂಗಕ್ಕೆ ಧಾರಣೆಯಾಗಿರುತ್ತದೆ. ಹಬ್ಬದ ಮರುದಿನ ಭಾನುವಾರವಾಗಿರುವ ಹಿನ್ನೆಲೆಯಲ್ಲಿ ಖಜಾನೆಗೆ ರಜೆ ಇರುವ ಕಾರಣ, ಕೊಳಗವನ್ನು ಶಿವಲಿಂಗದ ಮೇಲೆ ಇರುವಂತೆ ಸೂಚಿಸಲಾಗಿದೆ. ಇದರಿಂದ ಶನಿವಾರ ಮುಂಜಾನೆ 6 ಗಂಟೆಯಿಂದ ನಿರಂತರವಾಗಿ ಭಾನುವಾರ ರಾತ್ರಿ 9 ಗಂಟೆವರೆಗೂ ಭಕ್ತರು ಹಾಗೂ ಪ್ರವಾಸಿಗರು ಚಿನ್ನದ ಕೊಳಗದೊಂದಿಗೆ ಕಂಗೊಳಿಸಲಿರುವ ತ್ರಿನೇಶ್ವರಸ್ವಾಮಿಯನ್ನು ಕಣ್ತುಂಬಿಕೊಳ್ಳಬಹುದಾಗಿದೆ ಫೆ20ರಂದು (ಸೋಮವಾರ) ಬೆಳಗ್ಗೆ 11 ಗಂಟೆಗೆ ದೇವಾಲಯದಿಂದ ಚಿನ್ನದ ಕೊಳಗವನ್ನು ಖಜಾನೆಗೆ ಕೊಂಡೊಯ್ಯಲಾಗುತ್ತದೆ.

ಶಿವರಾತ್ರಿ ಹಬ್ಬದ ದಿನ ಮುಂಜಾನೆ 4 ರಿಂದ 6 ಗಂಟೆಯೊಳಗೆ ವಿಶೇಷ ಪೂಜೆ ಸಲ್ಲಿಸಿ, ಚಿನ್ನದ ಕೊಳಗ ಧರಿಸಿ ನಂತರ ಹೂವಿನ ಅಲಂಕಾರ ಮಾಡಿ, ರಾಜವಂಶಸ್ಥರ ಹೆಸರಲ್ಲಿ ಮೊದಲ ಪೂಜೆ ಸಲ್ಲಿಸಲಾಗುತ್ತದೆ. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಲಿದ್ದಾರೆ. ನಂತರ ಬೆಳಗ್ಗೆ 6 ಗಂಟೆಯಿಂದ ಭಕ್ತರ ದರ್ಶನಕ್ಕೆ ಪ್ರವೇಶಾವಕಾಶ ನೀಡಲಾಗುತ್ತದೆ. ಅಂದು ಮಧ್ಯರಾತ್ರಿ 12 ಗಂಟೆವರೆಗೂ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ ಜಯಮಾರ್ತಾಂಡ ಗೇಟ್ ಸಮೀಪದಿಂದ ಭಕ್ತರಿಗೆ ಸರದಿ ಸಾಲಿನಲ್ಲಿ ದೇವಾಲಯಕ್ಕೆ ಬರಲು ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ದರ್ಶನದ ನಂತರ ವಾಪಸ್ಸಾಗುವ ವೇಳೆ ಪ್ರಸಾದ ವಿತರಿಸಲು ವ್ಯವಸ್ಥೆ ಮಾಡಲಾಗಿದೆ. ಮುಂಜಾನೆವರೆಗೂ ದರ್ಶನ ಪಡೆಯಲು ಭಕ್ತರು ಆಗಮಿಸುವುದರಿಂದ ದೇವಾಲಯದ ಸುತ್ತಲೂ ದೀಪದ ವ್ಯವಸ್ಥೆ ಮಾಡಲಾಗಿದೆ. ಶಸ್ತ್ರಸಜ್ಜಿತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

**ವಿವಿಧ ಮಹದೇಶ್ವರ ದೇವಾಲಯದಲ್ಲೂ ಸಿದ್ಧತೆ:** ಮೈಸೂರಿನ ವಿವಿಧೆಡೆ ಇರುವ ಮಹದೇಶ್ವರ ದೇವಾಲಯದಲ್ಲೂ ಶಿವರಾತ್ರಿ ಪೂಜೆ ಜರುಗಲಿದೆ. ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಮಹಾದೇಶ್ವರ ದೇವಾಲಯ, ಸುಣ್ಣದಕೇರಿ ಮಹಾದೇಶ್ವರ, ನಜರ್‌ಬಾದ್, ಕುಂಬಾರಕೊಪ್ಪಲು, ಕೆಟಿಸ್ಟ್ರೀಟ್, ಪಡುವಾರಹಳ್ಳಿಯಲ್ಲಿರುವ ಮಹದೇಶ್ವರ ದೇವಾಲಯದಲ್ಲೂ ವಿಶೇಷ ಪೂಜಾ ಮಹೋತ್ಸವ ಜರುಗಲಿದ್ದು, ವಿಶೇಷ ಅಲಂಕಾರ ಮಾಡಲಾಗಿದೆ.

# ಅಕೌಂಟಿಂಗ್ ಎಂಬುದು ವೃತ್ತಿಪರತೆಯ ನಾಯಕನಿದ್ದಂತೆ

## ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸದಲ್ಲಿ ಎಐಸಿಪಿಎ ಅಧ್ಯಕ್ಷ ಅನೂಪ್ ಎನ್. ಮೆಹ್ತಾ ಅಭಿಮತ



ಮೈಸೂರು, ಫೆ. 17(ಆರ್‌ಕೆ)- ಅಕೌಂಟಿಂಗ್ ಎಂಬುದು ವೃತ್ತಿ ಮತ್ತು ವೃತ್ತಿಪರತೆಯ ನಾಯಕನಿದ್ದಂತೆ ಎಂದು ಅಮೇರಿಕಾದ ಅಸೋಸಿಯೇಷನ್ ಆಫ್ ಇಂಟರ್‌ನ್ಯಾಷನಲ್ ಸರ್ಟಿಫೈಡ್ ಪ್ರೊಫೆಷನಲ್ ಅಕೌಂಟೆಂಟ್ಸ್ ಅಧ್ಯಕ್ಷರಾದ ಅನಾಲಿಟಿಕಲ್ ಮೆಕಾನಿಕ್ಸ್ ಅಸೋಸಿಯೇಟ್ಸ್ ಮುಖ್ಯಸ್ಥ ಅನೂಪ್ ಎನ್. ಮೆಹ್ತಾ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠವು ಮೈಸೂರಿನ ಜೆಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿದ್ಯಾಪೀಠದ ಸುವರ್ಣ ಮಹೋತ್ಸವದ 13ನೇ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು 'Tomorro's India begins today: Leveraging Accountabality for ESG' ವಿಷಯ ಕುರಿತು ಉಪನ್ಯಾಸ ನೀಡಿದರು.

ನಾಯಕರಾದವರು ಕೇವಲ ಪ್ರತಿಕ್ರಿಯಿಸುವುದಿಲ್ಲ, ಅವರು ವ್ಯವಸ್ಥೆಗೆ ಒಂದು ರೂಪ ನೀಡುತ್ತಾರೆ. ಹೊಸ ಹೊಸ ಅನ್ವೇಷಣೆಗಳ ಮೂಲಕ ತಾಂತ್ರಿಕ ಮತ್ತು ವೃತ್ತಿಯ ಗುಣಮಟ್ಟ ಹೆಚ್ಚಿಸಿ ತಮ್ಮ ನಡವಳಿಕೆ, ಬದ್ಧತೆ ಹಾಗೂ ವಿಶ್ವಾಸಾಹತೆಯಿಂದ ಸಮಾಜದ ಘನತೆಯನ್ನೂ ಹೆಚ್ಚಿಸುತ್ತಾರೆ. ಅದೇ ರೀತಿ ಅಕೌಂಟಿಕ್ ವೃತ್ತಿಯೂ ಸಹ ಸುಸ್ಥಿರ ಸಮಾಜ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ನಮ್ಮ ದೇಶದ ಹಲವು ಕ್ಷೇತ್ರಗಳಲ್ಲಿ ಅತೀ ವೇಗವಾಗಿ ಬದಲಾವಣೆಯಾಗಿರುವುದು ಅದಕ್ಕೆ ನಿದರ್ಶನ. ನಮ್ಮ ಮೌಲ್ಯಾದರ್ಶಗಳನ್ನು ಎತ್ತಿ ಹಿಡಿದು ಆರ್ಥಿಕ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಚಾರ್ಟರ್ಡ್ ಅಕೌಂಟಿಂಗ್ ವೃತ್ತಿಯು ಮುಂಚೂಣಿಯಲ್ಲಿದೆ ಎಂದು ಮೆಹ್ತಾ ಇದೇ ಸಂದರ್ಭ ನುಡಿದರು.

ಅಕೌಂಟೆಂಟ್‌ಗಳನ್ನು ಸಾಮಾನ್ಯವಾಗಿ ನಂಬಿಕಸ್ಥ ಸಲಹೆಗಾರರೆಂದು ಕರೆಯಲಾಗುತ್ತದೆ. ಏಕೆಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಮ್ಮ ದೇಶ ಪ್ರಗತಿ ಹಂತದಲ್ಲಿರುವುದರಿಂದ ಆ ವೃತ್ತಿಗೂ ಗೌರವ ಬಂದಿದೆ ಎಂಬುದನ್ನು ಮರೆಯುವಂತಿಲ್ಲ ಯಾವುದೇ ಅಕೌಂಟೆಂಟ್ ಜನರ ಮತ್ತು ತನ್ನ ಕಕ್ಷಿದಾರರ ವಿಶ್ವಾಸ ಗಳಿಸದಿದ್ದರೆ, ಅವರು ಈ ಸೇವೆಯಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ. ಅವರು ಸಲಹೆಗಾರರ ಪಾತ್ರವನ್ನು ವಿಶ್ವಾಸಾರ್ಹತೆಯಿಂದ ನಿರ್ವಹಿಸಬೇಕಾಗುತ್ತದೆ ಎಂದು ಮೆಹ್ತಾ ಅಭಿಪ್ರಾಯಪಟ್ಟರು.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, 'ಬಡತನ ಮತ್ತು ಸುಸ್ಥಿರತೆ' ಪುಸ್ತಕವನ್ನು ಬಿಡುಗಡೆ ಮಾಡಿದರು. ಆದಾಯ ತೆರಿಗೆ ಆಯುಕ್ತ (Exemptions) ಮಣಿಯನ್ ಮತಿವಣನ್ ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ. ಹೆಚ್. ಬಸವನಗೌಡಪ್ಪ ಜೆಎಸ್‌ಎಸ್ ಆಸ್ಪತ್ರೆ ಮುಖ್ಯ ಹಣಕಾಸು ಅಧಿಕಾರಿ ಕೆ.ಎಂ. ಭಗವಾನ್ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್ ಪಾಲ್ಗೊಂಡಿದ್ದರು.







### ಟಿ.ಕೆ.ಬಡಾವಣೆಯಲ್ಲಿ ಕಂಪನದ ಅನುಭವ

ಮೈಸೂರು, ಫೆ.17(ಜಿಎ)- ಮೈಸೂರಿನ ಟಿ.ಕೆ.ಬಡಾವಣೆಯ ಕೆಲವು ನಿವಾಸಿಗಳಿಗೆ ಶುಕ್ರವಾರ ಮಧ್ಯಾಹ್ನ ಕಂಪನದೊಂದಿಗೆ ಭಾರೀ ಸದ್ದಿನ ಅನುಭವ ಆಗಿದೆ.

ಟಿ.ಕೆ.ಬಡಾವಣೆಯ ಒಂದೇ ಕ್ರಾಸ್ ಎರಡನೇ ಮುಖ್ಯ ರಸ್ತೆಯಲ್ಲಿರುವ ಹತ್ತಕ್ಕೂ ಹೆಚ್ಚಿನ ಮನೆಗಳು ಕಂಪಿಸಿ, ಭಾರೀ ಸದ್ದೊಂದು ಕೇಳಿದೆ ಅನುಭವವಾಗಿದೆ.

ಶುಕ್ರವಾರ ಮಧ್ಯಾಹ್ನ ಸರಿ ಸುಮಾರು 1.30ರ ಸಮಯದಲ್ಲಿ 4ರಿಂದ 5 ಸೆಕೆಂಡ್‌ಗಳ ಕಾಲ ಭೂಮಿ ಕಂಪಿಸಿ, ಮನೆಯ ಹಾಗೂ ಮನೆಯ ಕಿಟಕಿ, ಬಾಗಿಲು ಅಲುಗಾಡಿದ ಅನುಭವವಾಗಿತ್ತು ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸ್ಥಳೀಯರಾದ ಬಿ.ಆರ್.ನಾಗೇಶ್ ಮಾತನಾಡಿ, ನಾವು ಯಾವತ್ತೂ ಇಷ್ಟೊಂದು ದೊಡ್ಡ ಸದ್ದು ಕೇಳಿಯೇ ಇಲ್ಲ. ಜೊತೆಗೆ ಇಡೀ ಮನೆ ಕಂಪಿಸಿ, ಮನೆಯ ಕಿಟಕಿ, ಬಾಗಿಲ್ ಅಲುಗಾಡಿದ ಅನುಭವವಾಯಿತ್ತು. ಈ ರಸ್ತೆಯಲ್ಲಿರುವ ಹಲವಾರು ಮನೆಗಳಲ್ಲಿಯೂ ಇದೇ ರೀತಿ ಕಂಪಿಸಿದ್ದು, ಎಲ್ಲರಿಗೂ ಇದೇ ರೀತಿ ಅನುಭವವಾಗಿದೆ ಎಂದರು.


## ರೋಹಿಣಿ ಸಿಂಧೂರಿ ಆರೋಪ: ವಿಧಾನಸಭೆಯಲ್ಲಿ ಸಾರಾ ಪ್ರಸ್ತಾಪ


ಬೆಂಗಳೂರು, ಫೆ.17– ಮೈಸೂರಿನ ಹಿಂದಿನ ಡಿಸಿ ರೋಹಿಣಿ ಸಿಂಧೂರಿ ಅವರು ತಮ್ಮ ವಿರುದ್ಧ ಆಧಾರರಹಿತ ಆರೋಪ ಮಾಡಿರುವ ಬಗ್ಗೆ ಸತ್ಯಾಂಶ ಹೊರಬರ ಬೇಕೆಂದು ಕೆ.ಆರ್.ನಗರ ಶಾಸಕ ಸಾ.ರಾ. ಮಹೇಶ್ ವಿಧಾನಸಭೆಯಲ್ಲಿ ಆಗ್ರಹಿಸಿದರು.

ತಾನು ಗೋಮಾಳ, ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವುದಾಗಿ ರೋಹಿಣಿ ಸಿಂಧೂರಿ ಆರೋಪಿಸಿ, ತನ್ನ ಘನತೆಗೆ ಧಕ್ಕೆ ತಂದಿದ್ದರು. ಈ ಸಂಬಂಧ ತನಿಖೆ ನಡೆದು ಸತ್ಯಾಂಶ ಹೊರಬರಬೇಕೆಂದು ಕೇಳಿದ್ದೆ. ಆದರೆ ಈವರೆ ವಿಗೂ ಏನೂ ನಡೆದಿಲ್ಲ ಎಂದ ಅವರು, ಶಾಸಕ ನಾಗಿರುವ ನನ್ನನ್ನು ನಾನೇ ರಕ್ಷಣೆ ಮಾಡಿ ಕೊಳ್ಳಲು ಆಗುವುದಿಲ್ಲ ಎಂದರೆ ಇನ್ನು ಸಾರ್ವ ಜನಿಕರನ್ನು ರಕ್ಷಿಸುವುದು ಹೇಗೆ? ಎಂದು ಪ್ರಶ್ನಿಸಿದರು. ಅಧಿಕಾರಿಗಳಿಗೆ ಶೆಲ್ಟರ್ ಇದೆ. ಆದರೆ ನಮಗೆ ನೀವೇ (ವಿಧಾನಸಭಾಧ್ಯಕ್ಷರು) ಶೆಲ್ಟರ್ ಆಗಬೇಕು. ನಮಗೆ ರಕ್ಷಣೆ ನೀಡ ಬೇಕು ಎಂದ ಅವರು, ಡಿ.14ರಂದು 8 ಗಂಟೆಗೆ ಐಎಎಸ್ ಅಧಿಕಾರಿ ಮಣಿವಣ್ಣನ್ ಬಂದು ಬಾಗಿಲು ಬಡಿದರು. ನೋಡಿದರೆ ಅವರು (ರೋಹಿಣಿ ಸಿಂಧೂರಿ) ಇದ್ದಾರೆ ಎಂದು ಸಾ.ರಾ. ಮಹೇಶ್ ಹೇಳುತ್ತಿದ್ದಂತೆಯೇ ವಿಧಾನಸಭಾಧ್ಯಕ್ಷ ಕಾಗೇರಿ ಅವರ ಮಾತನ್ನು ಮಧ್ಯಕ್ಕೆ ತುಂಡರಿಸಿ, ಶಾಸಕರಿಗೆ ರಕ್ಷಣೆ ನೀಡುವ ಸಂಬಂಧ ಮಾತನಾಡಲಾರಂಭಿಸಿದರು. ಈ ವೇಳೆ ಶಾಸಕ ಅಭಯ್ ಪಾಟೀಲ್ ಅವರು ಸಾ.ರಾ. ಮಹೇಶ್ ಬೆಂಬಲಕ್ಕೆ ನಿಂತರು.











ಮೂರನೇ ಪುಟದಿಂದ

## ಹೂ ಇಟ್ಟುಕೊಂಡು ಬಂದ ಕೈ ನಾಯಕರು...

ಅವರು ಜನರ ಕಿವಿ ಮೇಲೆ ಹೂ ಇಟ್ಟಿದ್ದರು. ಈಗ ಅವರೇ ಕಿವಿ ಮೇಲೆ ಹೂವು ಇಟ್ಟುಕೊಂಡಿದ್ದಾರೆ. ಮುಂದೆ ಜನ ಇವರ ಕಿವಿ ಮೇಲೆ ಹೂ ಇಡುತ್ತಾರೆ ಎಂದು ಛೇಡಿಸಿದರು. ಬೊಮ್ಮಾಯಿ ಮಾತಿಗೆ ಗರಂ ಆದ ಸಿದ್ದರಾಮಯ್ಯ, ನೀವು ಜನರ ಕಿವಿ ಮೇಲೆ ಹೂವಿಡುತ್ತಿದ್ದೀರಿ. ಈ ಬಜೆಟ್ ಮೂಲಕ ಇವರು 7 ಕೋಟಿ ಜನರ ಕಿವಿ ಮೇಲೆ ಹೂ ಇಡುತ್ತಿದ್ದಾರೆ ಎಂದು ತಿಳಿಸಲು ನಾವು ಹೂ ಇಟ್ಟುಕೊಂಡು ಬಂದಿದ್ದೇವೆ ಎಂದು ಸರ್ಕಾರದ ವಿರುದ್ಧ ಸಿಟ್ಟು ಹೊರ ಹಾಕಿದರು. ಸಿದ್ದರಾಮಯ್ಯ ಹೇಳಿಕೆಗೆ ಬಿಜೆಪಿ ನಾಯಕರು ಭಾರೀ ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಕಾಂಗ್ರೆಸ್ ನಾಯಕರು ತಿರುಗೇಟು ನೀಡಿದ್ದರಿಂದ ಬಜೆಟ್‌ಮಂಡನೆಗೂ ಮೊದಲೇ ಗದ್ದಲ ಉಂಟಾಯಿತು. ಈ ಸಂದರ್ಭದಲ್ಲಿ ಸ್ಪೀಕರರ್ ಕಾಗೇರಿ, ಇಷ್ಟುದಿನ ಸಿದ್ದರಾಮಯ್ಯ ಕೇಸರಿ ಬಣ್ಣ ನಿಮ್ಮ ಪಕ್ಷದ್ದು ಎನ್ನುತ್ತಿದ್ದರು. ಆದರೆ ಇಂದು ಇಂದು ಕೇಸರಿ ಬಣ್ಣದ ಹೂ ಇಟ್ಟುಕೊಂಡು ಬಂದಿದ್ದಾರೆ ಎಂದು ಹೇಳಿ ಕಾಲೆಳೆದರು. ಕೊನೆಗೆ ಸ್ಪೀಕರ್ ಎರಡೂ ಕಡೆಯ ಸದಸ್ಯರನ್ನು ಸಮಾಧಾನ ಪಡಿಸಿ ಬಜೆಟ್ ಮಂಡನೆಗೆ ಅವಕಾಶ ಕಲ್ಪಿಸಿದರು.

## ಕಾಂಗ್ರೆಸ್‌ನಿಂದ ದೂರು ಸಲ್ಲಿಕೆ

ರೀತಿಯಲ್ಲಿ ಸಿದ್ದರಾಮಯ್ಯರನ್ನೂ ಹೊಡೆದು ಹಾಕಿ ಎಂದು ಬಹಿರಂಗ ಕರೆ ಕೊಟ್ಟಿದ್ದಾರೆ. ಹೀಗೆ ಆಡಳಿತ ಪಕ್ಷದ ಒಬ್ಬ ಮಂತ್ರಿ ಪ್ರತಿಪಕ್ಷದ ನಾಯಕರನ್ನು ಕೊಂದು ಹಾಕಿ ಎಂದು ಕರೆ ನೀಡಿರುವುದು ರಾಜ್ಯ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲು. ಸಾರ್ವತ್ರಿಕ ಚುನಾವಣೆ ಕೇವಲ 2 ತಿಂಗಳು ಬಾಕಿ ಇರುವಾಗ ಬಿಜೆಪಿ ಮುಖಂಡರು ದಿನನಿತ್ಯ ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ರಾಜ್ಯದಲ್ಲಿ ಅಶಾಂತಿ ಮೂಡಿಸುವ ದೊಡ್ಡ ಹುನ್ನಾರ ನಡೆಸುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

**ಬಟನ್ ಚಾಕ್‌ನಿಂದ ಹೊಡೆಯಲೆತ್ನ:** ಈ ಹಿಂದೆ ಕೊಡಗಿನಲ್ಲಿ ಸಿದ್ದರಾಮಯ್ಯನವರ ಮೇಲೆ ಮೊಟ್ಟೆ, ಕಲ್ಲು ತೂರಿದ್ದಲ್ಲದೇ ಬಟನ್ ಚಾಕುವಿನಿಂದ ಹೊಡೆಯಲು ಯತ್ನಿಸಿದ್ದರು. ಇದನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಲೇ ಇಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರದ ವರ್ಚಸ್ಸು ಕುಸಿದಿದ್ದು, ಹೀಗಾಗಿ ಮುಂದಿನ ಚುನಾವಣೆಗಳಲ್ಲಿ ಸೋಲುವ ಭೀತಿಯಿಂದ ಜಾತಿ-ಜಾತಿ ನಡುವೆ ಬೆಂಕಿ ಹಚ್ಚಿ ಅದರಿಂದ ಲಾಭ ಪಡೆಯಲು ಬಿಜೆಪಿಯವರು ಹುನ್ನಾರ ನಡೆಸುತ್ತಿದ್ದಾರೆ ಎಂದು ದೂರಿನಲ್ಲಿ ಆಪಾದಿಸಲಾಗಿದೆ. ಸಿದ್ದರಾಮಯ್ಯ ಅವರನ್ನು ಕೊಲ್ಲಬೇಕು ಎಂದು ಕರೆ ಕೊಟ್ಟಿರುವ ಹಿನ್ನೆಲೆಯಲ್ಲಿ ಕೂಡಲೇ ಡಾ.ಅಶ್ವತ್ಥ್ ನಾರಾಯಣ ಅವರ ವಿರುದ್ಧ ಸಿಆರ್‌ಪಿಸಿ ಸೆಕ್ಷನ್ 503, 504 ಮತ್ತು 506ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ, ಅವರನ್ನು ಬಂಧಿಸಬೇಕು. ಜೊತೆಗೆ ಸಿದ್ದರಾಮಯ್ಯನವರಿಗೆ ಹೆಚ್ಚಿನ ಭದ್ರತೆ ಕಲ್ಪಿಸಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

**ಮಹಿಳಾ ಕಾಂಗ್ರೆಸ್‌ನಿಂದ ಪ್ರತ್ಯೇಕ ದೂರು:** ಇದೇ ಸಂದರ್ಭದಲ್ಲಿ ಡಾ.ಅಶ್ವತ್ಥ್ ನಾರಾಯಣ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ಆಗ್ರಹಿಸಿ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದಲೂ ಅಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ಪ್ರತ್ಯೇಕ ದೂರು ನೀಡಲಾಯಿತು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಕೆ.ಮರೀಗೌಡ, ಕೂರ್ಗಳ್ಳಿ ಮಹದೇವ್, ಎಂ.ಎ.ಕಮಲ ಅನಂತರಾಮು, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಕಾಂಗ್ರೆಸ್ ಕಾನೂನು ಘಟಕದ ರಾಜ್ಯ ಕಾರ್ಯದರ್ಶಿ ಕವಿತ ಕಾಳೆ ಸೇರಿದಂತೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

### ಮೈಸೂರು ಜಿಲ್ಲೆ ಬಂದ್‌ಗೆ ಚಿಂತನೆ ; ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್

ವಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ಸಚಿವ ಅಶ್ವತ್ಥ್ ನಾರಾಯಣ ನೀಡಿರುವ ಹೇಳಿಕೆ ಖಂಡಿಸಿ ಸಾಂಕೇತಿಕವಾಗಿ ಮೈಸೂರು ಜಿಲ್ಲೆಯಲ್ಲಿ ಒಂದು ದಿನ ಬಂದ್‌ಗೆ ಕರೆ ನೀಡುವ ಸಂಬಂಧ ಚರ್ಚೆ ಮಾಡುತ್ತಿದ್ದೇವೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದರು. ಮೈಸೂರಿನ ದೇವರಾಜ ಪೊಲೀಸ್ ಠಾಣೆ ಆವರಣದಲ್ಲಿ ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ಜಿಲ್ಲೆ ಬಂದ್‌ಗೆ ಕರೆ ನೀಡುವ ಸಂಬಂಧ ಚರ್ಚಿಸಿ ತೀರ್ಮಾನ ಮಾಡಲಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ ಇನ್ನು 45 ದಿನಗಳಲ್ಲಿ ವಿಧಾನಸಭಾ ಚುನಾವಣೆ ಬರಲಿದೆ. ಚುನಾವಣೆಯಲ್ಲಿ ಅಭಿವೃದ್ಧಿ ಆಧಾರದಲ್ಲಿ ಮತ ಕೇಳಲು ಬಿಜೆಪಿಯವರಿಗೆ ಅರ್ಹತೆ ಇಲ್ಲ. ಇವರು ಈಗಾಗಲೇ ಸೋಲಿನ ಆತಂಕದಲ್ಲಿದ್ದಾರೆ. ಅಮಿತ್‌ಷಾ ಅವರ ನಿರ್ದೇಶನದ ಮೇರೆಗೆ ಸಿ.ಟಿ.ರವಿ, ಡಾ.ಅಶ್ವತ್ಥನಾರಾಯಣ, ಡಾ.ಸುಧಾಕರ್, ಕೆ.ಎಸ್.ಈಶ್ವರಪ್ಪ ಸೇರಿದಂತೆ ನಾಲ್ಕೈದು ಮಂದಿ ಮೂಲಕ ರಾಜ್ಯದಲ್ಲಿ ಅಶಾಂತಿ ಸೃಷ್ಟಿಸುವ ಹುನ್ನಾರ ಕಳೆದ 6 ತಿಂಗಳಿಂದಲೂ ನಡೆಯುತ್ತಿದೆ ಎಂದು ಆರೋಪಿಸಿದರು.

## ಮೈಸೂರಲ್ಲಿ ಬೃಹತ್ ರ್‍ಯಾಲಿಗೆ ನಿರ್ಧಾರ

ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಹಿಡನ್ ಅಜೆಂಡಾ. ಸಿದ್ದರಾಮಯ್ಯನವರು ತಳ ಸಮುದಾಯದ ದೀಮಂತ ನಾಯಕ. ಅವರನ್ನು ಹೊಡೆದು ಹಾಕಬೇಕು ಎನ್ನುವ ದಾಷ್ಟ್ಯತೆಯನ್ನು ಸಹಿಸಲಾಗುವುದಿಲ್ಲ. ಸಾಮಾಜಿಕ ನ್ಯಾಯ, ಸಮಸಮಾಜದ ನಿರ್ಮಾಣಕ್ಕಾಗಿ ಹೋರಾಡುತ್ತಿರುವ ನಾಯಕರಾದ ಸಿದ್ದರಾಮಯ್ಯನವರು ಹಿಂದುತ್ವದ ವಿರೋಧಿಯೇ ಹೊರತು ಹಿಂದೂ ವಿರೋಧಿಯಲ್ಲ. ಅಶ್ವಥ ನಾರಾಯಣ್ ವಿರುದ್ಧ ನಾನು ನಿನ್ನೆ ಸರಸ್ವತಿಪುರಂ ಠಾಣೆಯಲ್ಲಿ ದೂರು ನೀಡಿದ್ದರೂ ಎಫ್‌ಐಆರ್ ದಾಖಲಿಸಿಲ್ಲ. ಬಡವರಿಗೊಂದು, ಉಳ್ಳವರಿಗೊಂದು ಕಾನೂನು ಇದೆಯೇ ಎಂದು ಚಿಂತಿಸುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದರು. ಮಾಜಿ ಮೇಯರ್ ಅನಂತು, ಮಾಜಿ ಕಾರ್ಪೊರೇಟರ್ ನಾಗಭೂಷಣ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಉಪ್ಪಾರ ಸಂಘದ ಯೋಗೇಶ್ ಉಪ್ಪಾರ್, ವಿಶ್ವಕರ್ಮ ಸಮಾಜದ ಕೆಂಡಗಣ್ಣ, ವೀರ ಮಡಿವಾಳ ಸಂಘದ ಜಯರಾಮ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಬಸವರಾಜು, ಲೋಕೇಶ್ ಕುಮಾರ್ ಮಾದಾಪುರ, ಬಸಪ್ಪಾಜಿ, ದಲಿತ ಸಂಘಟನೆಯ ಮಣಿ, ಅಬ್ದುಲ್ ಸೇರಿದಂತೆ ಹಲವು ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

### ಮಾಜಿ ಸಿಎಂ ಸಿದ್ದರಾಮಯ್ಯರನ್ನು ಹೊಡೆದು ಹಾಕುವಂತೆ ಪ್ರಚೋದನಕಾರಿ ಹೇಳಿಕೆ

# ಅಶ್ವಥ್ ನಾರಾಯಣ್‌ರನ್ನು ಸಂಪುಟದಿಂದ ಕೈ ಬಿಡಲು ಆಗ್ರಹ

## ಸಚಿವರ ಪ್ರತಿಕೃತಿ ದಹಿಸಿ, ಪ್ರತಿಭಟಿಸಿದ ಸಿದ್ದರಾಮಯ್ಯ ಅಭಿಮಾನಿ ಬಳಗ



ತಿ.ನರಸೀಪುರ, ಫೆ.17– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕುವಂತೆ ಪ್ರಚೋದನಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎಸ್.ಅಶ್ವಥ್ ನಾರಾಯಣ್ ಅವರನ್ನು ಸಚಿವ ಸಂಪುಟದಿಂದ ಕೈ ಬಿಡುವಂತೆ ಒತ್ತಾಯಿಸಿ ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ವಿದ್ಯೋದಯ ವೃತ್ತದಿಂದ ಪ್ರತಿಭಟನೆ ಆರಂಭಿಸಿದ ಪ್ರತಿಭಟನಾಕಾರರು, ಖಾಸಗಿ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ರಚಿಸಿ ಅಶ್ವಥ್ ನಾರಾಯಣ್ ಪ್ರತಿಕೃತಿ ದಹಿಸಿದರು. ನಂತರ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್ ಸಿ.ಜಿ.ಗೀತಾ ಅವರ ಮೂಲಕ ಸಚಿವ ಅಶ್ವಥ್ ನಾರಾಯಣ್ ಬಂಧಿಸುವಂತೆ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

ಜಿಲ್ಲಾ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಮಾತನಾಡಿ, ಸಚಿವರೊಬ್ಬರು ವಿಪಕ್ಷ ನಾಯಕ ಸಿದ್ದರಾಮಯ್ಯರನ್ನು ಕೊಲೆ ಮಾಡುವಂತೆ ಪ್ರಚೋದನಕಾರಿ ಹೇಳಿಕೆ ನೀಡಿದರೂ ಸರ್ಕಾರ ಕೈಕಟ್ಟಿ ಕುಳಿತಿದೆ. ಈ ಕೂಡಲೇ ಅಶ್ವಥ್ ನಾರಾಯಣರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು. ಅಲ್ಲದೆ ಪೊಲೀಸ್ ಇಲಾಖೆ ಅಶ್ವತ್ ನಾರಾಯಣ್ ವಿರುದ್ಧ ಸ್ವಯಂ ದೂರು ದಾಖಲಿಸಿಕೊಂಡು ಬಂಧಿಸಿ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಜವಾಬ್ದಾರಿಯುತ ಸಚಿವರಾಗಿ ಕಾರ್ಯನಿರ್ವಹಿಸಬೇಕಾದ ಸಚಿವರು ರೌಡಿಯಂತೆ ವರ್ತಿಸಿದ್ದಾರೆ. ಸಂವಿಧಾನಕ್ಕೆ ವಿರುದ್ಧವಾದ ಪದ ಬಳಕೆ ಮಾಡುವ ಮೂಲಕ ಗೂಂಡಾಯಿಸಂ ಪ್ರದರ್ಶಿಸಿದ್ದಾರೆ. ಇವರ ಹೇಳಿಕೆ ಸಿದ್ದರಾಮಯ್ಯರ ಅಭಿಮಾನಿಗಳಿಗೆ ನೋವುಂಟು ಮಾಡಿದೆ. ಸಿದ್ದರಾಮಯ್ಯರನ್ನು ಹೊಡೆದು ಹಾಕುವಂತೆ ಕಾರ್ಯಕರ್ತರಿಗೆ ಕರೆ ಕೊಟ್ಟಿರುವ ಅಶ್ವಥ್ ನಾರಾಯಣ್ ಅವರು ಬೆಂಗಳೂರಿನಲ್ಲಿ ರೌಡಿಸಂ ಮಾಡಿಕೊಂಡಿರಬಹುದು. ಅವರ ಅಭಿಮಾನಿಗಳು ನಿಮ್ಮ ಏರಿಯಾಕ್ಕೆ ಬರುತ್ತೇವೆ. ನಿಮಗೆ ತಾಕತ್ತಿದ್ದರೆ ಮೊದಲು ನಮ್ಮನ್ನು ಮುಟ್ಟಿ ನಂತರ ಸಿದ್ದರಾಮಯ್ಯರನ್ನು ಹೊಡೆದು ಹಾಕುವಿರಂತೆ ಎಂದು ಬಹಿರಂಗ ಆಹ್ವಾನ ನೀಡಿದರು.

### ಸಿದ್ದರಾಮಯ್ಯ ಒಂದು ಸಮುದಾಯದ ನಾಯಕರಲ್ಲ

"ಸಚಿವ ಅಶ್ವಥ್ ನಾರಾಯಣ ವಿರುದ್ಧ ಸಾಂಕೇತಿಕವಾಗಿ ಇಂದು ಪ್ರತಿಭಟನೆ ನಡೆಸಲಾಗುತ್ತಿದೆ. ಸಚಿವ ಸ್ಥಾನದಲ್ಲಿದ್ದುಕೊಂಡು ದುಂಡಾವರ್ತನೆ ತೋರುವ ಅಶ್ವಥ್ ನಾರಾಯಣ್‌ನನ್ನು ಕೂಡಲೇ ಬಂಧಿಸಿ ಅವರ ವಿರುದ್ಧ ಕೊಲೆ ಬೆದರಿಕೆ ದೂರು ದಾಖಲಿಸಬೇಕು. ಅವಿವೇಕಿಯಂತೆ ಹೇಳಿಕೆ ನೀಡಿ ಸಚಿವ ಸ್ಥಾನಕ್ಕೆ ಅಗೌರವ ತೋರಿದ ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಗಡಿಪಾರು ಮಾಡಬೇಕು. ಸಿದ್ದರಾಮಯ್ಯ ಒಂದು ಸಮುದಾಯದ ನಾಯಕರಲ್ಲ. ರಾಜ್ಯದ ಜನತೆ ಆಸ್ತಿ. ಅವರನ್ನು ತಾರ್ಕಿಕವಾಗಿ ಎದುರಿಸಲಾಗದ ಬಿಜೆಪಿ ಸಮೂಹ ಟೀಕೆ ಟಿಪ್ಪಣಿಗಳ ಮುಖೇನ ಅವರ ಮನೋಸ್ಥೈರ್ಯ ಕುಂದಿಸುವ ಕೆಲಸಕ್ಕೆ ಕೈಹಾಕಿದೆ. ಹಾಗಾಗಿ ಸಿದ್ದರಾಮಯ್ಯರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿರುವ ಸಚಿವ ಅಶ್ವತ್ ನಾರಾಯಣ್‌ರನ್ನು ಕೂಡಲೇ ಸಚಿವ ಸಂಪುಟದಿಂದ ಕೈ ಬಿಡಬೇಕು.

–ಎಸ್.ಮದನ್‌ರಾಜ್, ಪುರಸಭೆ ನಿಕಟಪೂರ್ವ ಅಧ್ಯಕ್ಷ.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಮಾಜಿ ಅಧ್ಯಕ್ಷರಾದ ಬಸವಣ್ಣ, ಪ್ರಶಾಂತ್ ಬಾಬು, ಪುರಸಭಾ ಅಧ್ಯಕ್ಷ ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಸೋಮು, ಅಮ್ಜದ್ ಖಾನ್, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ಉಕ್ಕಲಗೆರೆ ಬಸವಣ್ಣ ದೊಡ್ಡೆಬಾಗಿಲು ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಕೊತ್ತೆಗಾಲ ಬಸವರಾಜು, ಜಿಲ್ಲಾ ಸಂಚಾಲಕ ಶಿವಕುಮಾರ್, ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ಗ್ರಾಪಂ ಸದಸ್ಯ ರಾಮನಂಜಯ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಟ್ಟಸ್ವಾಮಿ, ಮುಖಂಡರಾದ ಗೋಪಾಲ್ ರಾಜ್, ವೆಂಕಟೇಶ್, ಅರುಣ್‌ಗೌಡ, ಹಾಳೇಗೌಡ, ಕಲ್ಪನಾ ಮತ್ತಿತರರಿದ್ದರು.

# ಎಂಐಟಿ ಕಾಲೇಜಿನಲ್ಲಿ ಎಂಬಿಎ ಸ್ನಾತಕೋತ್ತರ ವಿಭಾಗ ಆರಂಭ



ನಂಜನಗೂಡು, ಫೆ.17– ಗ್ರಾಮೀಣ ಭಾಗದಿಂದ ಬಂದವರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಗ್ರಾಮೀಣ ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸಿ ಅವರು ತಾಂತ್ರಿಕ ವಿಷಯದಲ್ಲಿ ಪರಿಣಿತಿ ಗಳಿಸುವಲ್ಲಿ ಕಾಲೇಜಿನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಮಹಾರಾಜ ತಾಂತ್ರಿಕ ವಿಶ್ವವಿದ್ಯಾನಿಲಯದ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ತಿಳಿಸಿದರು.

ತಾಲೂಕಿನ ತಾಂಡವಪುರ ಮಹಾರಾಜ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಶುಕ್ರವಾರ ಎಂಬಿಎ ವಿಭಾಗ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಕಾಲೇಜಿನಲ್ಲಿ ಗ್ರಾಮೀಣ ವಿದ್ಯಾರ್ಥಿಗಳಲ್ಲಿನ ಇಂಗ್ಲಿಷ್ ಭಾಷೆ ಬಗೆಗಿನ ಭಯ ಹೋಗಲಾಡಿಸುವ ಸಲುವಾಗಿ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಅನ್ನು ಅಳವಡಿಸಿಕೊಳ್ಳಲಾಗಿದೆ. ಕಾಲೇಜಿನಲ್ಲಿ ಎಂಬಿಎ ವಿಭಾಗವನ್ನು ಆರಂಭಿಸುತ್ತಿದ್ದು, ದೇಶಕ್ಕೆ ಕೌಶಲ್ಯ ನಿಪುಣತೆಯುಳ್ಳ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರಿಸಿಕೊಡುವಲ್ಲಿ ನಮ್ಮ ಸಂಸ್ಥೆ ಮುಂಚೂಣಿಯಲ್ಲಿದೆ ಎಂದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥಾಪಕ ಪ್ರೊ.ಸಿ.ರಾಜು ಮಾತನಾಡಿ, ವಿಶ್ವದಾದ್ಯಂತ ಎಂಬಿಎ ಪದವೀಧರರಿಗೆ ಉದ್ಯೋಗವಕಾಶಗಳಿವೆ. ಕಾಲೇಜಿನಲ್ಲಿ ಮೊದಲ ಬಾರಿಗೆ ಎಂಬಿಎ ವಿಭಾಗ ಆರಂಭಗೊಳ್ಳುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಕಾಲೇಜಿನ ಅಧ್ಯಾಪಕ ವರ್ಗ ದಿನದ 24 ಗಂಟೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸಿದ್ಧವಿದೆ. ತಿಂಗಳಿಗೊಮ್ಮೆ ಕಾಲೇಜಿಗೆ ಭೇಟಿ ನೀಡಿ ಇಲ್ಲಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತೇನೆ. ವಿದ್ಯಾರ್ಥಿಗಳು ಪರಿಶ್ರಮ ಪಟ್ಟು ಕೌಶಲ್ಯ ಗಳಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಇನ್ಫೋಸಿಸ್‌ನ ಡಾ.ನವೀನ್ ಪಟೇಲ್, ಎಂಐಟಿ ಕಾಲೇಜಿನ ಉಪಾಧ್ಯಕ್ಷ ಹೇಮಂತ್‌ಕುಮಾರ್ ಮಾತನಾಡಿದರು. ಡಾ.ಡಿ.ಎಸ್.ಗುರು, ಡಾ.ಹೆಚ್.ಕೆ.ಚೇತನ್, ನಂದನ್ ಗಿರಿ, ಪ್ರೊ.ಶಿಲ್ಪ, ಪ್ರೊ.ರಮೇಶ್, ಪ್ರೊ.ಶ್ರೀನಿವಾಸನ್ ಉಪಸ್ಥಿತರಿದ್ದರು.

# ನಿವೇಶನರಹಿತ ಬಡವರಿಗೆ ನಿವೇಶನ ನೀಡದಿದ್ದರೆ ಪ್ರತಿಭಟನೆ



ತಿ.ನರಸೀಪುರ, ಫೆ.17– ತಾಲೂಕಿನ ಹೊಸಕೋಟೆ ಗ್ರಾಪಂ ವ್ಯಾಪ್ತಿಗೊಳಪಡುವ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಕಳೆದ 30 ವರ್ಷದಿಂದ ಗುಡಿಸಲಿನಲ್ಲಿ ವಾಸಿಸುತ್ತಿರುವ ಪ.ಜಾತಿ ನಿವೇಶನ ರಹಿತ ಬಡವರಿಗೆ 15 ದಿನದೊಳಗೆ ನಿವೇಶನ ಹಂಚಿಕೆ ಮಾಡದಿದ್ದರೆ ತಾಲೂಕು ಆಡಳಿತದ ವಿರುದ್ಧ ಉಗ್ರ ಹೋರಾಟ ರೂಪಿಸಲಾಗುತ್ತದೆ ಎಂದು ದಲಿತ ಜಾಗೃತ ಸಮಿತಿ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್ ಎಚ್ಚರಿಕೆ ನೀಡಿದರು.

ಕೆಂಪಯ್ಯನಹುಂಡಿಯಲ್ಲಿ ಗುಡಿಸಲಿನಲ್ಲಿ ವಾಸಿಸುತ್ತಿರುವ ನಿವೇಶನ ರಹಿತ ಬಡ ಕುಟುಂಬದ ಸದಸ್ಯರು ಪಟ್ಟಣದ ದಲಿತ ಜಾಗೃತಿ ಸಮಿತಿ ಕಚೇರಿಗೆ ಆಗಮಿಸಿ ತಮ್ಮ ಅಹವಾಲನ್ನು ತೋಡಿಕೊಂಡ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ನೀಡಿದರು.

ನಿವೇಶನ ರಹಿತ ಬಡ ಕುಟುಂಬಗಳು 2000ನೇ ಇಸವಿಯಿಂದಲೂ ನಿವೇಶನ ಸಿಕ್ಕಿಲ್ಲವೆಂದು ಅಳಲನ್ನು ತೋಡಿಕೊಂಡಿದ್ದು, 50 ವರ್ಷಗಳಿಂದ ನಮ್ಮ ಸಂಘಟನೆಯೊಂದಿಗೆ ಕೈ ಜೋಡಿಸಿ ಪ್ರತಿಭಟನೆ ಮಾಡುತ್ತಾ ಬಂದಿದ್ದೀರಿ. ಕ್ಷೇತ್ರದ ಶಾಸಕರು ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯರಿಗೆ ನಾವೂ ಸಹ ತಹಸೀಲ್ದಾರ್ ಮೂಲಕ ಅಭಿಪ್ರಾಯ ಮತ್ತು ಹಕ್ಕೊತ್ತಾಯ ಮಾಡುವ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇವೆ. ಹೊಸಕೋಟೆ ಗ್ರಾಪಂ ವ್ಯಾಪ್ತಿಯ ಸರ್ವೆ ನಂ.170/1, 170/2 ರಲ್ಲಿ 2.06 ಗುಂಟೆ ಜಮೀನನ್ನು ಆಕ್ರಮಿಸಿಕೊಂಡು 2000–2023ರವರೆಗೂ ಸ್ವಾಧೀನ ಅನುಭವದಲ್ಲಿ ಮನೆ ಕಟ್ಟಿಕೊಂಡಿದ್ದೆವು. ಈ ಪೈಕಿ 2 ಎಕರೆ 9 ಗುಂಟೆಯನ್ನು ಸರ್ಕಾರಿ ಭೂಮಿ ಎಂದು ಗುರುತಿಸಲಾಗಿದೆ. ಅದರ ಜೊತೆಗೆ ಲತಾ ಶ್ರೀನಿವಾಸ್ ಮೂರ್ತಿ ಎಂಬುವರ ಜಮೀನನ್ನು ಭೂ ಸ್ವಾಧೀನಪಡಿಸಿ ಆಶ್ರಯ ನಿವೇಶನವಾಗಿ ಪರಿವರ್ತಿಸಿ ಹಂಚಿಕೆ ಮಾಡಲು ಉದ್ದೇಶಿಸಲಾಗಿತ್ತು. ಅದರಂತೆ ಭೂ ಮಾಲೀಕರ ಮನವೊಲಿಸಿ 2018ರಲ್ಲಿ ಒಪ್ಪಿಗೆ ಪತ್ರವನ್ನು ಪಡೆಯಲಾಗಿತ್ತು. ಆದರೆ ಲತಾ ಶ್ರೀನಿವಾಸಮೂರ್ತಿಯವರು ಸರ್ಕಾರ ನೀಡುವ ಪರಿಹಾರ ಹಣ ಸಾಲದು ಎಂದು ಬೇಡಿಕೆ ಇಟ್ಟಿದ್ದರಿಂದ ಅವರ ಬೇಡಿಕೆಗೆ ಅನುಗುಣವಾಗಿ ಗ್ರಾಮಸ್ಥರು ಹಾಗೂ ಅಂದಿನ ರಾಜಕಾರಣಿಯೊಬ್ಬರ ಸಹಕಾರದೊಂದಿಗೆ 38 ಲಕ್ಷ ರೂ.ಗಳನ್ನು ಮುಂಗಡ ಹಣವಾಗಿ ನೀಡಲಾಗಿತ್ತು. ಆದರೆ ಜಮೀನು ಖರೀದಿ, ಕ್ರಯಕ್ಕೆ ಬರಬೇಕಾದ ವ್ಯವಸ್ಥೆಯಲ್ಲಿ ತಾಲೂಕು ಆಡಳಿತ ವಿಳಂಬ ನೀತಿ ಅನುಸರಿಸುತ್ತಿರುವುದರಿಂದ ನಿವೇಶನ ರಹಿತರಿಗೆ ಸಮಸ್ಯೆ ಉಂಟಾಗಿದೆ ಎಂದು ಆರೋಪಿಸಿದರು.

### ಮತದಾನ ಬಹಿಷ್ಕಾರ

ಹಳೇ ಕೆಂಪಯ್ಯನಹುಂಡಿ ಮುಖ್ಯರಸ್ತೆಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಜಮೀನನ್ನು ನಿವೇಶನಗಳನ್ನಾಗಿ ಪರಿವರ್ತಿಸಿ ನಿವೇಶನ ರಹಿತ ದಲಿತರಿಗೆ ನೀಡುವಂತೆ 20 ವರ್ಷಗಳಿಂದಲೂ ಹೋರಾಟ ಮಾಡುತ್ತಿದ್ದೇವೆ. ಗ್ರಾಮಸ್ಥರ ನಿರಂತರ ಹೋರಾಟದ ಫಲವಾಗಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ಮೂಲ ಜಮೀನುದಾರರ ಮನವೊಲಿಸಿ 2018ರಲ್ಲಿ ಒಪ್ಪಿಗೆ ಪತ್ರ ಪಡೆದು ಜಿಲ್ಲೆ ಮತ್ತು ತಾಲೂಕು ಆಡಳಿತಕ್ಕೆ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ನೀಡುವಂತೆ ಆದೇಶಿಸಿದ್ದರು. ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ತಾಲೂಕು ಆಡಳಿತಕ್ಕೆ ನೀಡಲಾಗಿದೆ. ಆದರೂ ಜಮೀನಿಗೆ ಸಂಬಂಧಿಸಿದ ದಾಖಲೆಗಳು ಲಭ್ಯವಿಲ್ಲ ಎಂಬ ನೆಪಹೇಳಿ ನಿವೇಶನ ನೀಡುವ ಪ್ರಕ್ರಿಯೆಗೆ ಚಾಲನೆ ನೀಡದೆ ತಾಲೂಕು ಆಡಳಿತ ವಂಚನೆ ಮಾಡುತ್ತಾ ಬಂದಿದೆ. ಒಪ್ಪಿಗೆ ಪತ್ರ ನೀಡಿರುವ ಜಮೀನು ಮಾಲೀಕರನ್ನು ಕರೆದು ಮಾತನಾಡಿ, ಸಮಸ್ಯೆ ಬಗೆಹರಿಸಲು ತಾಲೂಕು ಆಡಳಿತ ಮುಂದಾಗಿಲ್ಲ. ಮುಂದೆ ತಾಲೂಕು ಆಡಳಿತದ ಕಣ್ಣೊರೆಸುವ ನಾಟಕಕ್ಕೆ ನಾವು ಮನ್ನಣೆ ನೀಡಲು ಸಾಧ್ಯವಿಲ್ಲ. 15 ದಿನಗಳೊಳಗೆ ನಿವೇಶನ ನೀಡದಿದ್ದಲ್ಲಿ ಮುಂಬರುವ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಲಾಗುವುದು.

–ಮಾಧು, ಕಾಂಗ್ರೆಸ್ ಮುಖಂಡ.

ಈ ವೇಳೆ ನೂರಾರು ಮಂದಿ ನಿವೇಶನ ರಹಿತ ದಲಿತರು ಹಾಜರಿದ್ದರು.

# ಸಚಿವ ಅಶ್ವಥ್ ನಾರಾಯಣ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಸರಗೂರು, ಫೆ.17– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಟಿಪ್ಪು ಕೊಂದಂತೆ ಕೊಲ್ಲಬೇಕು ಎಂಬ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ ವಿರುದ್ಧ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಬಸ್ ನಿಲ್ದಾಣ ಎದುರು ಜಮಾಯಿಸಿದ ಪ್ರತಿಭಟನಾಕಾರರು ಸಚಿವ ಅಶ್ವಥ್ ನಾರಾಯಣ್ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪಪಂ ಮಾಜಿ ಸದಸ್ಯ ನಾಗರಾಜು ಮಾತನಾಡಿ, 5 ವರ್ಷ ಜನಪರ ಸರ್ಕಾರ ನಡೆಸಿ ಬಡವರು, ದೀನದಲಿತರ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ ಮಾಜಿ ಸಿಎಂ ಸಿದ್ದರಾಮಯ್ಯನವರ ವಿರುದ್ಧ ಸಚಿವ ಅಶ್ವಥ್ ನಾರಾಯಣ ಉದ್ದಟತನದ ಮಾತುಗಳನ್ನಾಡಿರುವುದು ಅವರ ಘನತೆಯನ್ನು ತೋರಿಸುತ್ತದೆ ಹೀಗಾಗಿ ಅವರನ್ನು ಸಂಪುಟದಿಂದ ಕೈ ಬಿಡಬೇಕು. ಅಲ್ಲದೇ ಅವರ ವಿರುದ್ಧ ಪೊಲೀಸರು ಸ್ವಯಂಪ್ರೇರಿತರಾಗಿ ಪ್ರಕರಣ ದಾಖಲಿಸಿಕೊಂಡು ಬಂಧಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಕೆ.ಚಿಕ್ಕವೀರನಾಯಕ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಡಿ.ಪಿ.ನಟರಾಜು, ನಾಗಯ್ಯ ಎಂ.ಕೆಂಡಗಣ್ಣಸ್ವಾಮಿ, ಸದಸ್ಯ ಚಲುವಕೃಷ್ಣ, ಚಿನ್ನಸ್ವಾಮಿ, ಕಾಂಗ್ರೆಸ್ ಕಾರ್ಯಕರ್ತರಾದ ಶಿವರಾಜು, ಪುಟ್ಟಸ್ವಾಮಿ, ಮುಜೀಬ್, ವೆಂಕಟಪ್ಪ ಸೋಹಿಲ್, ಸುಬಾನ್, ಗೋಪಾಲ್, ಸ್ವಾಮಿ, ಮಹದೇವ್, ಎಸ್.ಎನ್.ವೆಂಕಟಪ್ಪ, ವಸಂತ ಕುಮಾರ್ ಪಾಟೀಲ್, ರಾಮಚಂದ್ರ, ಹೆಜ್ಜೂರಯ್ಯ, ಜವರಯ್ಯ, ಎಸ್.ಡಿ. ರಾಮಚಂದ್ರ, ಅಪ್ಪಾಜಿ, ನಾಗರಾಜು, ರಮೇಶ್, ಜಯರಾಮ್, ಶಿವಕುಮಾರ್, ಸುರೇಶ್ ಇನ್ನಿತರರಿದ್ದರು.

## ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ, ಫೆ.17– ಪ್ರಸಕ್ತ ಸಾಲಿನ ತಾಲೂಕಿನ ಆದರ್ಶ ಶಾಲೆಯ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರಸ್ತುತ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಪಟ್ಟಣ ಹಾಗೂ ಗ್ರಾಮೀಣ ಸರ್ಕಾರಿ ಅನುದಾನ ರಹಿತ ಇತರ ಶಾಲೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾ.4 ಕೊನೆ ದಿನ. ಮಾ.26ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ವಿದ್ಯಾರ್ಥಿಗಳು www.vidyavahini.karnataka.govin ಅಥವಾ www.schooleducation.kar.nic.in ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



## ಜೆ.ಶಿವಕುಮಾರ್‌ಗೆ ಪಿಎಚ್.ಡಿ



ಮೈಸೂರು, ಫೆ.17– ಡಾ. ಆರ್. ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ ಜೆ. ಶಿವಕುಮಾರ್ ಅವರು ಗಾಂಧಿ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ಅಂಬೇಡ್ಕರ್‌ಗೆ ಅಪಮಾನ ಖಂಡಿಸಿ ಪ್ರತಿಭಟನೆ



ನಂಜನಗೂಡು, ಫೆ.17– ಬೆಂಗಳೂರಿನ ಜೈನ್ ಯೂನಿವರ್ಸಿಟಿ ಕಾರ್ಯಕ್ರಮವೊಂದರಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ಗೆ ಅಪಮಾನ ಖಂಡಿಸಿ ದಲಿತ ಸಂಘರ್ಷ ಸಮಿತಿಯಿಂದ ನಗರದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ದಸಂಸ ಸಂಚಾಲಕ ಮಲ್ಲಹಳ್ಳಿ ನಾರಾಯಣ ಮಾತನಾಡಿ, ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ನೀಡಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಇಡೀ ವಿಶ್ವವೇ ಗೌರವಿಸುತ್ತಿದೆ. ಆದರೆ ಭಾರತದಲ್ಲಿ ಹುಟ್ಟಿನ ಜಾತಿ ಆಧರಿಸಿ ಒಂದು ವರ್ಗ ಅವರನ್ನು ದೂಷಿಸುತ್ತಾ ಅವರನ್ನು ಅಪಮಾನಗೊಳಿಸುವುದು, ಪ್ರತಿಮೆಗೆ ದಾಳಿ ನಡೆಸುವುದು ಹೀಗೆ ವಿಕೃತಿ ಮೆರೆಯುತ್ತಿದ್ದಾರೆ. ಜೈನ ಯೂನಿವರ್ಸಿಟಿಯವರು ಕಾರ್ಯಕ್ರಮವೊಂದರಲ್ಲಿ ಅವರನ್ನು ವ್ಯಂಗ್ಯವಾಡಿ ಅಪಮಾನಗೊಳಿಸಿರುವುದು ಖಂಡನೀಯ. ಈ ಘಟನೆಗೆ ಯೂನಿವರ್ಸಿಟಿ ಮುಖ್ಯಸ್ಥರು ನೇರ ಕಾರಣ. ಆದ್ದರಿಂದ ಕೂಡಲೇ ಜೈನ ಯೂನಿವರ್ಸಿಟಿ ಮುಚ್ಚಬೇಕು. ಅಲ್ಲಿನ ಮುಖ್ಯಸ್ಥರನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ಸಂಚಾಲಕ ಮಂಜು, ಲಿಂಗಯ್ಯ, ಮಹೇಶ್, ಸುರೇಶ್, ಮರಿಸ್ವಾಮಿ, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ರಘು, ಸತೀಶ್‌ರಾವ್, ಕರವೇ ತ್ರಿನೇಶ್ ಇತರರಿದ್ದರು.

## ಪೌರಾಯುಕ್ತರಾಗಿ ಸಿ.ಚಂದ್ರಪ್ಪ ನೇಮಕ



ಹುಣಸೂರು, ಫೆ.17– ಇಲ್ಲಿನ ನಗರಸಭೆ ನೂತನ ಪೌರಾಯುಕ್ತರಾಗಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಸಿ.ಚಂದ್ರಪ್ಪ ಅವರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್ ಆದೇಶ ಹೊರಡಿಸಿದ್ದಾರೆ.

ಹುಣಸೂರು ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೌರಾಯುಕ್ತೆ ಎಂ.ಮಾನಸ ಅವರನ್ನು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ನಗರಸಭೆಗೆ ಹಾಗೂ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಸಭೆಯಲ್ಲಿ ಪೌರಾಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಿ.ಚಂದ್ರಪ್ಪ ಅವರನ್ನು ಹುಣಸೂರು ನಗರಸಭೆಗೆ ಪೌರಾಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

## ವ್ಯಕ್ತಿ ಆತ್ಮಹತ್ಯೆ




ಹುಣಸೂರು, ಫೆ.17– ವ್ಯಕ್ತಿಯೋರ್ವ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೊಸಕೋಟೆ ಬಳಿಯ ಕೆಂಚನ ಕೆರೆಯಲ್ಲಿ ನಡೆದಿದೆ. ತಾಲೂಕಿನ ಬನ್ನಿಕುಪ್ಪೆ ಗ್ರಾಮದ ನಿವಾಸಿ ಸಣ್ಣಮೊಗಯ್ಯ ಅವರ ಪುತ್ರ ಚೇತನ್(30) ಆತ್ಮಹತ್ಯೆ ಮಾಡಿಕೊಂಡವರು.

ಮೃತರು ಬುಧವಾರ ಸಂಜೆ ಮನೆಯಿಂದ ಹೊರ ಹೋದವರು ಮತ್ತೆ ಮನೆಗೆ ಬಂದಿರಲಿಲ್ಲ. ಆದರೆ ಇಂದು ಬೆಳಗ್ಗೆ ಕೆಂಚನಕೆರೆಯಲ್ಲಿ ಮೃತದೇಹ ಪತ್ತೆಯಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮೈಸೂರು ಮಿತ್ರ

ಶನಿವಾರ 18 ಫೆಬ್ರವರಿ 2023





# ಮಹಾಶಿವರಾತ್ರಿ

## ಒಂದು ಚಿಂತನೆ

–ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ


ಈ ಪ್ರಪಂಚವು ಧರ್ಮಕ್ಷೇತ್ರವೂ ಹೌದು, ಕರ್ಮಕ್ಷೇತ್ರವೂ ಹೌದು. ಬಹಳಷ್ಟು ಸಂದರ್ಭಗಳಲ್ಲಿ ಧರ್ಮಾಧರ್ಮಗಳ ಸಂಘರ್ಷದ ಕುರುಕ್ಷೇತ್ರವೂ ಹೌದು! ಸೃಷ್ಟಿ, ಸ್ಥಿತಿ, ಲಯಗಳೆಲ್ಲವೂ ಈ ಧರ್ಮ–ಕರ್ಮಗಳ ಸುತ್ತಲೂ ಸುತ್ತುತ್ತಿರುತ್ತವೆ. ಭಾರತೀಯ ಧರ್ಮವನ್ನು ವೇದಾಂತಧರ್ಮವೆಂದೂ, ದಾರ್ಶನಿಕ ದೃಷ್ಟಿಯದೆಂದೂ ಹೇಳಬಹುದು. ಧರ್ಮಾಚರಣೆ ಎಂಬುದು ಕೇವಲ ಬುದ್ಧಿಪ್ರಧಾನವಾದುದಲ್ಲ. ಧರ್ಮದ ದೃಷ್ಟಿಯಲ್ಲಿ ಬುದ್ಧಿ ಎಂದರೆ ಆತ್ಮವಿವೇಚನೆಯನ್ನು ಮಾಡುವುದೇ ಆಗಿದೆ. ಬುದ್ಧಿಗಿಂತ ಮಿಗಿಲಾಗಿ ಇಲ್ಲಿ ಶ್ರದ್ಧಾಭಕ್ತಿಗಳಿಗೆ ಹೆಚ್ಚು ಮಹತ್ವ. ನಮ್ಮ ಹಬ್ಬಗಳು ಪ್ರಾಚೀನ ಶ್ರದ್ಧೆ ಹಾಗೂ ಅರ್ವಾಚೀನ ಬುದ್ಧಿಭಾವಗಳ ವಿದ್ಯುದಾಲಿಂಗನವೇ ಆಗಿವೆ. ಹಬ್ಬಗಳೆಂದರೆ, ಉತ್ಸವ, ಉತ್ಸಾಹ. ಭಾರತೀಯರ ಮನೋಭಾವದ ಕನ್ನಡಿಯೆಂಬಂತೆ "ಉತ್ಸವಪ್ರಿಯಾಃ ಖಲು ಮನುಷ್ಯಾಃ" ಎಂದು "ಅಭಿಜ್ಞಾನ ಶಾಕುಂತಲ" ನಾಟಕದಲ್ಲಿ ಉದ್ಗರಿಸುತ್ತಾನೆ.

ಬಹುತೇಕ ಹಬ್ಬಗಳನ್ನು ಆಚರಿಸುವಾಗ, ವಿವೇಕದಿಂದ ಅರಿತು ಆಚರಿಸದಿದ್ದರೆ ಅವುಗಳ ಸಂಪೂರ್ಣ ಫಲ. ದೊರಕುವುದಿಲ್ಲ. ಹಬ್ಬಗಳು ಪಾಶ್ಚಾತ್ಯರ ಹಬ್ಬಗಳಂತೆ ಬರಿಯ ಆಮೋದ, ಪ್ರಮೋದಗಳಿಗೆ ಸೀಮಿತವಾಗಿಲ್ಲ. ಭಗವದ್ಭಕ್ತಿಯ ಅಭಿವ್ಯಕ್ತಿಯ ಜೊತೆ ಜೊತೆಗೇ ಪ್ರಕೃತಿಪೂಜೆಯನ್ನು ಆದರಿಸುವ ಸಾಮಾಜಿಕ ಸಂಭ್ರಮಗಳೂ ಹೌದು. ಭಾರತೀಯ ಹಬ್ಬ–ಹರಿದಿನಗಳಲ್ಲಿ ಯೋಗ–ಭೋಗಗಳ ಸಮನ್ವಯವನ್ನು ಕಾಣಬಹುದು. ಹಬ್ಬಗಳನ್ನು ಇಂತಿಂಥ ದಿನಗಳಲ್ಲೇ ಆಚರಿಸಬೇಕೆಂಬುದನ್ನು ಪಂಚಾಂಗಗಳು ತಿಳಿಸಿಕೊಡುತ್ತವೆ.

ಆಯಾ ಋತುಮಾನಗಳಿಗನುಗುಣವಾಗಿ ಮನುಷ್ಯನ ದೇಹದ ಮೇಲೆ ಪರಿಣಾಮಗಳು ಉಂಟಾಗುತ್ತವೆ. ಹೀಗೆ ವೈಜ್ಞಾನಿಕವಾಗಿ ಹಬ್ಬಗಳನ್ನು ಜೋಡಿಸಿರುವುದು ಪೂರ್ವಜರ ಬುದ್ಧಿಮತ್ತೆಯ ಸಂಕೇತವಾಗಿದೆ. ಅರಿವು, ಆಚರಣೆಗಳಿಲ್ಲದ ಜೀವನಯಾತ್ರೆ ಮರುಭೂಮಿಯಲ್ಲಿನ ಬರಡು ವಿಹಾರದಂತೆ. ಆಂಗ್ಲ ಪದ್ಧತಿಯ ವಿದ್ಯಾಭ್ಯಾಸ, ಚಿಂತನೆಗಳಿಂದ ಎಲ್ಲವನ್ನೂ ಅತಿಯಾದ ವಿಚಿಕಿತ್ಸಕ ದೃಷ್ಟಿಯಿಂದ ನೋಡಿದರೆ ಆಧುನಿಕ ಮನೋಭಾವದಿಂದ ಹಬ್ಬಗಳ ಬಗೆಗಿನ ಶ್ರದ್ಧೆ ಕುಂಠಿತವಾಗುತ್ತದೆ. ಆದರೂ ಹಿಂದೂ ಧರ್ಮದ ಮೂಲ ಅಂತಸ್ಸತ್ವದ ಫಲವಾಗಿ ಹಲವಾರು ಹಬ್ಬಗಳು ದೇಶದ ಎಲ್ಲೆಡೆ ಇನ್ನೂ ವ್ಯಾಪಕವಾಗಿ ಆಚರಣೆಯಲ್ಲಿವೆ. ಯುಗಾದಿ, ರಾಮನವಮಿ, ಕೃಷ್ಣ ಜನ್ಮಾಷ್ಟಮಿ, ನಾಗರಪಂಚಮಿ, ಗೌರಿ–ಗಣೇಶ, ದೀಪಾವಳಿ, ಮಹಾಶಿವರಾತ್ರಿ ಇವು ಹಿಂದೂಗಳ ಪ್ರಮುಖ ಹಬ್ಬಗಳು. ಒಟ್ಟಾರೆ, ಹಬ್ಬಗಳೆಂದರೆ ಭಕ್ತಿ, ಜ್ಞಾನ, ಕರ್ಮಗಳ ಸಂಗಮ. ಭಾರತೀಯ ಚಿಂತನೆಯಲ್ಲಿ ಜ್ಞಾನಕಾಂಡ, ಭಕ್ತಿಕಾಂಡ ಎಂಬ ಎರಡು ಪ್ರಮುಖ ಧಾರೆಗಳಿದ್ದರೂ, ಸಾಧಾರಣ ಜನತೆಗೆ ಭಕ್ತಿಮಾರ್ಗವೇ ಹೆಚ್ಚು ಪ್ರಿಯ.

ಶಿವನನ್ನು ಆದಿಯೋಗಿ, ಎಲ್ಲ ಯೋಗಿಗಳಿಗೂ ಆದ್ಯಪುರುಷ ಎನ್ನಲಾಗುತ್ತದೆ. ಆತ ಯೋಗವಿದ್ಯೆಯ ಮೂಲಗುರು. ಈಶ್ವರ, ಶಿವ, ಶಂಕರ, ಶಂಭು, ಪಶುಪತಿ, ಮುಕ್ಕಣ್ಣ, ಶಶಿಧರ, ನೀಲಕಂಠ, ನಂಜುಂಡ, ಮಹದೇಶ್ವರ ಎಂಬ ಅನೇಕ ವಿಶೇಷಣಗಳಿಂದ ಆತನನ್ನು ವರ್ಣಿಸಲಾಗುತ್ತದೆ. ಕೈಲಾಸದ ಅಧಿಪತಿಯಾದ ಶಿವನನ್ನು ನೆನೆದರೆ ಎಂತಹ ಕಷ್ಟಗಳೂ ದೂರವಾಗುವುವು ಎಂದು ಹಿಂದೂಗಳು ನಂಬುತ್ತಾರೆ. ಶಿವನನ್ನು ವಿಶೇಷವಾಗಿ ಪೂಜಿಸುವ ಶುಭದಿನವಾದ ಮಹಾಶಿವರಾತ್ರಿ ಮಂಗಳಕರವಾದುದು. ಇದಕ್ಕೆ ವಿಶೇಷ ಮಹತ್ವವಿದೆ. ಮಾಘಮಾಸದ ಬಹುಳ ಚತುರ್ದಶಿಯಂದು ಭಗವಂತನನ್ನು ಶಿವನ ರೂಪದಲ್ಲಿ ಆರಾಧಿಸಿದರೆ ಸಕಲ ಇಷ್ಟಾರ್ಥಗಳೂ ನೆರವೇರುತ್ತವೆ. ಶಿವನಿಗೆ ಅತ್ಯಂತ ಪ್ರಿಯವಾದ ಈ ಹಬ್ಬದಂದು "ತನ್ನನ್ನು ಪೂಜಿಸುವ ಭಕ್ತರಿಗೆ ತಾನು ಸಕಲ ರೀತಿಯ ಅನುಗ್ರಹ ನೀಡುವುದಾಗಿ ಸ್ವತಃ ಶಿವನೇ ಪಾರ್ವತಿಗೆ ಹೇಳಿದ್ದಾನೆ" ಎಂದು ಶಿವಪುರಾಣ ದಲ್ಲಿ ಉಲ್ಲೇಖವಿದೆ. ಶಿವರಾತ್ರಿಯಂದು ಮಾಡುವ ಪೂಜೆ, ಉಪವಾಸ, ಜಾಗರಣೆಗಳಿಂದ ಮನುಷ್ಯನಲ್ಲಿರುವ ತಾಮಸ ಮತ್ತು ರಜೋಗುಣಗಳು ನಿರಸನಗೊಂಡು ಸಾತ್ವಿಕ ಗುಣ ಉಜ್ವಲಗೊಳ್ಳುತ್ತದೆ ಎಂಬುದು ಭಕ್ತರ ನಂಬಿಕೆ. ಅಂದು ರಾತ್ರಿ ಶಿವಪಾರ್ವತಿಯರು ಜೊತೆಯಾಗಿ ಭೂಲೋಕಕ್ಕೆ ಬರುತ್ತಾರೆಂದೂ, ಎಲ್ಲ ಸ್ಥಾವರ–ಜಂಗಮ ಲಿಂಗಗಳಲ್ಲೂ ಅವತರಿಸಿರುತ್ತಾರೆಂಬುದು ಪುರಾಣೋಕ್ತ ಅಭಿಪ್ರಾಯ.

> "ಪರಮಪುರುಷ ಪರಮೇಶ್ವರನಾದ ಶಿವನು ಶಂಕರನಾಗಿ ಎಲ್ಲರಿಗೂ ಸಕಲ ಸನ್ಮಂಗಳಗಳನ್ನು ಪ್ರಸಾದಿಸಲಿ, ನಾಡು ನೆಮ್ಮದಿಯತ್ತ ಮುನ್ನಡೆಯಲಿ, ಪ್ರಜೆಗಳಿಗೆ ಶಾಂತಿ ಸುಭಿಕ್ಷಗಳು ಉಂಟಾಗಲಿ ಎಂದು ಮಹಾಶಿವರಾತ್ರಿಯಲ್ಲಿ ಪ್ರಾರ್ಥಿಸಬೇಕು.



ಭಾರತೀಯರಲ್ಲಿ ಶಿವನ ಆರಾಧಕರೂ ಇದ್ದಾರೆ; ವಿಷ್ಣುವಿನ ಆರಾಧಕರೂ ಇದ್ದಾರೆ. ಈ ಇಬ್ಬರೂ ದೇವತೆಗಳಲ್ಲಿ ವ್ಯತ್ಯಾಸವೆಣಿಸದೆ ಎರಡು ರೂಪಗಳನ್ನೂ ಸಮಾನ ಭಕ್ತಿಯಿಂದ ಆರಾಧಿಸುವ ಭಾಗವತ ಪಂಥದವರೂ ಇದ್ದಾರೆ. ಭಾರತೀಯ ದೇವತಾಶಾಸ್ತ್ರದ ಹಿನ್ನೆಲೆಯಲ್ಲಿ ಬ್ರಹ್ಮ ಸೃಷ್ಟಿಕರ್ತ, ವಿಷ್ಣು ಪರಿಪಾಲಕ, ಶಿವ ಲಯಕರ್ತ ಎಂದು ಮೇಲ್ನೋಟಕ್ಕೆ ವಿಭಜನೆಗಳು ಕಂಡುಬಂದರೂ "ಸಕಲಕೆಲ್ಲಕು ನೀನೆ ಅಕಳಂಕ ಗುರು"ವೆಂದು ಭಗವಂತನನ್ನು ಅರ್ಚಿಸಿ ಪೂಜಿಸುವವರೇ ಹೆಚ್ಚು. ಅವರು ಶ್ರೀಸಾಮಾನ್ಯರಲ್ಲಿ ಜ್ಞಾನಿಗಳು. "ಹೋರಾಟವಿಕ್ಕಿಸಲು ಬೇರಾದೆಯಲ್ಲದೆ ಬೇರುಂಟೆ ಜಗದೊಳಗೆ ಎಲೆ ದೇವನೆ" ಎಂಬ ಜೀವನ ಸತ್ಯವನ್ನು ಅರಿತವರು. ಈ ಹಿನ್ನೆಲೆಯಲ್ಲಿ –

ಶೈವೋ ವಾ ವೈಷ್ಣವೋ ವಾಪಿ ಯೋ
ವಾಸ್ಯಾದನ್ಯಪೂಜಕಃ ।
ಸರ್ವಂ ಪೂಜಾಫಲಂ ಹಂತಿ ಶಿವರಾತ್ರಿ
ಬಹಿರ್ಮುಖಃ ॥

ಎಂಬ ಶ್ಲೋಕವು ಏಕಕಾಲದಲ್ಲಿ ಹರಿಹರ–ಸಾಮರಸ್ಯವನ್ನೂ, ಶಿವರಾತ್ರಿಯ ಮಹತ್ವವನ್ನೂ, ಸಾರುವ ಅಮೃತೋಪಮ ಸಂದೇಶವನ್ನು ಬಿತ್ತರಿಸುತ್ತಿದೆ.

ಪ್ರತಿ ತಿಂಗಳಿನ ಕೃಷ್ಣಪಕ್ಷದ ತ್ರಯೋದಶಿ ಅಥವಾ ಚತುರ್ದಶಿಯ ಮಾಸಶಿವರಾತ್ರಿಯು ಶಿವನಿಗೆ ಪ್ರಿಯವಾದದ್ದು. ಅದನ್ನು ವ್ರತವನ್ನಾಗಿಯೂ ಆಚರಿಸುತ್ತಾರೆ. ಆದರೆ ಮಾಘ ಬಹುಳ ಚತುರ್ದಶಿಯು (ತ್ರಯೋದಶಿಯಂದೂ ಒಮ್ಮೊಮ್ಮೆ ಬರುತ್ತದೆ) ಅತ್ಯಂತ ಪವಿತ್ರವಾಗಿರುವುದರಿಂದ ಅದನ್ನು 'ಮಹಾಶಿವರಾತ್ರಿ' ಎಂದು ವಿಶೇಷ ಸಂಭ್ರಮ, ಸಡಗರಗಳಿಂದ ಆಚರಿಸಲಾಗುತ್ತದೆ. ಮೂರ್ತಿರೂಪದ ಶಿವನಿಗೂ, ಲಿಂಗರೂಪದ ಶಿವನಿಗೂ ಯಾವ ಭೇದವೂ ಇಲ್ಲ. ನಿರ್ಗುಣ ನಿರಾಕಾರನಾದ ಪರಬ್ರಹ್ಮ ತತ್ವವೇ ಲಿಂಗರೂಪದಲ್ಲಿ ದರ್ಶನವನ್ನು ನೀಡುವ ಶುಭದಿನವೇ ಶಿವರಾತ್ರಿ. ದ್ವಾದಶ ಜ್ಯೋತಿರ್ಲಿಂಗಗಳು ನೆಲೆಸಿರುವ ಸುಪ್ರಸಿದ್ಧ ಶೈವ ಕ್ಷೇತ್ರಗಳಲ್ಲಿಯೂ ಅಂದು ವಿಶೇಷ ಪೂಜಾದಿಗಳು ನಡೆಯುತ್ತವೆ.

* * *

ಬ್ರಹ್ಮ, ವಿಷ್ಣು ಇವರುಗಳು ಈ ಪರ್ವದಿನದಂದು ಅರುಣಾಚಲದಲ್ಲಿ ಮಹಾಶಿವನನ್ನು ಪೂಜಿಸಿದರೆಂಬ ಐತಿಹ್ಯವಿದೆ. ಅಂದು ಶ್ರದ್ಧೆಯಿಂದ ಶಿವನನ್ನು ಪೂಜಿಸುವವರಿಗೆ ಇಡೀ ವರ್ಷದ ಪೂಜಾಫಲ ದೊರೆಯುತ್ತದೆ ಎಂದು ಶಾಸ್ತ್ರವಾಕ್ಯವಿದೆ. ಶಿವರಾತ್ರಿಯ ಸಮಯದಲ್ಲಿ ತಿಳಿದೋ ತಿಳಿಯದೆಯೋ, ಯಾವುದೇ ಕಾರಣದಿಂದಲಾದರೂ ಸರಿ, ಉಪವಾಸ ಮಾಡಿದರೂ ಚಿತ್ತಶುದ್ಧಿಯಾಗುತ್ತದೆ. ಅಜ್ಞಾನದಿಂದಲಾದರೂ ಸರಿ, ಶಿವಲಿಂಗಕ್ಕೆ ಬಿಲ್ವಪತ್ರೆ ಹಾಕಿದರೆ, ಜಲಾಭಿಷೇಕ ಮಾಡಿದರೆ ಪುರುಷಾರ್ಥ ಸಿದ್ಧಿಯಾಗುತ್ತದೆ ಎಂಬ ಕಥಾನಕಗಳ ಉಲ್ಲೇಖಗಳಿವೆ. ಶ್ರೀ ಶಂಕರ ಭಗವತ್ಪಾದರ 'ಶಿವಾನಂದಲಹರೀ ಸ್ತೋತ್ರ'ದಲ್ಲಿ ಬರುವ ಇಂತಹ ಕಥೆಗಳು ಪ್ರಸಿದ್ಧವಾಗಿವೆ; ಜನಮಾನಸದ ಮೇಲೆ ಅಚ್ಚಳಿಯದ ಪರಿಣಾಮ ಉಂಟುಮಾಡಿವೆ.

ಬೇಟೆ ದೊರೆಯದೆ ಅನಿವಾರ್ಯವಾಗಿ ಶಿವರಾತ್ರಿಯಂದು ಉಪವಾಸ ಮಾಡಿದ ಬೇಡನೊಬ್ಬನು ಬಿಲ್ವಪತ್ರೆ ಮರದ ಮೇಲೆ ಕುಳಿತುಕೊಂಡಿದ್ದು ಸೋರೆಬುರುಡೆಯಲ್ಲಿ ನೀರನ್ನು ಇಟ್ಟುಕೊಂಡಿದ್ದ. ಬಿಲ್ವಪತ್ರೆ ಮತ್ತು ನೀರು ಅಲ್ಲೇ ಕೆಳಗೆ ಬಿದ್ದಿದ್ದ ಲಿಂಗವೊಂದರ ಮೇಲೆ ಬಿದ್ದು ಆತನಿಗೆ ಸಂಪೂರ್ಣ ಪೂಜಾಫಲ ಲಭಿಸಿತೆಂದು ಶಿವಪುರಾಣ ಹೇಳುತ್ತದೆ. ಹೀಗೆಯೇ ಶಿವರಾತ್ರಿಯ ಮಹಿಮೆಯನ್ನು ವರ್ಣಿಸುವ ಹಲವಾರು ಕಥೆಗಳು ಸ್ಕಾಂದ ಪುರಾಣ, ಅಗ್ನಿಪುರಾಣಗಳಲ್ಲೂ ಉಲ್ಲೇಖವಾಗಿವೆ.



* * *

ಮಹಾಶಿವರಾತ್ರಿ ಹಬ್ಬದ ವಿಶೇಷ ಅಂಶಗಳೆಂದರೆ ಅಹರ್ನಿಶಿ ಪೂಜೆ, ಉಪವಾಸ ಮತ್ತು ಜಾಗರಣೆ. ಎಲ್ಲ ಶಿವದೇವಾಲಯಗಳಲ್ಲೂ ಅಂದು ನಾಲ್ಕು ಜಾವವೂ ವಿಶೇಷ ಪೂಜೆ ನಡೆಯುತ್ತದೆ. ಜನರು ಎಲ್ಲ ದೇವಸ್ಥಾನಗಳಿಗೂ ಹೋಗಿ ಭಗವಂತನ ದರ್ಶನ ಮಾಡುವುದನ್ನು ನೋಡುವುದೇ ಒಂದು ಆನಂದ. ಶ್ರದ್ಧಾಳುಗಳಾದ ಆಸ್ತಿಕರು ಅತ್ಯಂತ ನಿಷ್ಠೆಯಿಂದ ಪೂಜೆಯನ್ನು ಮಾಡುತ್ತಾರೆ. 'ಉಪ–ವಾಸ' ಎಂಬ ಪದದ ನಿಜವಾದ ಅರ್ಥ ಭಗವಂತನ ಸಮೀಪದಲ್ಲಿರುವುದು. ಅಂದರೆ ಪೂಜೆ, ಪುನಸ್ಕಾರ, ಮನನ, ನಿದಿಧ್ಯಾಸನ–ಧ್ಯಾನಗಳ ಮೂಲಕ ಭಗವಂತನನ್ನು ಸದಾ ಸ್ಮರಣೆ ಮಾಡುತ್ತಿರುವುದು. ಜಾಗರಣೆ ಎಂದರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಎಚ್ಚರವಿದ್ದು ಪರಮಾತ್ಮನೆಂಬ ಆ ವಿಭೂತಿಶಕ್ತಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವುದು.

**ಭಕ್ತಿ ಹೇಗಿರಬೇಕೆಂದರೆ,**
**ಅಕ್ಕಮಹಾದೇವಿಯು ಹೇಳುವಂತೆ–**

ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಿರ್ದಡೆ ಮಾಣು
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ನೋಡಿದಡೆ ನೋಡು,
ನೋಡದಡೆ ಮಾಣು
ಆನು ನಿನ್ನ ನೋಡಿ ಹಿಗ್ಗಿ
ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ಮೆಚ್ಚಿದಡೆ ಮೆಚ್ಚು,
ಮೆಚ್ಚದಡೆ ಮಾಣು
ಆನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ಒಲಿದಡೆ ಒಲಿ,
ಒಲಿಯದಡೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ

ಭಕ್ತ–ಭಗವಂತರ ಬಿಡಿಸಲಾರದ ಈ ಭುಭುವಾಂತರಗಳ ಬಂಧ ಇಂಥ ಹಬ್ಬಗಳಂದು ವಿಶೇಷವಾಗಿ ಪ್ರಕಟಗೊಳ್ಳಬೇಕು.

* * *

ಮಹಾಶಿವರಾತ್ರಿಯು ಶಿವ–ಪಾರ್ವತಿಯರು ಲೋಕಕಲ್ಯಾಣಾರ್ಥವಾಗಿ ವಿವಾಹವಾದ ದಿನ ಎಂಬ ಅಂಶ ಗಮನಾರ್ಹ. ದಕ್ಷ ಪ್ರಜಾಪತಿಯು ಮೊದಲಿನಿಂದಲೂ ಶಿವದ್ವೇಷಿ. ಅವನ ಮಗಳಾದ ಸತೀದೇವಿಯು ಶಿವನನ್ನು ವರಿಸುತ್ತಾಳೆ. ದಕ್ಷಯಜ್ಞಕ್ಕೆ ಆಹ್ವಾನವಿಲ್ಲದಿದ್ದರೂ ಅಲ್ಲಿಗೆ ಹೋದ ಶಿವಸತಿಯು ಅವಮಾನಿತಳಾಗಿ ಹೋಮಕುಂಡದಲ್ಲಿ ತನ್ನನ್ನು ಆಹುತಿ ಕೊಟ್ಟುಕೊಳ್ಳುತ್ತಾಳೆ. ಅದರಿಂದ ಕ್ರೋಧತಪ್ತ ನಾದ ಶಿವನ ಜಡೆಯಿಂದ ವೀರಭದ್ರನ ಅವತಾರವಾಗು ತ್ತದೆ. ದುರಹಂಕಾರಿಯಾದ ದಕ್ಷನ ಯಜ್ಞಭಂಗವಾಗುತ್ತದೆ. ಕೊನೆಗೆ ಶಿವನ ಮಹಿಮೆಯಿಂದ ಮರುಜೀವ ಪಡೆದ ದಕ್ಷನು ಶಿವನನ್ನು ಸ್ತುತಿಸುತ್ತಾನೆ. ಯಜ್ಞದ ಪರಿಸಮಾಪ್ತಿ. ಸತಿದೇವಿಯು ಬಳಿಕ ಹಿಮವಂತನ ಮಗಳಾಗಿ ಪಾರ್ವತಿಯೆಂಬ ಹೆಸರಿನಲ್ಲಿ ಜನಿಸಿ ಉಗ್ರತಪಸ್ಸು ಮಾಡುತ್ತಾಳೆ. ತಾರಕಾಸುರ ವಧೆಯನ್ನು ಮಾಡುವ ಷಣ್ಮುಖನ ಜನನವಾಗಬೇಕಾಗಿರುತ್ತದೆ. ಶಿವನನ್ನು ಮೋಹಗೊಳಿಸಲು ಹೋದ ಮನ್ಮಥ ಶಿವನ ಉರಿಗಣ್ಣಿನಿಂದ ಸುಟ್ಟುಹೋಗುತ್ತಾನೆ; ಅನಂತರ ಪಾರ್ವತಿಯ ತಪಸ್ಸನ್ನು ಪರೀಕ್ಷಿಸಿದ ಶಿವ ಆಕೆಯನ್ನು ವರಿಸುತ್ತಾನೆ. ಕಾಮದಹನ; ಈ ಕಥೆಗಳು ಕಾಳಿದಾಸನ 'ಕುಮಾರಸಂಭವ' ಮತ್ತು ಹರಿಹರನ 'ಗಿರಿಜಾ ಕಲ್ಯಾಣ' ಕಾವ್ಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿವೆ. ಶಿವ–ಪಾರ್ವತಿಯರ ವಿವಾಹ ಎಂಬುದು ಪ್ರಕೃತಿ–ಪುರುಷರ ವಿರಾಟ್ ಮಿಲನ. ಆ ಸಂದರ್ಭದಲ್ಲಿ ಸೃಷ್ಟಿ–ಸ್ಥಿತಿ–ಲಯಗಳ ಸಮ್ಯಕ್–ಸ್ವರೂಪವಾದ ತಾಂಡವ ನೃತ್ಯವನ್ನು ಶಿವನು ಮಾಡಿದ್ದೂ ಈ ಶಿವರಾತ್ರಿಯಲ್ಲಿಯೇ.

ಶಿವಪುರಾಣದ ಪ್ರಕಾರ ಅಮೃತಮಂಥನದ ಸಂದರ್ಭದಲ್ಲಿ ಮೊದಲಿಗೆ ಹುಟ್ಟಿದ ವಿಷವನ್ನು ಶಿವನೇ ಧರಿಸಿದಾಗ, ಆ ವಿಷವನ್ನು ಕಂಠದಲ್ಲಿಯೇ ಪಾರ್ವತಿಯು ತಡೆದು, ಆತ ನೀಲಕಂಠನಾದದ್ದೂ ಈ ಶಿವರಾತ್ರಿಯಲ್ಲೇ ಎಂದು ಶಿವಪುರಾಣ ಹೇಳುತ್ತದೆ.

* * *

ಉಪವಾಸ, ಜಾಗರಣೆಯ ವಿಷಯವಾಗಿ ಮತ್ತೆ ಕೆಲವು ಅಂಶಗಳನ್ನು ಗಮನಿಸಬಹುದು. ಉಪವಾಸ ಎಂದರೆ ಭಗವಂತನ ಸಾಮೀಪ್ಯದಲ್ಲಿ ಇರುವುದು ಎಂದು ಹಿಂದೆಯೇ ಹೇಳಿದೆ. ಉಪವಾಸ ಎಂದರೆ ಏನನ್ನೂ ತಿನ್ನದಿರುವುದು ಎಂಬ ಇನ್ನೊಂದು ಅರ್ಥವೂ ಇದೆಯಲ್ಲ! ತಿನ್ನುವುದು ಎಂದರೆ ಅದು ಬಾಯಿ ಯಿಂದಲೇ ಆಗಬೇಕಾಗಿಲ್ಲ. ನಮ್ಮ ಪಂಚೇಂದ್ರಿಯ ಗಳಿಂದ ಶರೀರದ ಮೂಲ ವ್ಯವಸ್ಥೆಯೊಳಕ್ಕೆ ಬಂದು ಸೇರುವ ಎಲ್ಲವೂ ಆಹಾರವೇ. ಆದ್ದರಿಂದ ಭಕ್ತರಾದವರು ಪಂಚೇಂದ್ರಿಯಗಳನ್ನು ಒಳಮುಖವಾಗಿಸಬೇಕು. ಹೀಗೆ 'ಆವರ್ತಚಕ್ಷು'ಗಳಾಗದಿದ್ದರೆ ಮನವೆಂಬ ಮರ್ಕಟ ಎಲ್ಲೆಂದರಲ್ಲಿ ಜಿಗಿಯುತ್ತದೆ. ಜೊತೆಗೆ, ಹೊಟ್ಟೆ ಹಸಿದಿದ್ದರೆ ತೂಕಡಿಕೆ ಬರುವುದಿಲ್ಲ; ಶರೀರವು ಹಗುರವಾಗಿರುತ್ತದೆ; ಪೂಜಾಕಾರ್ಯಕ್ಕೆ ಅದರಿಂದ ಪರೋಕ್ಷವಾಗಿ ಸಹಕಾರಿಯಾಗುತ್ತದೆ.

ಜಾಗರಣೆ ಎನ್ನುವ ಪದಕ್ಕೆ ಅರ್ಥ 'ಎಚ್ಚರವಾಗಿರುವುದು'. ನಿದ್ರೆ ಮಾಡದೆ ಇರುವುದಷ್ಟೇ ಎಚ್ಚರವಲ್ಲ. ಮನಸ್ಸು, ಮೈಗಳನ್ನು ಹುರಿಗೊಳಿಸಿಕೊಂಡು "ದೈವವು ತನಗೆ ಎಂದು ಕಾಣಿಸಿಕೊಳ್ಳುವುದೋ" ಎಂಬ ಪ್ರೀತಿ, ಕಾತರಗಳಿಂದ ಭಗವಂತನಿಗಾಗಿ ಹಂಬಲಿಸುವುದು. ಹೀಗೆ ಪೂಜಾಕಾಲ ದಲ್ಲಿ ಶರೀರವನ್ನು ನೇರವಾಗಿ, ಸ್ಥಿರವಾಗಿ ಇಟ್ಟುಕೊಂಡರೆ, ಶಿವರಾತ್ರಿಯಲ್ಲಿ ಉಜ್ವಲವಾಗಿ ಪ್ರಕಟವಾಗುವ ಊರ್ಧ್ವ ಶಕ್ತಿ ಧನಾತ್ಮಕ ಬದಲಾವಣೆಗಳನ್ನು ತರ ಬಲ್ಲದು. ಪಂಚಭೂತಾತ್ಮಕವಾದ ಶರೀರದಲ್ಲಿ ಊರ್ಧ್ವಮುಖವಾಗಿ ಶಕ್ತಿ ಚಲಿಸಬೇಕಾದರೆ ಎಚ್ಚರದಿಂದ, ಎಚ್ಚರಿಕೆಯಿಂದ ಇರುವುದು ಅಗತ್ಯವೆಂಬುದು ಯೋಗಿಗಳೊಬ್ಬರ ಅಭಿಪ್ರಾಯ. ■

# ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಹಾಶಿವರಾತ್ರಿ ಆಚರಣೆ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಫೆಬ್ರವರಿ 18ರ ಶನಿ ವಾರದಂದು ಮಹಾಶಿವರಾತ್ರಿಯ ವಿಶೇಷ ಕಾರ್ಯ ಕ್ರಮಗಳನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಗಳವರ ಕರ್ತೃಗದ್ದುಗೆಯಲ್ಲಿ ಸಂಜೆ 6.00ರಿಂದ ಬೆಳಗಿನ ಜಾವ 6.00ರವರೆಗೆ ನಾಲ್ಕು ಜಾವಗಳಲ್ಲಿಯೂ ವಿಶೇಷ ಪೂಜೆಗಳು ನಡೆಯುತ್ತವೆ. ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣ ಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆಗಳು ನೆರವೇರುತ್ತವೆ. ಸಂಜೆ 7.00ಕ್ಕೆ ಶಿವದೀಕ್ಷೆ, ರಾತ್ರಿ 9.30ಕ್ಕೆ ಬೆಳ್ಳಿರಥ ಪ್ರಾಕಾರೋತ್ಸವವಿರುತ್ತದೆ. ಶ್ರೀನಂಜುಂಡೇಶ್ವರ ದೇವಸ್ಥಾನಕ್ಕೆ ಎಸ್.ಹೊಸಕೋಟೆಯ ಎಚ್.ಎಸ್.ರಾಘವೇಂದ್ರರಾವ್ ಮತ್ತು ಕುಟುಂಬದವರು ಸಮರ್ಪಿಸಿರುವ ಬೆಳ್ಳಿ ಕೊಳಗ ಮತ್ತು ನಾಗಾಭರಣ ಧಾರಣೆ ನೆರವೇರುತ್ತದೆ.


ಗದ್ದುಗೆಯ ಆವರಣದಲ್ಲಿ ಸಂಜೆ 5.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಗಾಯನ ಹಾಗೂ ನೃತ್ಯ, ರಾತ್ರಿ 8.00ಕ್ಕೆ ಮೈಸೂರಿನ ಲಾಸ್ಯ ಮತ್ತು ತಂಡದವರಿಂದ ಭಕ್ತಿ



ಮತ್ತು ಜನಪದ ಗೀತೆಗಳು, ರಾತ್ರಿ 10.30ಕ್ಕೆ ಕೀರ್ತನ ಭಾಸ್ಕರ ಬಿ.ಎಸ್. ಗಂಗಾಧರ ಆಚಾರ್‌ರವರಿಂದ ಶಿವಕಥಾ ಸಂಕೀರ್ತನೆ, ರಾತ್ರಿ 1.00ಕ್ಕೆ ರಾಮಸಮುದ್ರದ ಶ್ರೀಸಿದ್ದಪ್ಪಾಜಿ ನೀಲಗಾರರ ಸಂಘದವರಿಂದ ನೀಲಗಾರರ ಮೇಳ, ಪ್ರಾತಃಕಾಲ 5.00ಕ್ಕೆ ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರಿಂದ ಭಜನೆ ಕಾರ್ಯಕ್ರಮಗಳು ನಡೆಯಲಿವೆ.

ಶ್ರೀಮಠ ಮತ್ತು ಕರ್ತೃಗದ್ದುಗೆಯಲ್ಲಿ ಶನಿವಾರ ಬೆಳಗ್ಗೆ 6.00ರಿಂದ ಭಾನುವಾರ ಬೆಳಗ್ಗೆ 6.00ರ ವರೆಗೆ ವಿವಿಧ ಭಜನಾ ತಂಡಗಳಿಂದ ಅಖಂಡ ಭಜನೆ ಇರುತ್ತದೆ. 20.2.2023ರಂದು ಅಮಾವಾಸ್ಯೆ ವಿಶೇಷ ಪೂಜೆ ಇರುತ್ತದೆ. ಎಲ್ಲ ಕಾರ್ಯಕ್ರಮಗಳು ಭಕ್ತಾದಿಗಳ ಸೇವಾರ್ಥಗಳಿಂದ ನೆರವೇರುತ್ತವೆ. ವಿಶೇಷ ಪೂಜೆ ಇತ್ಯಾದಿ ಸೇವಾರ್ಥ ನೆರವೇರಿಸುವವರು 8896964242 ಮೂಲಕ ಸಂಪರ್ಕ ಸಬಹುದಾಗಿದೆ ಆಸ್ತಿಕ ಬಂಧುಗಳು ಹಾಗೂ ಸಾರ್ವಜನಿಕರು ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಶ್ರೀಗುರುಕೃಪೆಗೆ ಪಾತ್ರರಾಗಲು ಸುತ್ತೂರು ಶ್ರೀ ಕ್ಷೇತ್ರವು ಪ್ರಕಟಣೆಯಲ್ಲಿ ಕೋರಿದೆ.

# ಪ್ರತಿ ಮನೆ ಮನದಲ್ಲೂ ಗೀತೆ




■ ಡಾ.ಕೆ.ಆರ್.ಅರುಣ

ಪ್ರಪಂಚದ ವಿವಿಧ ದೇಶಗಳಲ್ಲಿ ನೆಲೆಸಿರುವ ಭಾರತೀಯರ ಮನೆ ಮನೆಗಳಲ್ಲಿ ಪ್ರತಿದಿನ ಭಗವದ್ಗೀತೆಯ ವಿವಿಧ ಅಧ್ಯಾಯಗಳ ಪಠಣವಾಗುತ್ತಿದ್ದರೆ ಅದನ್ನು ಕಲ್ಪಿಸಿಕೊಳ್ಳುವುದೇ ಒಂದು ಸೊಗಸು ಅಲ್ಲವೇ? ಹಾಗೆಯೇ ಮೋಕ್ಷದಾ ಏಕಾದಶಿ(ಭಗವದ್ಗೀತೆ ರೂಪುಗೊಂಡ ದಿನ) ಯಂದು ದೇವಸ್ಥಾನಗಳಲ್ಲಿ ಇಲ್ಲವೇ ಮನೆಗಳಲ್ಲಿ ಆಚರಿಸಲಾಗುವ 'ಗೀತಾ ಜಯಂತಿ'ಯಲ್ಲಿ ಎಲ್ಲರೂ ಕೂಡಿ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಪಠಣದ ಪಾರಾಯಣದ ನಂತರ ದೊರೆಯುವ ಆತ್ಮಸಂತೋಷ ಹಾಗೂ ಧನ್ಯತಾಭಾವದಿಂದ ಮನಸ್ಸು ಕೃತಕೃತ್ಯತೆಯನ್ನು ಅನುಭವಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಭಗವದ್ಗೀತೆ ಪ್ರಸಿದ್ಧಿ ಪಡೆಯಲು ಕಾರಣ;

ಮೊದಲನೆಯದಾಗಿ ಇದು ಸ್ವಯಂ ಶ್ರೀ ಕೃಷ್ಣ ಭಗವಂತನಿಂದ ಬೋಧಿಸಲ್ಪಟ್ಟಿದ್ದು. ಎರಡನೆಯದಾಗಿ ಇಂದು ನಾವೆಲ್ಲ ವ್ಯಕ್ತಿತ್ವ ವಿಕಸನ ತರಬೇತಿ ಎಂದು ಯಾವುದನ್ನು ಹೇಳುತ್ತೇವೆಯೋ, ಅದು ನಮಗೆ ಭಗವದ್ಗಿತೆಯಲ್ಲೇ ಪ್ರಾಪ್ತವಾಗುತ್ತದೆ. ಮೂರನೆಯದಾಗಿ ಬದುಕಿನಲ್ಲಿ ಬಂದದ್ದನ್ನು ಸ್ವೀಕರಿಸುವ ಅಥವಾ ಸವಾಲುಗಳನ್ನು ಎದುರಿಸುವ ಛಾತಿಯನ್ನು ಗೀತೆ ನಮಗೆ ಒದಗಿಸಿಕೊಡುತ್ತದೆ. ಇದೇ ಗೀತೆಯ ಮಹದುದ್ದೇಶ.

ವ್ಯಾಸ ಮಹರ್ಷಿ ವಿರಚಿತ ಮಹಾಭಾರತದ ಭೀಷ್ಮಪರ್ವದಲ್ಲಿ (ಭಗವದ್ಗೀತಾ ಪರ್ವ) 25ನೇ ಅಧ್ಯಾಯದಿಂದ 42ನೇ ಅಧ್ಯಾಯದವರೆಗೆ ಭಗವದ್ಗೀತೆಯ ಪಾಠವಿದೆ (18 ಅಧ್ಯಾಯಗಳು). ಕುರುಕ್ಷೇತ್ರ ಯುದ್ಧ ನಡೆಯುವಾಗ ಸಂಜಯನು ಧೃತರಾಷ್ಟ್ರನಿಗೆ ಹೇಳಿದಂತೆ ಹಿನ್ನೆಲೆಯಿದ್ದರೂ ಇದು 'ಶ್ರೀಕೃಷ್ಣಾರ್ಜುನ ಸಂವಾದ' ಎಂದೇ ಖ್ಯಾತಿ ಪಡೆದಿದೆ. ಭಗವದ್ಗೀತೆಯು ಉಪ ನಿಷತ್ತುಗಳ ಮೂಲಭೂತ ಬೋಧನೆಗಳನ್ನು ಒಳಗೊಂಡಿದೆ. ಆದ್ದರಿಂದ ಇದು 'ಗೀತೋಪನಿಷತ್' ಎಂದೂ ತಿಳಿಯಲ್ಪಟ್ಟಿದೆ. ಬ್ರಹ್ಮಸೂತ್ರ, ಭಗವದ್ಗೀತೆ ಮತ್ತು ಉಪನಿಷತ್ತುಗಳು 'ಪ್ರಸ್ಥಾನತ್ರಯ'ಗಳೆಂದು ಮಾನ್ಯತೆ ಪಡೆದಿವೆ.

ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧಕ್ಕೆ ಮೊದಲು ಅರ್ಜುನನು ಗುರುಹಿರಿಯರು, ಬಂಧುಬಾಂಧವರ ಸಾವುನೋವುಗಳನ್ನು ನೆನೆದು ವಿಷಣ್ಣನಾಗುತ್ತಾನೆ. ಯುದ್ಧಕ್ಕೆ ತಾನು ಸಿದ್ಧನಿಲ್ಲವೆಂದು ಶಸ್ತ್ರತ್ಯಾಗ ಮಾಡಲು ಯೋಚಿಸುತ್ತಾನೆ. ಆಗ ಶ್ರೀಕೃಷ್ಣನು ಅರ್ಜುನನ ವಿಷಾದವನ್ನು ಅರಿತು, ಅವನು ಪಾಲಿಸಬೇಕಾದ ಧರ್ಮವನ್ನು ಕುರಿತು ತಿಳಿಹೇಳುತ್ತಾನೆ. ಶ್ರೀಕೃಷ್ಣನು ಸಲಹೆಯನ್ನು ನೀಡುವುದರೊಂದಿಗೆ ಜೀವನದ ತತ್ತ್ವವನ್ನು ಕುರಿತು ಸವಿವರ ಪ್ರವಚನ ನೀಡುತ್ತಾನೆ. ಭಗವದ್ಗೀತೆಯು ಉನ್ನತವಾದ ತಾತ್ವಿಕ ತಿಳಿವಳಿಕೆಯನ್ನು ನೀಡುತ್ತದಲ್ಲದೆ ದೈನಂದಿನ ಜೀವನಕ್ಕೆ ಅಗತ್ಯವಾದ ಆಧ್ಯಾತ್ಮಿಕ ವಿಜ್ಞಾನವನ್ನು ವಿವರಿಸುತ್ತದೆ. ಈ ತಂತ್ರಗಳು, –ಉಪಾಯಗಳನ್ನೇ 'ಯೋಗ' ಎಂದು ಕರೆಯಲಾಗುತ್ತದೆ. ಹಾಗಾಗಿ ಭಗವದ್ಗೀತೆಯನ್ನು 'ಯೋಗಶಾಸ್ತ್ರ' ಎಂದೂ ಹೇಳಲಾಗುತ್ತದೆ. ಅಂದರೆ ಇದು ಯೋಗದ ಅಭ್ಯಾಸವನ್ನು ಕಲಿಸುವ ಗ್ರಂಥವೂ ಹೌದು. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳನ್ನು ವಿವಿಧ ರೀತಿಯ ಯೋಗ ಎಂದು ಹೆಸರಿಸಲಾಗಿದೆ.

ಕುರುಕ್ಷೇತ್ರ ಯುದ್ಧವೆಂದರೆ ಎಲ್ಲೋ, ಯಾವತ್ತೋ ನಡೆಯಿತೆಂದುಕೊಂಡರೂ ಕೂಡ, ಇದು ಪ್ರತಿನಿತ್ಯ ನಮ್ಮೊಳಗೆ ನಡೆಯುವ ಘರ್ಷಣೆಗಳೇ. ನಮ್ಮಲ್ಲಿ ಒಬ್ಬೊಬ್ಬರಲ್ಲೂ ಒಬ್ಬ ಅರ್ಜುನನಿದ್ದಾನೆ. ಆ ಅರ್ಜುನನ ಮನಸ್ಸಿನಲ್ಲಿ ನಡೆದ ದ್ವಂದ್ವಗಳು, ಗೊಂದಲಗಳು, ತುಮುಲತೆ ನಮ್ಮಲ್ಲಿಯೂ ನಡೆಯುತ್ತಿರುತ್ತವೆ. ಈ ವಿಷಾದದಿಂದ ನಮ್ಮನ್ನು ಪಾರುಮಾಡಿ ದಾರಿ ತೋರುವುದೇ ಕೃಷ್ಣನ ಈ ಗೀತೆ. ಆತ ಕರುಣಾಮಯಿ, ಹೃದಯ ತುಂಬಾ ಪ್ರೀತಿ ಉಳ್ಳವನು. ಆತ ನಮ್ಮ ಬಳಿಯೇ ಇದ್ದಾನೆಂದೂ, ನಮಗೆ ದಾರಿದೀಪವಾಗಿದ್ದಾನೆಂದೂ ನಾವು ಗುರುತಿಸಿಕೊಂಡು ಬದುಕುವ ದಾರಿಯನ್ನು ಅರಿತುಕೊಂಡರೆ ಗೀತೆಯ ಉದ್ದೇಶ ಸಾರ್ಥಕವಾದಂತೆ.

ಮೊದಲೇ ಹೇಳಿದಂತೆ ಗೀತೆಯು ಮನುಷ್ಯನ ಆತಂಕ, ಅಳುಕು, ಭಯ, ಶೋಕವನ್ನು ನಿವಾರಣೆ ಮಾಡುತ್ತದೆ. ಗೀತೆಯ ಅರ್ಥವನ್ನು ಸರಿಯಾಗಿ ಮನವರಿಕೆ ಮಾಡಿಕೊಂಡಾಗ, ಅದನ್ನೇ ಮನಸ್ಸಿನಲ್ಲಿ ಮೆಲುಕು ಹಾಕಿದಾಗ, ನಮ್ಮ ನಮ್ಮ ಅನುಭವದಲ್ಲಿ ಅದನ್ನು ಒಳಹೊಕ್ಕು ನೋಡಿದಾಗ, ಅದರಲ್ಲಿರುವ ಸೂಚನೆಗಳನ್ನು ಬದುಕಿನಲ್ಲಿ ಪ್ರಯೋಗಿಸಲು ಪ್ರಯತ್ನಿಸಿದಾಗ ಗೀತೆಯ ಮಹತ್ವ ನಮ್ಮ ಅರಿವಿಗೆ ಬರುತ್ತದೆ. ಉದಾಹರಣೆಗೆ, **'ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇ ಅಚ್ಯುತ'** (1–21) ಎಂದು ಅರ್ಜುನನು ಹೇಳಿದಾಗ, ಶ್ರೀಕೃಷ್ಣನು ಉದ್ದೇಶಪೂರ್ವಕವಾಗಿಯೇ ರಥವನ್ನು ಗುರು ದ್ರೋಣಾಚಾರ್ಯ ಮತ್ತು ಭೀಷ್ಮ ಪಿತಾಮಹರ ಎದುರು ನಿಲ್ಲಿಸಿ ಅರ್ಜುನನಲ್ಲಿ ಗೊಂದಲವುಂಟು ಮಾಡುತ್ತಾನೆ; ಆತ್ಮಜ್ಞಾನ ಬೋಧನೆಗೆ ಅಗತ್ಯವಾದ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಶ್ರೀಕೃಷ್ಣನ ಅಭಿಮತದಂತೆ, ಇಲ್ಲಿ ದುರ್ಯೋಧನ, ದುಶ್ಯಾಸನ, ಕರ್ಣ, ಭೀಷ್ಮ ಅಥವಾ ದ್ರೋಣ ಇವರ್ಯಾರೂ ಅರ್ಜುನನ ವೈರಿಗಳಲ್ಲ. ಎಲ್ಲರಿಗಿಂತ ದೊಡ್ಡ ವೈರಿಯೆಂದರೆ ಕಾಮ ಮತ್ತು ಕ್ರೋಧ [**ಕಾಮ ಏಷ ಕ್ರೋಧ ಏಷ** ರಜೋಗುಣಸಮುದ್ಭವಃ (3:37)]. ಹಾಗಾಗಿಯೇ ನರಕಕ್ಕೆ ದಾರಿಯೆನಿಸಿರುವ, ಆತ್ಮನ ಗುಣನಾಶಕ್ಕೆ ಕಾರಣವಾಗಿರುವ ಕಾಮ, ಕ್ರೋಧ ಮತ್ತು ಲೋಭಗಳನ್ನು ತ್ಯಜಿಸಬೇಕು (ತ್ರಿವಿಧಂ ನರಕಸ್ಯೇದಂ... ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ರಯಂ ತ್ಯಜೇತ್ ॥16:21॥) ಎಂದು ಗೀತೆಯಲ್ಲಿ ಉಪದೇಶಿಸಲಾಗಿದೆ.

ಪ್ರಕೃತಿಯಲ್ಲಿರುವ ಚರಾಚರಗಳಲ್ಲಿ ಗುಣಸ್ವಭಾವಕ್ಕನುಗುಣವಾಗಿ ಕರ್ಮದಲ್ಲಿ ನಾವು ವೈವಿಧ್ಯವನ್ನು



> ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧಕ್ಕೆ ಮೊದಲು ಅರ್ಜುನನು ಗುರುಹಿರಿಯರು, ಬಂಧುಬಾಂಧವರ ಸಾವು ನೋವುಗಳನ್ನು ನೆನೆದು ವಿಷಣ್ಣನಾಗುತ್ತಾನೆ. ಯುದ್ಧಕ್ಕೆ ತಾನು ಸಿದ್ಧನಿಲ್ಲವೆಂದು ಶಸ್ತ್ರತ್ಯಾಗ ಮಾಡಲು ಯೋಚಿಸುತ್ತಾನೆ. ಆಗ ಶ್ರೀಕೃಷ್ಣನು ಅರ್ಜುನನ ವಿಷಾದವನ್ನು ಅರಿತು, ಅವನು ಪಾಲಿಸಬೇಕಾದ ಧರ್ಮವನ್ನು ಕುರಿತು ತಿಳಿಹೇಳುತ್ತಾನೆ. ಶ್ರೀಕೃಷ್ಣನು ಸಲಹೆಯನ್ನು ನೀಡುವುದರೊಂದಿಗೆ ಜೀವನದ ತತ್ತ್ವವನ್ನು ಕುರಿತು ಸವಿವರ ಪ್ರವಚನ ನೀಡುತ್ತಾನೆ. ಭಗವದ್ಗೀತೆಯು ಉನ್ನತವಾದ ತಾತ್ವಿಕ ತಿಳಿವಳಿಕೆಯನ್ನು ನೀಡುತ್ತದಲ್ಲದೆ ದೈನಂದಿನ ಜೀವನಕ್ಕೆ ಅಗತ್ಯವಾದ ಆಧ್ಯಾತ್ಮಿಕ ವಿಜ್ಞಾನವನ್ನು ವಿವರಿಸುತ್ತದೆ.

ಕಾಣಬಹುದು. ಕೈಯ ಬೆರಳುಗಳು ಒಂದೇ ಉದ್ದ, ಒಂದೇ ಗಾತ್ರವಿದ್ದಿದ್ದರೆ ದೈನಂದಿನ ಎಷ್ಟೋ ಚಟುವಟಿಕೆಗಳನ್ನು ನಡೆಸುವುದೇ ಅಸಾಧ್ಯವಾಗುತ್ತಿತ್ತು. ಈ ವೈವಿಧ್ಯವನ್ನು ಹಾಗೂ ಕರ್ತವ್ಯನಿಷ್ಠೆಯನ್ನು ಕುರಿತು ಶ್ರೀಕೃಷ್ಣನು ಹೀಗೆ ಹೇಳಿದ್ದಾನೆ: ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಅವರವರ ಶಕ್ತಿಗೆ ಅನುಗುಣವಾಗಿ ಕರ್ಮವನ್ನು ಮಾಡುತ್ತಾರೆ.

### ನೀವು ಸೇರಬಯಸುವಿರಾ

**ಭಗವದ್ಗೀತಾ ತರಗತಿಯ ಮೊದಲನೇ ಹಂತದ 24ನೇ ಬ್ಯಾಚ್ 27, ಫೆ 2023 ರಂದು ಪ್ರಾರಂಭವಾಗಲಿದೆ. reg.learngeeta.com ಲಿಂಕ್ ಬಳಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ 26, ಫೆಬ್ರವರಿ 2023. ಹೆಸರು ನೋಂದಾಯಿಸಿದ ನಂತರ ನಿಮಗೆ ಒಂದು ನೋಂದಣಿ ಸಂಖ್ಯೆಯನ್ನು ನೀಡಲಾಗುತ್ತದೆ. ಭಗವದ್ಗೀತೆಯನ್ನು ಕಲಿತು ಭಗವಾನ್ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಿರಿ.**

■ ಡಾ.ಕೆ.ಆರ್.ಅರುಣ
(ಸಂಶೋಧಕಿ, ಹವ್ಯಾಸಿ ಬರಹಗಾರ್ತಿ)
ವಿಳಾಸ: ಶ್ರೀಮತಿ ಡಾ.ಅರುಣ ಕೆ.ಆರ್.
ನಂ. 1972, 'ನಕ್ಷತ್ರ', 20–ಡಿ ಅಡ್ಡರಸ್ತೆ,
ಸಿ–ಬ್ಲಾಕ್, ಸಹಕಾರನಗರ, ಬೆಂಗಳೂರು–92.
ಮೊ.: 9480223229

ಭಗವಂತನ ದೃಷ್ಟಿಯಲ್ಲಿ ಯಾವುದೂ ಹೆಚ್ಚಿಲ್ಲ, ಯಾವುದೂ ಕಡಿಮೆಯಿಲ್ಲ ; ಬಡವ–ಶ್ರೀಮಂತ ಎಂಬ ಭೇದವಿಲ್ಲ. ನಮ್ಮ ಬದುಕು ಒಂದು ಯಜ್ಞದಂತೆ. ಇದರಲ್ಲಿ ಎಷ್ಟೋ ಬಗೆಗಳಿವೆ (ಏವಂ ಬಹುವಿಧಾ ಯಜ್ಞಾ... ಏವಂ ಜ್ಞಾತ್ವಾ ವಿಮೋಕ್ಷ್ಯಸೇ ॥ 4:32 ॥). ನಾವು ಮಾಡುವ ಕೆಲಸ ನಮ್ಮ ಇಷ್ಟಾರ್ಥ ಸಿದ್ಧಿಗೇ ಆದರೂ ಕೂಡ ಅದನ್ನು ಮಾಡುವಾಗ ಅದನ್ನೊಂದು ಯಜ್ಞದ ಭಾವನೆಯಿಂದ, ಅಂದರೆ ನಿಷ್ಠೆಯಿಂದ ಮಾಡಬೇಕು.

ಹಾಗೆಯೇ ಮನುಷ್ಯನಲ್ಲಿರುವ ಮೃತ್ಯುಭಯವನ್ನು ಜಯಿಸುವ ಮಾರ್ಗವನ್ನು ಗೀತೆಯು ತೋರಿಸುತ್ತದೆ. (ವಾಸಾಂಸಿ ಜೀರ್ಣಾನಿ.... ಸಂಯಾತಿ ನವಾನಿ ದೇಹೀ ॥ 2:22 ॥). ಆತ್ಮವು ಅವಿನಾಶಿಯಾಗಿದ್ದು, ಶರೀರವು ಕೇವಲ ಒಂದು ಉಪಕರಣವೆಂಬ ತಿಳಿವಿನೊಂದಿಗೆ ಜೀವನ ನಡೆಸಬೇಕೆಂದು ಗೀತೆಯು ಉಪದೇಶಿಸುತ್ತದೆ. ಅಂದರೆ, ಮನುಷ್ಯನು ಹರಿದುಹೋದ ವಸ್ತ್ರವನ್ನು ಹೇಗೆ ತ್ಯಜಿಸಿ ಇನ್ನೊಂದು ಹೊಸ ವಸ್ತ್ರವನ್ನು ಧರಿಸುತ್ತಾನೋ ಹಾಗೆಯೇ ಆತ್ಮನು ಜೀರ್ಣವಾದ ಶರೀರವನ್ನು ತ್ಯಜಿಸಿ ಹೊಸ ಶರೀರವನ್ನು ಧರಿಸುತ್ತಾನೆ.


ಭಗವಂತನ ಅನುಗ್ರಹವನ್ನು ಪಡೆಯಲು ಹೆಚ್ಚೇನೂ ಕಷ್ಟಪಡಬೇಕಾಗಿಲ್ಲ. ಆತನು ಭಕ್ತಿ ಮತ್ತು ನಿಷ್ಕಲ್ಮಷ ಪ್ರೇಮವನ್ನು ಮಾತ್ರ ಬಯಸುತ್ತಾನೆ. ಅದಕ್ಕಾಗಿ ಶ್ರೀಕೃಷ್ಣ ಹೇಳುವ ಮಾತಿದು – ಪತ್ರ (ಎಲೆ), ಪುಷ್ಪ, ಫಲ, ಜಲ ಮುಂತಾದುವನ್ನು ಯಾವ ಭಕ್ತನು ಶುದ್ಧಬುದ್ಧಿಯಿಂದ, ನಿಷ್ಕಾಮ ಪ್ರೇಮದಿಂದ ಅರ್ಪಿಸುತ್ತಾನೋ ಅವುಗಳನ್ನು ಭಗವಂತನು ಪ್ರೀತಿಪೂರ್ವಕವಾಗಿ ಸ್ವೀಕರಿಸುತ್ತಾನೆ (ಪತ್ರಂ ಪುಷ್ಪಂ ಫಲಂ ತೋಯಂ... ಪ್ರಯತಾತ್ಮನಃ ॥ 9:26 ॥). ಇದಕ್ಕೆ ಸುದಾಮನ ನಿರ್ಮಲವಾದ ಮೈತ್ರೀಭಾವ, ಭಕ್ತಿಯೇ ಸಾಕ್ಷಿ. ಸುದಾಮನಿಂದ ಹಿಡಿಯವಲಕ್ಕಿ ಸ್ವೀಕರಿಸಿದ ಕೃಷ್ಣ ಆತನಿಗೆ ಅತುಲೈಶ್ವರ್ಯವನ್ನು ಕರುಣಿಸುತ್ತಾನೆ.

ಯಾರು ಪ್ರತಿಫಲದ ಅಪೇಕ್ಷೆಯಿಂದ ಹಾಗೂ ಭೋಗಾಸಕ್ತಿಯಿಂದ ಕರ್ಮವನ್ನು ಮಾಡುತ್ತಾನೋ ಆತನು ಪಾಪಗಳಿಂದ ಎಂದೂ ಮುಕ್ತನಾಗಲಾರನು. ಆದರೆ 'ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ' (5:10) ಎನ್ನುವಲ್ಲಿ ಕಮಲದ ಎಲೆಯು ಹೇಗೆ ನೀರಿನಿಂದ ತೋಯುವುದಿಲ್ಲವೋ ಹಾಗೆಯೇ ಮೋಹವನ್ನು ತೊರೆದು ತಮ್ಮ ಎಲ್ಲಾ ಕಾರ್ಯಗಳನ್ನು ಭಗವಂತನಿಗೆ ಅರ್ಪಿಸುವವನು ಪಾಪದಿಂದ ಮುಕ್ತನಾಗಿರುತ್ತಾನೆ ಎಂದೆನ್ನುತ್ತಾನೆ ಶ್ರೀಕೃಷ್ಣ. ಅಂದರೆ ಜೀವನದಲ್ಲಿ ನಾವು ಕಮಲದ ಎಲೆಯ ಮೇಲಿನ ನೀರಿನ ಬಿಂದುವಿನಂತೆ ಯಾವುದಕ್ಕೂ ಅಂಟಿಕೊಳ್ಳದಂತಿದ್ದು, ಎಲ್ಲವನ್ನೂ ಭವದನುಗ್ರಹಕ್ಕೆ ಸಮರ್ಪಿಸಬೇಕು. ಭಗವದ್ಗೀತೆಯ ಕೊನೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ 'ಯಥೇಚ್ಛಸಿ ತಥಾ ಕುರು' (ನಿನ್ನ ಇಷ್ಟವಿದ್ದಂತೆ ಮಾಡು) ಎಂದು ಆಯ್ಕೆಯನ್ನು ಅರ್ಜುನನಿಗೇ ಬಿಡುತ್ತಾನೆ. ಪರಮಶಿಷ್ಯನಾದ ಅರ್ಜುನನು 'ಕರಿಷ್ಯೇ ವಚನಂತವ' (ನೀನು ಹೇಳಿದಂತೆಯೇ ಮಾಡುತ್ತೇನೆ) ಎಂದು ಹೇಳುವ ಮೂಲಕ ಸಂಪೂರ್ಣ ಶರಣಾಗತಿಯು ಗುರು–ಶಿಷ್ಯರ ಸಂಬಂಧದ ಸಾರವೆಂದು ಶ್ಲೋಕವು ತಿಳಿಸುತ್ತದೆ. ಅಲ್ಲದೆ ಶ್ರೀಕೃಷ್ಣನು ಶ್ರೇಷ್ಠ ಗುರುವೆಂದು, ಮಾರ್ಗದರ್ಶಕನೆಂದು ಗೀತೆಯ ಮೂಲಕ ನಮಗೆ ತಿಳಿಯುತ್ತದೆ. ಭಾರತದ ಅನೇಕ ಸಂಘ–ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಭಗವದ್ಗೀತೆಯ ಶ್ಲೋಕಾಂಶವನ್ನು ತಮ್ಮ ಧ್ಯೇಯವಾಕ್ಯವನ್ನಾಗಿಸಿಕೊಂಡಿವೆ. ಉದಾಹರಣೆಗೆ ಭಾರತೀಯ ಜೀವವಿಮಾ ನಿಗಮವು 'ಯೋಗ ಕ್ಷೇಮಂ ವಹಾಮ್ಯಹಮ್' ಎಂಬುದನ್ನೂ, ಮೈಸೂರು ವಿಶ್ವವಿದ್ಯಾನಿಲಯವು 'ನ ಹಿ ಜ್ಞಾನೇನ ಸದೃಶಮ್' ಎಂಬುದನ್ನೂ ತಮ್ಮದಾಗಿಸಿಕೊಂಡಿವೆ. ಆದಿಶಂಕರಾಚಾರ್ಯರು ಹೇಳುವಂತೆ,

**ಭಗವದ್ಗೀತಾ ಕಿಂಚಿದಧೀತಾ**
**ಗಂಗಾ ಜಲಲವ ಕಣ ಕಾಪೀತಾ ।**
**ಸಕೃದಪಿ ಯೇನ ಮುರಾರಿ ಸಮರ್ಚಾ**
**ಕ್ರಿಯತೇ ತಸ್ಯ ಯಮೇನ ನ ಚರ್ಚಾ ॥**

ಅಂದರೆ, ಯಾರು ಭಗವದ್ಗೀತೆಯನ್ನು ಕಿಂಚಿತ್ತಾದರೂ ಅಧ್ಯಯನ ಮಾಡುತ್ತಾನೆಯೋ, ಪವಿತ್ರವಾದ ಗಂಗಾಜಲದ ಒಂದು ಹನಿಯನ್ನಾದರೂ ಸವಿಯುತ್ತಾನೆಯೋ, ಕ್ಷಣಕಾಲವಾದರೂ ಮುರಾರಿ (ಶ್ರೀಕೃಷ್ಣ) ಯನ್ನು ಪೂಜಿಸುತ್ತಾನೆಯೋ ಆತನು ಮೃತ್ಯುದೇವತೆ ಯಮನೊಂದಿಗೆ ಯಾವ ಚರ್ಚೆಯನ್ನೂ ಮಾಡಬೇಕಾಗಿಲ್ಲ.

## ಗೀತಾ ಪರಿವಾರ



ಯೋಗಶಾಸ್ತ್ರ, ಧರ್ಮಶಾಸ್ತ್ರ, ಕರ್ತವ್ಯಶಾಸ್ತ್ರ ಎಂದೆನಿಸಿರುವ, ಇಷ್ಟೊಂದು ಮಹತ್ವವುಳ್ಳ 'ಭಗವದ್ಗೀತೆ'ಯನ್ನು ಇಂದು ಪ್ರತಿಯೊಂದು ಮನೆಗೆ ತಲುಪಿಸು ತ್ತಿರುವ ಕಾರ್ಯವನ್ನು 'ಗೀತಾ ಪರಿವಾರ' ಮಾಡುತ್ತಿದೆ. ಇದರ ಸಂಸ್ಥಾಪಕರು ಹಾಗೂ ಅಧ್ಯಕ್ಷರು ಪೂಜ್ಯ ಸ್ವಾಮಿ ಶ್ರೀ ಗೋವಿಂದ ಗಿರಿಜೀ ಮಹಾರಾಜ್. ಕೊರೊನಾದಿಂದ ಇಡೀ ಜಗತ್ತು ತಲ್ಲಣಗೊಂಡಿದ್ದಾಗ ಭಗವದ್ಗೀತೆ ಯನ್ನು ಮನೆಮನೆಗೆ ತಲುಪಿಸಲು ಸ್ವಾಮೀಜಿಯವರು ದೃಢ ನಿರ್ಧಾರ ಕೈಗೊಂಡರು.ಅದರಂತೆ ಗೀತಾ ಪರಿವಾರದ ವತಿಯಿಂದ ಆನ್‌ಲೈನ್ ತರಗತಿಗಳು ಪ್ರಾರಂಭವಾದವು. ಈಗ ಕನ್ನಡವೂ ಸೇರಿದಂತೆ 12 ಭಾಷೆಗಳಲ್ಲಿ, ಪ್ರಪಂಚದ 143 ದೇಶಗಳ ಸುಮಾರು 5.5 ಲಕ್ಷ ಮಂದಿ ಭಗವದ್ಗೀತೆ ಕಲಿಯುವ ಉದ್ದೇಶದಿಂದ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. 'ಗೀತೆ ಕಲಿಯಿರಿ, ಕಲಿಸಿರಿ, ಜೀವನದಲ್ಲಿ ಅಳವಡಿಸಿಕೊಳ್ಳಿ' ಎಂಬ ಗೀತಾ ಪರಿವಾರದ ಧ್ಯೇಯವಾಕ್ಯದಂತೆ, ಇಂದು ಪ್ರಪಂಚದ ಮೂಲೆಮೂಲೆಯಲ್ಲೂ ಆನ್‌ಲೈನ್ ಮೂಲಕ ವಿವಿಧ ವಯೋಮಾನದ ಮಕ್ಕಳು, ಹಿರಿಯರು ಶ್ರೀಮದ್ಭಗವದ್ಗೀತೆಯನ್ನು ಕಲಿ ಯುತ್ತಿದ್ದಾರೆ. ಝೂಮ್ ಆ್ಯಪ್ ಮೂಲಕ 18 ವಿವಿಧ ಸಮಯಗಳಲ್ಲಿ (ಬೆಳಗ್ಗೆ 5 ಗಂಟೆಯಿಂದ ರಾತ್ರಿ 2 ಗಂಟೆಯವರೆಗೆ) 40 ನಿಮಿಷಗಳ ತರ ಗತಿಗಳು ನಡೆಯುತ್ತವೆ. ಇದರ ಪ್ರತಿ ಹಂತದಲ್ಲೂ ಪ್ರವೇಶ, ಕಲಿಕೆ ಎಲ್ಲವೂ ಉಚಿತ. ಪ್ರತಿದಿನ 1300 ಝೂಮ್ ತರಗತಿಗಳು ವಾರದಲ್ಲಿ ಐದು ದಿನ (ಸೋಮವಾರದಿಂದ ಶುಕ್ರವಾರದವರೆಗೆ) ನಡೆಯು ‌ತ್ತಿದ್ದು, ಪ್ರಪಂಚದ ಅತೀ ದೊಡ್ಡ ಆನ್‌ಲೈನ್ ಗೀತಾತರಗತಿಯಾಗಿ ಮಹತ್ವದ ಸಾಧನೆ ಮಾಡಿದೆ.

### ಗೀತ ಬೋಧನೆ

ಗೀತೆಯನ್ನು ಕಲಿಯುವ ಆಸಕ್ತಿ ಉಳ್ಳವರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಭಾಷೆಯನ್ನು, ಸಮಯವನ್ನು ಆಯ್ದುಕೊಂಡು, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ನಾಲ್ಕು ಹಂತಗಳಲ್ಲಿ, ಅನುಭವವುಳ್ಳ ನುರಿತ ಪ್ರಶಿಕ್ಷಕರಿಂದ ಸಂಸ್ಕೃತ ವ್ಯಾಕರಣವನ್ನು ಅನುಸರಿಸಿ ಗೀತೆಯ 18 ಅಧ್ಯಾಯಗಳನ್ನು ಕಲಿಯಬಹುದು. ಭಗವದ್ಗೀತೆಯ ಸಂಸ್ಕೃತ ಶ್ಲೋಕಗಳ ಸಾಮಾನ್ಯ ನಿಯಮಗಳನ್ನು (ಆಘಾತ, ಅನುಸ್ವಾರ, ವಿಸರ್ಗ, ಉಚ್ಚಾರಣೆ) ಮತ್ತು ಶ್ಲೋಕಗಳ ಅರ್ಥವನ್ನು ವಿವರಿಸಲು ವಾರಾಂತ್ಯದಲ್ಲಿ ವಿದ್ವಾಂಸರಿಂದ ವಿಶೇಷ ತರಗತಿಗಳು ಹಾಗೂ ಪ್ರಶ್ನೋತ್ತರ ಅಧಿವೇಶನ ಇರುತ್ತವೆ. ಆಯಾ ಅಧ್ಯಾಯದ ಪಿ.ಡಿ.ಎಫ್., ಪ್ರತಿದಿನ ಕಲಿಸಲಾಗುವ ಶ್ಲೋಕಗಳ ಆಡಿಯೋ ಮತ್ತು ಪಠ್ಯವನ್ನು ವಾಟ್ಸಾಪ್ ಗುಂಪಿನಲ್ಲಿ ಹಂಚಿಕೊಳ್ಳಲಾಗುತ್ತದೆ. ತರಗತಿಯಲ್ಲಿ ಪ್ರಶಿಕ್ಷಕರು ಹೇಳಿಕೊಡುವ ಶ್ಲೋಕಗಳನ್ನು ಗುಂಪಿನಲ್ಲಿ ಹಾಗೂ ವೈಯಕ್ತಿಕವಾಗಿ ಅನುಪಠಣ ಮಾಡಿಸಲಾಗುತ್ತದೆ. ಇದರಿಂದ ಗೀತೆಯನ್ನು ವ್ಯಾಕರಣ ಬದ್ಧವಾಗಿ, ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಕಲಿಯಬಹುದು. ಜೊತೆಗೆ ಗೀತಾಪರಿವಾರದಿಂದ ಪ್ರತಿ ತಿಂಗಳು ನಡೆಸಲಾಗುವ ಪರೀಕ್ಷೆಗಳಲ್ಲಿ (ಪರೀಕ್ಷೆ ಕಡ್ಡಾಯವಲ್ಲ) ಉತ್ತೀರ್ಣರಾದವರಿಗೆ ಪ್ರಮಾಣಪತ್ರವನ್ನು ಕೂಡ ನೀಡಲಾಗುತ್ತದೆ.

# ಮೈಸೂರು ಭಾಗದ ಪರಮ ಪವಿತ್ರ ಶಿವಾಲಯಗಳು



ತ್ರಿಮೂರ್ತಿಗಳು ಭೂಮಂಡಲದ ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಅಧಿಪತಿಗಳು. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾವುದೇ ಭೇದವಿಲ್ಲ. ಆದರೆ ಅವರಲ್ಲೇ ಕಾಣದ ಯಾರು ಹೆಚ್ಚು ಯಾರು ಕಮ್ಮಿ ಎಂಬ ಭೇದವನ್ನು ಮನುಷ್ಯನು ಕಾಣುವುದು ಅಧರ್ಮವಾದೀತು. ತ್ರಿಮೂರ್ತಿಗಳಲ್ಲಿ ಬ್ರಹ್ಮನು ವೇದನಾದ ಪ್ರಿಯನು, ಮಹಾವಿಷ್ಣುವು ಅಲಂಕಾರ ಪ್ರಿಯನು, ನಿರಾಡಂಬರನಾದ ಪರಮೇಶ್ವರನು ಅಭಿಷೇಕ ಪ್ರಿಯನು. ಕೈಲಾಸವಾಸಿಯಾದ ಶಿವನ್ನು ಭೂಲೋಕದಲ್ಲಿ ಲಿಂಗರೂಪದಲ್ಲಿ ಆರಾಧನೆ ಮಾಡುವುದು ಕ್ರಮವಾಗಿದೆ. ಶಿವನು ತನ್ನ ವಿವಿಧ ಇಪ್ಪತ್ತೈದು ಅವತಾರಗಳಲ್ಲಿ ಭಕ್ತರಿಗೆ ಅನುಗ್ರಹಿಸಿದ್ದಾನೆ. ಅವುಗಳೆಂದರೆ ಚಂದ್ರಶೇಖರ ಮೂರ್ತಿ, ಉಮಾಮಹೇಶ್ವರ ಮೂರ್ತಿ, ವೃಷಭಾರೂಢ ಮೂರ್ತಿ, ತಾಂಡವೇಶ್ವರ ಮೂರ್ತಿ, ಕಲ್ಯಾಣ ಮೂರ್ತಿ, ಭಿಕ್ಷಾಟನಾ ಮೂರ್ತಿ, ಕಾಮಸಂಹಾರ ಮೂರ್ತಿ, ಕಾಲಸಂಹಾರ ಮೂರ್ತಿ, ತ್ರಿಪುರ ಸಂಹಾರ ಮೂರ್ತಿ, ಜಲಂಧರ ಮೂರ್ತಿ, ಗಜಾಸನಮರ್ಧನ ಮೂರ್ತಿ, ವೀರಭದ್ರ ಮೂರ್ತಿ, ಶಂಕರ ನಾರಾಯಣ ಮೂರ್ತಿ, ಅರ್ಧನಾರೀಶ್ವರ ಮೂರ್ತಿ, ಕಿರಾತಾರ್ಜುನ ಮೂರ್ತಿ, ಕಂಕಾಳ ಮೂರ್ತಿ, ಚಂಡಿಕೇಶ್ವರ ಪ್ರಸನ್ನ ಮೂರ್ತಿ, ವಿಷಕಂಠ ಮೂರ್ತಿ, ಚಕ್ರದಾನ ಮೂರ್ತಿ, ವಿಘ್ನೇಶ್ವರವರ ಪ್ರಸನ್ನ ಮೂರ್ತಿ, ಸೋಮಸ್ಕಂದ ಮೂರ್ತಿ, ಏಕಪಾದಮೂರ್ತಿ, ಸುಖಾಸೀನ ಮೂರ್ತಿ, ಪಟಮೂಲ ಮೂರ್ತಿ, ಲಿಂಗೋದ್ಭವ ಮೂರ್ತಿ ಅವತಾರಗಳಲ್ಲಿನ ಲಿಂಗರೂಪಿ ಶಿವನ ಆರಾಧನೆ ಅನಾದಿಕಾಲದಿಂದಲೂ ನಿತ್ಯ ತ್ರಿಕಾಲಗಳಲ್ಲಿ ನಡೆದು ಬಂದಿದೆ. ಅಲ್ಲದೆ ವಿಶೇಷವಾಗಿ ಶಿವರಾತ್ರಿಯಂದು ಅಹೋರಾತ್ರಿ ಪೂಜಿಸಿ ಧ್ಯಾನಿಸಲಾಗುವುದು.

ಮೈಸೂರು ಪ್ರಾಂತ್ಯದಲ್ಲಿ ಹಲವಾರು ಶಿವನ ದೇವಸ್ಥಾನಗಳನ್ನು ಋಷಿ ಮುನಿಗಳು, ರಾಜಮಹಾರಾಜರು, ಅಲ್ಲದೆ ಭಕ್ತ ಆಸ್ತಿಕರು ನಿರ್ಮಿಸಿ, ಜೀರ್ಣೋದ್ಧಾರ ಮಾಡಿ ಕಾಲಕಾಲಕ್ಕೆ ಧರ್ಮ ರಕ್ಷಣೆಯನ್ನು ಮಾಡಿರುತ್ತಾರೆ. ಪ್ರಮುಖವಾಗಿ ಮಹರ್ಷಿ ಗೌತಮರು, ಮಹರ್ಷಿ ಅಗಸ್ತ್ಯರು, ಮಹರ್ಷಿ ಮಾರ್ಕಂಡ್ಯೇಯರು. ಅಲ್ಲದೆ ಇನ್ನೂ ಹಲವಾರು ಋಷಿಮುನಿಗಳು ಭಕ್ತಿಯಿಂದ ಶಿವನನ್ನು ಕುರಿತು ಲೋಕ ಕಲ್ಯಾಣಾರ್ಥವಾಗಿ ತಪಸ್ಸು ಮಾಡಿ ಒಲಿಸಿಕೊಂಡು ಕೃತಾರ್ಥರಾಗಿದ್ದಾರೆ. ಅವರುಗಳೆಲ್ಲರಿಗೂ ಪರಮೇಶ್ವರನು ಸ್ವಯಂವ್ಯಕ್ತನಾಗಿ ದರ್ಶನ ನೀಡಿದ ತಪೋಭೂಮಿಯು ಪುಣ್ಯಕ್ಷೇತ್ರಗಳಾಗಿವೆ. ಅಂತಹವುಗಳಲ್ಲಿ ಗರಳಪುರಿ ಕ್ಷೇತ್ರವೆಂದೇ ಕರೆಯಲ್ಪಟ್ಟು ನಂತರ ನಂಜನಗೂಡು ಎಂದು ಹೆಸರಿಸಲ್ಪಟ್ಟ ಮಹರ್ಷಿ ಗೌತಮರಿಂದ ಪೂಜಿಸಲ್ಪಟ್ಟ ಶ್ರೀ ಪಾರ್ವತಿ ಸಮೇತ ಶ್ರೀ ಶ್ರೀಕಂಠೇಶ್ವರ ಸ್ವಾಮಿಯು ನೆಲೆಗೊಂಡಿದ್ದಾನೆ. ಚಾಮುಂಡಿ ಬೆಟ್ಟದಲ್ಲಿ ತೃಣಬಿಂದು ಋಷಿಯಿಂದ ಆರಾಧಿತನಾದ ಶ್ರೀ ಮಹಾಬಲೇಶ್ವರ ಸ್ವಾಮಿಯು, ಮಹರ್ಷಿ ಅಗಸ್ತ್ಯರಿಂದ ಪೂಜಿತಗೊಂಡ ತಿರುಮಕೂಡಲು ಶ್ರೀ ಅಗಸ್ತ್ಯೇಶ್ವರ ಸ್ವಾಮಿಯು, ಕೌಹಳ ಮತ್ತು ಗಾಲವ ಎಂಬ ಋಷಿಗಳಿಂದ ಪೂಜಿಸಲ್ಪಟ್ಟ ಕೊಳ್ಳೇಗಾಲದ ಶ್ರೀ ಮರುಳೇಶ್ವರ ಸ್ವಾಮಿ, ಮುಡುಕುತೊರೆಯಲ್ಲಿ ಶ್ರೀ ಭ್ರಮರಾಂಭ ಸಮೇತರಾಗಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಯು, ಬೆಟ್ಟದಪುರದಲ್ಲಿ ಶ್ರೀ ಭ್ರಮರಾಂಭ ಸಮೇತರಾಗಿ ಶ್ರೀ ಶಿಡ್ಲು ಮಲ್ಲಿಕಾರ್ಜುನ ಸ್ವಾಮಿಯು, ಮಲೈಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಹದೇಶ್ವರ ಸ್ವಾಮಿಯು ನೆಲೆಗೊಂಡು ಭಕ್ತರಿಗೆಲ್ಲ ಅನುಗ್ರಹಿಸುತ್ತಿದ್ದಾರೆ.

ಕಾಲಾನಂತರ ರಾಜ ಮಹಾರಾಜರ ಆಳ್ವಿಕೆಯಲ್ಲಿ ಶಿವನ ದೇವಸ್ಥಾನಗಳು ನಿರ್ಮಾಣಗೊಂಡಿದ್ದಲ್ಲದೆ ಪುರಾತನ ಶಿಥಿಲ ದೇವಸ್ಥಾನಗಳು ಜೀರ್ಣೋದ್ಧಾರವಾಗಿರುವುದು ಕಂಡು ಬರುತ್ತದೆ. ಮೈಸೂರು ಪ್ರಾಂತ್ಯವನ್ನು ಆಳಿದ ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ನಂತರದ ಯದುವಂಶದ ರಾಜರುಗಳು ಧರ್ಮದ ತಳಹದಿಯ ಮೇಲೆ ರಾಜ್ಯಭಾರವನ್ನು ಮಾಡಿದರು.

**ಗಂಗರು :** ಸುಮಾರು 4ರಿಂದ 6ನೇ ಶತಮಾನದವರೆಗೆ ಮೈಸೂರು ಪ್ರಾಂತ್ಯದಲ್ಲಿ ಸ್ವತಂತ್ರವಾಗಿ ಈ ಪ್ರದೇಶಕ್ಕೆ ಸ್ವರೂಪವನ್ನು ನೀಡಿ ಆಡಳಿತ ನಡೆಸಿದ ಗಂಗರ ರಾಜಧಾನಿ ತಲಕಾಡು ಆಗಿತ್ತು. ಅವರ ಆಡಳಿತ ಕಾಲದಲ್ಲಿ ಶ್ರೀ ಪಾತಾಳೇಶ್ವರ, ಶ್ರೀ ಮರಳೇಶ್ವರ ಹಾಗೂ ಅರ್ಕೇಶ್ವರಸ್ವಾಮಿ ಶಿವನ ದೇವಾಲಯಗಳನ್ನು ನಿರ್ಮಿಸಿದರು ಎನ್ನಲಾಗಿದೆ. ಅಲ್ಲದೆ ಬೇಗೂರಿನ ಪಂಚಲಿಂಗೇಶ್ವರ ದೇವಸ್ಥಾನ ಸಹ ಇವರ ಕಾಲದಲ್ಲಿ ನಿರ್ಮಾಣವಾಯಿತೆನ್ನಲಾಗಿದೆ.

**ಹೊಯ್ಸಳರು :** ಸುಮಾರು 12ನೇ ಶತಮಾನದಲ್ಲಿ ರಾಜ ಸಳನು ಹುಲಿಯನ್ನು ಕೊಂದುದ್ದಾಗಿಯೂ ಅಂದಿನಿಂದ ಅವನು ಹೊಯ್ಸಳ ರಾಜನಾಗಿ ಪ್ರಖ್ಯಾತನಾದನು. ಹೊಯ್ಸಳರ ರಾಜ ಇಮ್ಮಡಿ ವೀರಬಲ್ಲಾಳನು ತಲಕಾಡು ರಾಜ್ಯ ಗೆದ್ದ ನೆನಪಿಗಾಗಿ ಆತನ ಮಡದಿ ಬಮ್ಮಲ ಮಹಾದೇವಿಯು ಮೈಸೂರು ಪ್ರಾಂತ್ಯದ ಮೊಖರಿ ಲಕ್ಕಯ್ಯನ ಮಗಳು ಮೈಸೂರಿನ ಸಮೀಪದ ಕೆ. ಹೆಮ್ಮನಹಳ್ಳಿ ಎಂಬಲ್ಲಿ 1188ನೇ ಇಸವಿಯಲ್ಲಿ ಶ್ರೀ ಮಹಾಲಿಂಗೇಶ್ವರನನ್ನು ಪ್ರತಿಷ್ಠಾಪಿಸಿ ಭವ್ಯವಾದ ದೇವಸ್ಥಾನವನ್ನು ನಿರ್ಮಿಸಿದಳು ಎಂಬುದಾಗಿ ದೇವಾಲಯದ ಮುಂಭಾಗದಲ್ಲಿರುವ ಶಿಲಾಶಾಸನದಲ್ಲಿ ವಿವರಿಸಲಾಗಿದೆ. ಅಲ್ಲದೆ 1196ನೇ ಇಸವಿಯಲ್ಲಿ ಯಳಂದೂರು ತಾಲೂಕು ಯರಿಯೂರು ಗ್ರಾಮಕ್ಕೆ ಸಮೀಪದಲ್ಲಿನ ಚಿಕ್ಕಹೊಳೆ ದಡದಲ್ಲಿ ಶ್ರೀ ವಲ್ಲಲೇಶ್ವರ ಎಂಬ ಶಿವನ ದೇವಸ್ಥಾನವನ್ನು ನಿರ್ಮಿಸಿದರೆಂದು ಕಂಡು ಬರುತ್ತದೆ. ಕಾಲಾನಂತರ ಈ ದೇವಸ್ಥಾನವು ಗುಂಗುರು ಶ್ರೀ ಮಲ್ಲಿಕಾರ್ಜುನ ಸ್ವಾಮಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿರುವುದು ತಿಳಿದು ಬರುತ್ತದೆ. ನಂತರದ ರಾಜ ಸೋಮೇಶ್ವರನು 1228ರಲ್ಲಿ ಬದನಾಳು ಗ್ರಾಮದಲ್ಲಿ ಶಿವನ ದೇವಸ್ಥಾನವನ್ನು ನಿರ್ಮಿಸಿದನೆನ್ನಲಾಗಿದೆ. ಅಲ್ಲದೆ ಹೊಯ್ಸಳ ರಾಜರ ಪ್ರತಿನಿಧಿಗಳಾದ ಉಮ್ಮತ್ತೂರು ವೀರ ಹನುಮಪ್ಪನು 1467ರಲ್ಲಿ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ ಹಾಗೂ ಶ್ರೀ ದಿವ್ಯ ಅನಿಲೇಶ್ವರ ಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದನು ಎನ್ನಲಾಗಿದೆ. ಅಂತೆಯೇ ಮದ್ದೂರಿನ ಶ್ರೀ ವೈದ್ಯನಾಥೇಶ್ವರ ಸ್ವಾಮಿ ದೇವಸ್ಥಾನ ಹೊಯ್ಸಳರ ಕಾಲದ್ದು ಎನ್ನಬಹುದು.

**ಚಾಲುಕ್ಯರು :** ಸುಮಾರು 10ನೇ ಶತಮಾನದ ಕಾಲಘಟ್ಟದಲ್ಲಿ ಚಾಲುಕ್ಯರು ಮೈಸೂರು ಭಾಗದಲ್ಲಿಯೂ ಸಹ ಆಡಳಿತ ನಡೆಸಿದರೆನ್ನಲಾಗಿದೆ. ಅವರ ಆಳ್ವಿಕೆಯಲ್ಲಿ ಹಲವಾರು ಶಿವನ ದೇವಸ್ಥಾನಗಳನ್ನು ನಿರ್ಮಿಸಿ, ಜೀರ್ಣೋದ್ಧಾರಗಳನ್ನು ಮಾಡಿ ಧಾರ್ಮಿಕ ಶ್ರದ್ಧೆಯನ್ನು ತೋರಿದರು. ಮೈಸೂರು ಸಮೀಪದ ವರುಣಾ ಗ್ರಾಮವು ಚಾಲುಕ್ಯರ ಅಧೀನದಲ್ಲಿದ್ದು ಅಲ್ಲಿ ಭೂತಾಳೇಶ್ವರ ಎಂಬ ಶಿವನ ದೇವಸ್ಥಾನವನ್ನು ನಿರ್ಮಿಸಿದರು. ಕಾಲಾನಂತರ ದೇವಸ್ಥಾನವು ಶ್ರೀ ಮಹದೇಶ್ವರ ಸ್ವಾಮಿ ಹೆಸರಲಿ ಬದಲಾಗಿದು ಪೂಜೆಯು ಸಲ್ಲಿಸಲಾಗುತ್ತಿದೆ. ಚಾಲುಕ್ಯರ ವಂಶಸ್ಥರಾದ ನರಸಿಂಗ ಎಂಬುವವರು ಶ್ರೀ ನರಸಿಂಗೇಶ್ವರ ದೇವಸ್ಥಾನವನ್ನು ಈ ಪ್ರಾಂತ್ಯದಲ್ಲಿ ನಿರ್ಮಿಸಿದರು ಎನ್ನಲಾಗಿದೆ.

**ವಿಜಯನಗರ ಸಾಮ್ರಾಜ್ಯ:** ಸುಮಾರು 14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವು ಮೈಸೂರು ಪ್ರಾಂತ್ಯದವರೆಗೂ



ಹಬ್ಬಿದ್ದು ಅವರ ಪ್ರತಿನಿಧಿಯಾಗಿ ಆಡಳಿತ ನಡೆಸುತ್ತಿದ್ದ ಬಸವನಾಯಕ ಎಂಬುವವನು ಹೊಂಗನೂರು ಎಂಬ ಗ್ರಾಮದಲ್ಲಿ 1513ರಲ್ಲಿ ಶ್ರೀ ತ್ರಿಯಂಭಕೇಶ್ವರ ಎಂಬ ಶಿವನ ದೇವಸ್ಥಾನವನ್ನು ನಿರ್ಮಿಸಿದನು ಎಂದು ತಿಳಿದು ಬರುತ್ತದೆ. ಅಲ್ಲದೆ ನಂತರದ ಆಡಳಿತಗಾರ ಸಾಲುವ ಗೋವಿಂದರಾಜು ಎಂಬುವವನು ಹರದನಹಳ್ಳಿ ಗ್ರಾಮದಲ್ಲಿ ಶ್ರೀ ದಿವ್ಯ ಲಿಂಗೇಶ್ವರನ ದೇವಸ್ಥಾನ, ಅಂತೆಯೇ ನಂಜನಗೂಡು ಶ್ರೀ ನಂಜುಂಡೇಶ್ವರ ಸ್ವಾಮಿ, ತಿರುಮಕೂಡಲು ಶ್ರೀ ಅಗಸ್ತ್ಯೇಶ್ವರ ಸ್ವಾಮಿಗೆ ವಿಶೇಷ ಪೂಜೆಗಾಗಿ ದತ್ತಿಯನ್ನು ವ್ಯವಸ್ಥೆ ಮಾಡಿದನೆನ್ನಲಾಗಿದೆ. ನಂತರದ ವಿಜಯನಗರದ ರಾಜ ತಿರುಮಲನ ಮಗ ಮುದ್ದುರಾಜ ಎಂಬುವವರು 1634ರಲ್ಲಿ ಯಳಂದೂರಿನ ಶ್ರೀ ಗೌರೇಶ್ವರ ದೇವಸ್ಥಾನಕ್ಕೆ ರಾಜಗೋಪುರ ನಿರ್ಮಿಸಿ ಜೀರ್ಣೋದ್ಧಾರ ಮಾಡಿರುವುದು ಕಂಡು ಬರುತ್ತದೆ. ರಾಜ ತಿರುಮಲನ ಮತ್ತೊಬ್ಬ ಮಗ ರಾಮ ಎಂಬುವನು ಶಿವನ ಭಕ್ತನಾಗಿದ್ದು ಮೈಸೂರು ಮಧ್ಯಭಾಗದಲ್ಲಿ ಐತಿಹಾಸಿಕ ಶ್ರೀ ತೃಣೇಶ್ವರ ಸ್ವಾಮಿಯ ದೇವಸ್ಥಾನವನ್ನು ನಿರ್ಮಿಸಿದನೆಂಬುದು ಪ್ರತೀತಿ.

**ಯದುವಂಶ:** ಸುಮಾರು 14ನೇ ಶತಮಾನದ ಅಂತ್ಯದಲ್ಲಿ ಯದುರಾಯ ದ್ವಾರಕೆಯಿಂದ ಕಾವೇರಿ–ಕಪಿಲಾ ಸಮೀಪದಲ್ಲಿರುವ ಮಹಾಬಲ ಪರ್ವತದಲ್ಲಿನ ಪ್ರದೇಶಕ್ಕೆ ಬಂದರೆಂದು, ನಂತರ ಯದುವಂಶದ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದರೆಂಬುದು ತಿಳಿದುಬರುತ್ತದೆ. ಮಾರ್ಗ ಮಧ್ಯದಲ್ಲಿ ಪ್ರಥಮವಾಗಿ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ, ಚಾಮುಂಡಿಬೆಟ್ಟದಲ್ಲಿನ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರ ದರ್ಶನ ಪಡೆದು ಕೃತಾರ್ಥರಾಗಿ, ಮೈಸೂರಿಗೆ ಆಗಮಿಸಿ ನೆಲೆಸಿದರು ಎಂಬುದು ಇತಿಹಾಸ ನಂತರ ಪ್ರಾಂತ್ಯವನ್ನು ಆಳಿದ ಯದುವಂಶಸ್ಥ ಹಿರಿಯ ಬೆಟ್ಟದ ಚಾಮರಾಜ ಒಡೆಯರ್, 1513ರಲ್ಲಿ ಕೋಟೆಯನ್ನು ನಿರ್ಮಿಸಿ ಮೈಸೂರು ನಗರ ಎಂದು ನಾಮಕರಣ ಮಾಡಿದರೆಂಬುದು ಪ್ರತೀತಿ. ಮುಂದೆ 1610ರಿಂದ ಆಡಳಿತ ನಡೆಸಿದ ಮೊದಲನೆಯ ರಾಜ ಒಡೆಯರ್, ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿ ಸ್ವಾಮಿಗೆ ವಿಭೂತಿ ರೇಖೆಯಿಂದ ಯುಕ್ತವಾದ ನವರತ್ನ ಖಚಿತವಾದ ಚಿನ್ನದ ಕೊಳಗವನ್ನೊಪ್ಪಿಸಿ ಸೇವೆ ಮಾಡಿದರು. ಅಲ್ಲದೆ ತಿರುಮಕೂಡಲು ಅಗಸ್ತ್ಯೇಶ್ವರ ಸನ್ನಿಧಿಯಲ್ಲಿನ ಕಾವೇರಿ–ಕಪಿಲಾ ಸಂಗಮದಲ್ಲಿ ಸಂಧ್ಯಾ ಮಂಟಪವನ್ನು, ಸೋಪಾನಗಳನ್ನು ನಿರ್ಮಿಸಿ ಎಡತೊರೆ ಶ್ರೀ ಅರ್ಕೇಶ್ವರಸ್ವಾಮಿ, ರಾಮನಾಥಪುರದ ಶ್ರೀ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿದರು. 5ನೇ ಬೆಟ್ಟದ ಚಾಮರಾಜ ಒಡೆಯರ್‌ರವರ ಆದೇಶದಂತೆ 1576ರಲ್ಲಿ ದಳವಾಯಿ ಬನ್ನೂರು ಲಿಂಗಣ್ಣ ಎಂಬುವವರು ಗರ್ಗೇಶ್ವರಿಯಲ್ಲಿ ಶ್ರೀ ಗರ್ಗೇಶ್ವರಸ್ವಾಮಿಯ ದೇವಸ್ಥಾನ ನಿರ್ಮಿಸಿ, ತಿರುಮಕೂಡಲು ಶ್ರೀ ಅಗಸ್ತ್ಯೇಶ್ವರಸ್ವಾಮಿಗೂ ನಿತ್ಯ



ದೀಪಾರಾಧನೆ, ರಥೋತ್ಸವಗಳು ಜರುಗುವಂತೆ ವ್ಯವಸ್ಥೆಗೊಳಿಸಿದರು ಎಂಬುದಾಗಿ ತಿಳಿದು ಬರುತ್ತದೆ. ನಂತರದ ಮಹಾರಾಜ ರಾದ ಸ್ವಯಂ ಜಟ್ಟಿಗಳು, ಉತ್ತಮ ಆಡಳಿತಗಾರರೂ ಆದ ರಣಧೀರ ಕಂಠೀರವ ನರಸರಾಜ ಒಡೆಯರ್‌ರವರು 1638ರಲ್ಲಿ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಗೌತಮ ರಥವು ಶಿಥಿಲವಾದ್ದರಿಂದ ರಥವನ್ನು ನೂತನವಾಗಿ ಮಾಡಿಸಿ ಭಕ್ತಿ ಪೂರ್ವಕವಾಗಿ ಅರ್ಪಿಸಿದರೆನ್ನಲಾಗಿದೆ. ಭಕ್ತಿ ಶ್ರದ್ಧೆಗಳಿಂದ ಶಿವರಾತ್ರಿ, ಗೌರಿ, ಗಣೇಶ ಮುಂತಾದ ಶೈವವ್ರತಗಳನ್ನು ಸ್ವಯಂ ಆಚರಿಸುತ್ತಿದ್ದರು.

ಸಂಸ್ಥಾನದ 13ನೇ ದೊರೆ ದೊಡ್ಡದೇವರಾಜ ಒಡೆಯರ್ ರವರು 1664ರಲ್ಲಿ ಅರಮನೆಯ ಆವರಣದಲ್ಲಿನ ಶ್ರೀ ತೃಣೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಲ್ಲು ಮಂಟಪವನ್ನು ಕಟ್ಟಿಸಿ ಈ ಮಂಟಪದಲ್ಲಿ ಗಣಪತಿ, ವೃಷಭ ಸಹಿತವಾಗಿ ಒಂದು ದೊಡ್ಡ ಶಿಲಾಸ್ತಂಭವನ್ನು ಸ್ಥಾಪಿಸಿದರು. ಈ ದೇವ ಸ್ಥಾನದಲ್ಲಿನ ಸ್ವಾಮಿಯವರ ಎದುರಿಗೆ ಕೈ ಮುಗಿದುಕೊಂಡು ನಿಂತಿರುವ ಶಿಲೆಯಿಂದ ತಮ್ಮ ಭಕ್ತಿ ವಿಗ್ರಹವನ್ನು ಸ್ಥಾಪಿಸಿದರು. ಆನಂತರ 1776ರಲ್ಲಿ ಸಂಸ್ಥಾನವನ್ನು ಆಳಿದ 21ನೇ ಅರಸರಾದ ಖಾಸ ಚಾಮರಾಜ ಒಡೆಯರ್ ರವರು ಶ್ರೀ ಕೃಷ್ಣನಂತೆ ಇರುವ ಪುತ್ರನನ್ನು ಪಡೆಯಬೇಕೆಂಬ ಅಭಿ ಲಾಷೆಯಿಂದ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯ ವರನ್ನು ಕುರಿತು ಕೋಟಿ ಪಂಚಾಕ್ಷರಿ ಜಪ, ತರ್ಪಣ, ಹೋಮಯಾಗಾದಿಗಳನ್ನು ಮಾಡಿದರೆಂತಲೂ ಶ್ರೀ ಶ್ರೀಕಂಠೇಶ್ವರಸ್ವಾಮಿಯು ಸುಪ್ರಸನ್ನನಾಗಿ 1794ರಲ್ಲಿ ಪುತ್ರ ಸಂತಾನವಾಗಿ, ಮಗುವಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಎಂದು ನಾಮಕರಿಸಿದರೆಂದು ತಿಳಿದು ಬರುತ್ತದೆ.

■ ನಂ ಶ್ರೀಕಂಠಕುಮಾರ್,
ಮೊ: 9481067333

ಮೈಸೂರು ಮಿತ್ರ
ಶನಿವಾರ 18 ಫೆಬ್ರವರಿ 2023





# ಶಿವರಾತ್ರಿ; ಓಂಕಾರ ಮಹಾತ್ಮೆ

–ಪರಮಪೂಜ್ಯ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ



ಆದ್ಯಾಯಾಮಿತ ತೇಜಸೇ
ಶ್ರುತಿಪದೈರ್– ವೇದ್ಯಾಯ ಸಾಧ್ಯಾಯತೇ
ವಿದ್ಯಾನಂದ ಮಯಾತ್ಮನೇ
ತ್ರಿ ಜಗತ– ಸ್ಸಂರಕ್ಷಣೋದ್ಯೋಗಿನೇ
ಧೇಯಾಯಾಖಿಲಯೋಗಿಭಿಸ್ಸುರಗಣೈರ್–
ಗೇಯಾಯ ಮಾಯಾವಿನೇ
ಸಮ್ಯಕ್ ತಾಂಡವ ಸಂಭ್ರಮಾಯ
ಜಟಿನೇ ಸೇಯಂ ನತಿಶ್ಶಂಭವೇ?

**ಅರ್ಥ:** ಎಲ್ಲರಿಗಿಂತಲೂ, ಎಲ್ಲಕ್ಕಿಂತಲೂ ಮೊದಲನೆಯವನೂ, ಅಳತೆ ಮಾಡಲು ಸಾಧ್ಯವಿಲ್ಲದಷ್ಟು ತೇಜಸ್ಸುಳ್ಳವನೂ, ವೇದವಾಕ್ಯಗಳಿಂದ ತಿಳಿಯಲ್ಪಡುವವನೂ, ಸಾಧಿಸ ಲ್ಪಡುವವನೂ, ಅಮೃತಸ್ವರೂಪವಾದ ವಿದ್ಯೆಯಿಂದಲೂ ಆನಂದದಿಂದಲೂ ತುಂಬಿರುವವನೂ, ಮೂರು ಲೋಕಗಳನ್ನು ರಕ್ಷಣೆ ಮಾಡುವ ಉದ್ಯೋಗವುಳ್ಳವನೂ, ಯೋಗಿ ಗಳಿಂದಲೂ ದೇವತೆಗಳಿಂದಲೂ ಧ್ಯಾನಿಸಲ್ಪಡುವವನೂ, ಕೀರ್ತಿಸಲ್ಪಡುವವನೂ, ಮಾಯಾವಿಯಾದವನೂ, ಅದ್ಭುತವಾದ ತಾಂಡವನೃತ್ಯವೆಂಬ ಸಂಭ್ರಮವುಳ್ಳವನೂ (ತಾಂಡವ ನೃತ್ಯದಿಂದ ಎಲ್ಲರನ್ನೂ ಅಚ್ಚರಿಗೊಳಿಸುವ ವನೂ) ಜಟಾಧಾರಿಯೂ ಶುಭಗಳನ್ನು ಅನುಗ್ರಹಿಸು ವವನೂ ಆದ ಪರಮಶಿವನಿಗೆ ನಮನಗಳು.

ಹೀಗೆ ಮಹಾಶಿವನನ್ನು ಸರಳವಾಗಿ ವರ್ಣಿಸಿ ನಮಿಸಲಾಗುತ್ತೆ. ಜಗತ್ತಿಗೆ ಒಡೆಯನಾದ ವಿಶ್ವನಾಥನನ್ನು ಪಾಮರರು ಮಾತ್ರವಲ್ಲದೆ ದೇವಾನುದೇವತೆಗಳು ಸಹ ಶಿವನನ್ನು ನಿತ್ಯ ಆರಾಧಿಸುತ್ತಾರೆ. ಮಹಾಶಿವರಾತ್ರಿಯಂದು ಶಿವನಾಮ ಜಪಿಸುತ್ತಾ ಜಾಗರಣೆ ಮಾಡಿದರೆ, ಸಕಲ ಪಾಪಗಳು ಕಳೆದು ಪುಣ್ಯಪ್ರಾಪ್ತಿಯಾಗುತ್ತೆ. ಇಂಥ ಪರಮಪವಿತ್ರವಾದ ಶಿವರಾತ್ರಿ ಆರಂಭವಾಗಿದ್ದಕ್ಕೂ ಒಂದು ಪೌರಾಣಿಕ ಹಿನ್ನೆಲೆ ಇದೆ.

ಹಿಂದೆ ಒಮ್ಮೆ ಶ್ರೀಮಹಾವಿಷ್ಣುವು ಶೇಷತಲ್ಪದ ಮೇಲೆ ಸುಖ ಯೋಗ ನಿದ್ರೆಯಲ್ಲಿರುವ ಸಮಯದಲ್ಲಿ ಬ್ರಹ್ಮದೇವ ಅಲ್ಲಿಗೆ ಬಂದ. ತಾನು ಬಂದಿದ್ದರೂ ನಿದ್ರಿಸುತ್ತಲೇ ಇದ್ದ ವಿಷ್ಣುವನ್ನು ನೋಡಿ ಬ್ರಹ್ಮನಿಗೆ ಕೋಪ ಬಂದಿತು. ವತ್ಸಾ! ಎಂದು ಸಂಬೋಧಿಸುತ್ತಾ "ನಾನು, ಬ್ರಹ್ಮ ಬಂದಿದ್ದೇನೆ. ಸೃಷ್ಟಿಗೆ ನಾನೇ ಮೂಲ ಕಾರಕ. ನನಗೆ ಗೌರವ ಕೊಡು ವುದು ನಿನ್ನ ಧರ್ಮ, ಆದ್ದರಿಂದ ವಿಷ್ಣುಮೂರ್ತಿ! ನಿದ್ದೆಯಿಂದ ಏಳು! ನನಗೆ ಗೌರವ ನೀಡು" ಎಂದ. ಇದನ್ನು ಕೇಳಿ ವಿಷ್ಣುವಿಗೆ ಅಸಾಧ್ಯ ಕೋಪ ಬಂದಿತು. ಆದರೂ ಹೊರಗೆ ಶಾಂತನಾಗಿಯೇ 'ಬನ್ನಿ, ಕುಳಿತುಕೊಳ್ಳಿ' ಎಂದು ಆಸನ ವನ್ನು ತೋರಿಸಿ, "ಇದೇನು! ನಿಮ್ಮ ಮುಖದಲ್ಲಿ ವಿಪರೀತ ಭಾವಗಳು ಕಾಣಿಸುತ್ತಿವೆಯಲ್ಲಾ!" ಎಂದು ಕೇಳಿದ, ಆಗ ಬ್ರಹ್ಮನು, "ಶ್ರೀಹರಿ! ಕಾಲವಶಾತ್ ನನ್ನಲ್ಲಿ ಕ್ರೋಧ ಭಾವನೆ ಎದ್ದಿದೆ. ಆದರೂ ನಾನು ಸೃಷ್ಟಿಗೆಲ್ಲಾ ಅಧಿಪತಿ ನನ್ನನ್ನು ನೋಡಿಯೂ ಸಹ ನೀನು ನಿದ್ದೆ ಮಾಡುತ್ತಿದೆಯಲ್ಲಾ! ನನಗೆ ಅದು ಒಂದಿಷ್ಟೂ ಹಿಡಿಸಲಿಲ್ಲ" ಎಂದ.

ಅದಕ್ಕೆ ವಿಷ್ಣುವು "ಜಗತ್ತೆಲ್ಲವೂ ಇರುವುದು ನನ್ನಲ್ಲೆ. ಅದನ್ನು ಕಾಪಾಡುತ್ತಿರುವವನೂ ನಾನೇ ಮೇಲಾಗಿ ನೀನು ನನ್ನ ನಾಭಿಯಿಂದ ಹುಟ್ಟಿದಂಥವನು ನನಗಿಂತ ಚಿಕ್ಕವನು. ಆದ್ದರಿಂದ ನಾನೇ ನಿನಗೆ ಪ್ರಭು. ನಿನ್ನನ್ನು ನೋಡಿ ನಾನೇನೂ ಎದ್ದು ಗೌರವ ನೀಡಬೇಕಾಗಿಲ್ಲ" ಎಂದು ಹೇಳಿದ. ಇದರಿಂದ ಬ್ರಹ್ಮ–ವಿಷ್ಣು ಮಧ್ಯೆ ವಾಗ್ವಿವಾದ ಬೆಳೆದು, ಪರಸ್ಪರ ಯುದ್ಧ ಮಾಡುವ ಹಂತಕ್ಕೆ ತಲುಪಿತು. ಬ್ರಹ್ಮಗಣಕ್ಕೂ, ವಿಷ್ಣುಗಣಕ್ಕೂ ಘೋರಯುದ್ಧ ಪ್ರಾರಂಭವಾಯಿತು. ಬ್ರಹ್ಮ–ವಿಷ್ಣು ಒಬ್ಬರ ಮೇಲೊಬ್ಬರು ಬಾಣಗಳನ್ನು ಹೂಡಿದರು. ವಿಷ್ಣು ಮಹೇಶ್ವರಾಸ್ತ್ರವನ್ನು ಪ್ರಯೋಗಿಸಿದ. ಬ್ರಹ್ಮ ಅದಕ್ಕೆ ಪ್ರತಿಯಾಗಿ ಪಾಶುಪತಾಸ್ತ್ರವನ್ನು ಪ್ರಯೋಗಿಸಿದ.

ಅಲ್ಲಿಯವರೆಗೂ ಯುದ್ಧವನ್ನು ನೋಡುತ್ತಾ ಆನಂದಿಸುತ್ತಿದ್ದ ದೇವತೆಗಳಿಗೆ, ಭಯಂಕರವಾದ ಮಹೇಶ್ವರಾಸ್ತ್ರ–ಪಾಶುಪತಾಸ್ತ್ರಗಳನ್ನು ನೋಡಿ ಹೆದರಿಕೆಯಾಯಿತು. ಎಲ್ಲರೂ ಸೇರಿ ಬ್ರಹ್ಮ ವಿಷ್ಣುವನ್ನು ಶಾಂತರಾಗುವಂತೆ ಪ್ರಾರ್ಥಿಸಿಕೊಂಡರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಕೈಲಾಸಕ್ಕೆ ಹೋಗಿ, ಧ್ಯಾನಮಗ್ನನಾಗಿದ್ದ ಶಿವನನ್ನು ಪ್ರಾರ್ಥಿಸಿದರು. ದೇವತೆಗಳ ಪ್ರಾರ್ಥನೆಯಿಂದ ಸುಪ್ರೀತ ನಾದ ಶಿವನು ನಿಧಾನವಾಗಿ ಕಣ್ಣು ತೆರೆದು ಒಂದು ಬಾರಿ ಎಲ್ಲರನ್ನೂ ನೋಡಿದನು. ದೇವತೆಗಳನ್ನು ಪ್ರಮಥ ಗಳನ್ನೂ ಹತ್ತಿರಕ್ಕೆ ಕರೆದು, ಶಾಂತವಾಗಿಯೇ ನುಡಿದನು–

"ಓ ದೇವತೆಗಳೇ! ಬ್ರಹ್ಮ–ವಿಷ್ಣು ನಡುವೆ ಯುದ್ಧ ನಡೆಯುತ್ತಿರುವುದು ನನಗೆ ಗೊತ್ತಿದೆ. ಆದರೂ ನಿಮ್ಮ ಆತಂಕವನ್ನು ನೋಡಿ ಪುನಃ ಕೇಳಿದೆ, ಅಷ್ಟೆ" ಎಂದ. ದೇವತೆಗಳಿಗೆ ಸ್ವಲ್ಪ ಉಸಿರಾಡುವಂತಾಯಿತು.

ಶಿವನು ಪ್ರಮಥಗಣ ನಾಯಕನನ್ನು ಕರೆದು, ಬ್ರಹ್ಮವಿಷ್ಣು ಯುದ್ಧ ಮಾಡುತ್ತಿರುವಲ್ಲಿಗೆ ಹೊರಡಲು ಏರ್ಪಾಡು ಮಾಡುವಂತೆ ಹೇಳಿದನು. ಪ್ರಯಾಣಕ್ಕೆ ಬೇಕಾದದ್ದೆಲ್ಲಾ ಕ್ಷಣಾರ್ಧದಲ್ಲೇ ತಯಾರಾಯಿತು. ನಾನಾ ವಾದ್ಯಗಳೊಂದಿಗೂ, ಅಲಂಕಾರ ಮಾಡಲ್ಪಟ್ಟ ರಥಗಳೊಂದಿಗೂ ಪ್ರಮಥಗಣವು ಪ್ರಯಾಣಕ್ಕೆ ಸಿದ್ಧವಾಗಿ ನಿಂತಿತು.

**ಶ್ಲೋಕ:**

ಪ್ರಣವಾಕಾರ ಮಾದ್ಯಂತಂ ಪಂಚ ಮಂಡಲ ನಿರ್ಮಿತಂ।
ಆರುರೋಹ ರಥಂ ಭದ್ರಂ ಅಂಬಿಕಾಪತಿ ರೀಶ್ವರಃ॥

(**ಅರ್ಥ:** ಪಾರ್ವತೀಪತಿಯಾದ ಪರಮಶಿವನು, ಪಂಚಮಂಡಲಗಳೊಂದಿಗೆ ನಿರ್ಮಿತವಾದ, ಓಂಕಾರಾ ಕಾರದಲ್ಲಿದ್ದ ರಥವನ್ನು ಅಲಂಕರಿಸಿದನು. ಇಂದ್ರಾದಿ ದೇವತೆಗಳು ಹಿಂಬಾಲಿಸಿದರು.)

ತುಸು ಹೊತ್ತಿನಲ್ಲೇ ಯುದ್ಧ ನಡೆಯುತ್ತಿದ್ದ ಸ್ಥಳವನ್ನು ತಲುಪಿದರು. ಯುದ್ಧವನ್ನು ಸ್ವಲ್ಪ ಹೊತ್ತು ನೋಡೋಣ ವೆನಿಸಿತು. ಶಿವ ವಾದ್ಯಗಳನ್ನು ನಿಲ್ಲಿಸುವಂತೆ ಆಜ್ಞಾಪಿಸಿ, ಆಕಾಶದಲ್ಲಿ ಅತಿರಹಸ್ಯ ಸ್ಥಳದಿಂದ ಯುದ್ಧವನ್ನು ವೀಕ್ಷಿಸುತ್ತಾ ನಿಂತ. ಯುದ್ಧ ಅತೀ ಭಯಂಕರವಾಗಿ ನಡೆಯುತ್ತಿತ್ತು. ಬ್ರಹ್ಮವಿಷ್ಣು ಇಬ್ಬರೂ ಈ ಹಿಂದೆ ತಾನೆ ಅಭಿಮಂತ್ರಿಸಿದ ಮಹೇಶ್ವರ–ಪಾಶುಪತಾಸ್ತ್ರಗಳನ್ನು ಪ್ರಯೋಗಿಸಿದ್ದರು. ಆ ಅಸ್ತ್ರಗಳಿಂದ ಘೋರವಾದ ಜ್ವಾಲೆಗಳು ಹೊರ ಹೊಮ್ಮುತ್ತಿದ್ದವು. ಆ ಶಾಖಕ್ಕೆ ಮೂರು ಲೋಕಗಳೂ ಸುಟ್ಟು ಹೋಗುವಂತಿತ್ತು. ದೇವತೆಗಳು, ಮುನಿಗಳು, ಮನುಷ್ಯರು, ಪ್ರಾಣಿಗಳು – ಎಲ್ಲರೂ ನಡುಗಿಹೋಗಿದ್ದರು. ಈ ಅಸ್ತ್ರಗಳಿಂದ ಸಂಭವಿಸಲಿದ್ದ ಅಕಾಲ ಪ್ರಳಯವನ್ನು ತಡೆಯಬೇಕೆಂದು ಸಂಕಲ್ಪಿಸಿದ ಶಿವನು, ಭೀಷಣವಾದ ಮಹಾಗ್ನಿ ಸ್ತಂಭರೂಪವಾಗಿ ಬ್ರಹ್ಮವಿಷ್ಣು ಅವರ ನಡುವೆ ಆವಿರ್ಭವಿಸಿದನು.

**ಶ್ಲೋಕ:**

ಮಹಾನಲಸ್ತಂಭ ಬಿಭೀಷಣಾಕೃತಿಃ
ಬಭೂವ ತನ್ಮಧ್ಯ ತಲೇಸ ನಿಷ್ಕಲ:

ಆ ಅಗ್ನಿಸ್ತಂಭವು ಹುಟ್ಟುತ್ತಲೇ, ಲೋಕಗಳನ್ನೇ ಭಸ್ಮ ಮಾಡಬಲ್ಲ ಆ ಎರಡು ಅಸ್ತ್ರಗಳು ಆ ಜ್ಯೋತಿಸ್ತಂಭದಲ್ಲಿ ಲೀನವಾಗಿ ಹೋದವು. ವಿಚಿತ್ರ ರೀತಿಯಲ್ಲಿ ಅಸ್ತ್ರಗಳನ್ನು ಶಾಂತಿಗೊಳಿಸಿದ ಅಗ್ನಿಸ್ತಂಭವನ್ನು ನೋಡಿದ ದೇವತೆಗಳು ಆಶ್ಚರ್ಯದಿಂದ ಒಬ್ಬರನ್ನೊಬ್ಬರು ಇದೇನಿದು ಏನಾಯಿತು ಎಂದು ಕೇಳಿಕೊಳ್ಳುತ್ತಿದ್ದರು. ವೀರಾಭಿಮಾನಿಗಳಾದ ಬ್ರಹ್ಮ ವಿಷ್ಣುಗಳೂ ಇದೇನಿದು ಇದ್ದಕ್ಕಿದ್ದಂತೆ ಇಷ್ಟೊಂದು ತೇಜಸ್ಸು ಹೇಗೆ ಹುಟ್ಟಿತು. ಸ್ತಂಭದಂತಿದೆಯಲ್ಲಾ! ಇದೇನೆಂದು ತಿಳಿದುಕೊಳ್ಳಬೇಕು" ಎಂದು ನಿಶ್ಚಯಿಸಿಕೊಂಡರು.

ವಿಷ್ಣು ವರಾಹ ಶರೀರವನ್ನು ಧರಿಸಿ, ಜ್ಯೋತಿಸ್ತಂಭದ ಬುಡವನ್ನು ಹುಡುಕಿಕೊಂಡು ಪಾತಾಳಕ್ಕೆ ಹೋದ. ಬ್ರಹ್ಮನು ಹಂಸರೂಪದಲ್ಲಿ, ಆ ಜ್ಯೋತಿಸ್ತಂಭದ ತುದಿಯನ್ನು ಹುಡು ಕುತ್ತಾ ಆಕಾಶಕ್ಕೆಗರಿದನು. ವಿಷ್ಣುವು ಕೆಳಗೆ ಹೋಗುತ್ತಲೇ ಇದ್ದ. ಬುಡ ಕಾಣಿಸಲೇ ಇಲ್ಲ. ಈ ಜ್ಯೋತಿಯ ಮೂಲವನ್ನು ಕಂಡುಹಿಡಿಯುವುದು ಅಸಾಧ್ಯವೆಂದು ಮನವರಿಕೆಯಾಗಿ ಹಿಂದಿರುಗಿದ. ಬ್ರಹ್ಮನು ಆಕಾಶದಲ್ಲಿ ಹಂಸ ರೂಪದಲ್ಲಿ ಹಾರುತ್ತಲೇ ಇದ್ದ. ಅವರಿಬ್ಬರನ್ನೂ ನೋಡಿ ಶಿವನು ನಕ್ಕ.

ಹಾಗೆ ನಗುವಾಗ ಅವನ ತಲೆ ಸ್ವಲ್ಪ ಕದಲಿ, ತಲೆಯ ಮೇಲೆ ಅಲಂಕಾರವಾಗಿ ಇದ್ದ ಕೇತಕೀ ಪುಷ್ಪವು ಜಾರಿತು. ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ಬ್ರಹ್ಮನಿಗೆ ಆಗತಾನೆ ಅರಳಿದ ಹೂವಿನ ಸುವಾಸನೆ ಮೂಗಿಗೆ ತಟ್ಟಿತು. ಸುತ್ತಲೂ ನೋಡಿದಾಗ ಆ ಕೇತಕೀ ಪುಷ್ಪ ಕಾಣಿಸಿತು. ಆಶ್ಚರ್ಯದಿಂದ, 'ಓ ಪುಷ್ಪವೇ! ನಿನ್ನನ್ನು ಯಾರು ಧರಿಸಿದ್ದರು? ನೀನು ಎಲ್ಲಿಂದ ಬೀಳುತ್ತಿದ್ದೀಯೆ?' ಎಂದು ಕೇಳಿದ.

ಆಗ ಆ ಪುಷ್ಪವು "ನಾನು ಈ ಸ್ತಂಭದ ತುದಿಯಿಂದ ಜಾರಿದೆ. ಎಷ್ಟೋ ವರ್ಷಗಳಿಂದ ಬೀಳುತ್ತಲೇ ಇದ್ದೇನೆ. ಇದರ ಬುಡ ಇನ್ನೂ ಸಿಕ್ಕಿಲ್ಲ. ಆದ್ದರಿಂದ ನನ್ನ ಮಾತು ಕೇಳು. ಇದರ ತುದಿಯನ್ನು ಕಂಡುಹಿಡಿಯಬೇಕೆಂಬ ಆಸೆಯನ್ನು ಬಿಟ್ಟುಬಿಡು" ಎಂದು ಹೇಳಿತು.

ಆಗ ಬ್ರಹ್ಮನು "ನಾನೂ ಸಹ ಈ ಸ್ತಂಭವನ್ನು ಅರ್ಚಿಸಬೇಕೆಂಬ ಉದ್ದೇಶದಿಂದಲೇ ಈ ಹಂಸರೂಪವನ್ನು ಧರಿಸಿ ರುವುದು. ಆದರೆ ಈಗ ನಿನ್ನ ಮಾತನ್ನು ಕೇಳಿದ ಮೇಲೆ ಈ ಸ್ತಂಭದ ತುದಿಯನ್ನು ತಲುಪುವುದು ಅಸಾಧ್ಯವೆಂದು ಅರ್ಥವಾಯಿತು. ಆದರೆ ಮಿತ್ರ! ನೀನು ನನಗೊಂದು ಸಹಾಯ ಮಾಡಬೇಕು. ಬ್ರಹ್ಮನು ಈ ಸ್ತಂಭದ ತುದಿಯನ್ನು ನೋಡಿದ್ದಾನೆ, ಇದಕ್ಕೆ ನಾನೇ ಸಾಕ್ಷಿ ಎಂದು ನೀನು ವಿಷ್ಣುವಿಗೆ ಹೇಳಬೇಕು" ಎಂದು ಬೇಡಿಕೊಂಡ.

ಕೇತಕಿ ಪುಷ್ಪವು 'ಹಾಗೇ ಆಗಲಿ' ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯಿತು. ಏನು ಮಾಯೆಯೋ ಏನೋ, ಅದು ನಿಜವೆಂದೇ ನಂಬಿಬಿಟ್ಟ ಮಹಾವಿಷ್ಣು, ಬ್ರಹ್ಮನಿಗೆ ನಮಸ್ಕರಿಸಿ, ಶೋಡಶೋಪಚಾರ ಪೂಜೆ ಮಾಡಿ ಗೌರವಿಸಿದ.

ಬ್ರಹ್ಮ ನುಡಿದ ಅಸತ್ಯವನ್ನು ಕೇಳಿ, ಶಿವನಿಗೆ ಕೋಪವುಂಟಾಯಿತು. ಆ ಅಗ್ನಿಸ್ತಂಭದಿಂದ ದಿವ್ಯಾಕಾರದಲ್ಲಿ ಆವಿರ್ಭವಿಸಿದನು. ಆ ದಿವ್ಯಾಕಾರವನ್ನು ನೋಡಿದ ವಿಷ್ಣುವಿಗೆ ಮಹದಾನಂದವಾಯಿತು. ಆನಂದದಿಂದ ಹೀಗೆ ಸ್ತುತಿಸಿದ.

॥ ಆದ್ಯಂತಹೀನ ವಪುಷಿ ತ್ವಯಿ ಮೋಹಬುದ್ಧಾ ।
ಭೂಯಾನ್ ವಿಮರ್ಶ ಇಹ ನಾವತಿ ಕಾಮನೋತ್ಥಃ॥
ಸತ್ವಂ ಪ್ರಸೀದ ಕರುಣಾಕರ ಕಶಲಂ ನೌ ।
ಮೃಷ್ಟಂ ಕ್ಷಮಸ್ವ ವಿಹಿತಂ ಭವತೈವ ಕೇಲ್ಯಾ ।

ಆದಿ–ಅಂತ್ಯಗಳಿಲ್ಲದ ನಿನ್ನ ಬಗ್ಗೆ ನಾವು ಅಜ್ಞಾನದಿಂದ, ಅಹಂಕಾರದಿಂದ ವಿಮರ್ಶೆ ಮಾಡಿದೆವು. ಕೃಪಾಳು! ನಮ್ಮ ಮೇಲೆ ದಯೆ ತೋರು. ನಮ್ಮ ಪಾಪಗಳು ನಿನ್ನ ದರ್ಶನ ದಿಂದ ನಿವಾರಣೆಯಾಗಿವೆ. ನಡೆದಿದ್ದೆಲ್ಲಾ ನಿನ್ನ ಲೀಲೆಯೇ ಸರಿ ಎಂದ ವಿಷ್ಣು. ಶಿವನು ಸಂತುಷ್ಟನಾದ, ವಿಷ್ಣುವನ್ನು ಕುರಿತು ಹೇಳಿದ.

ವತ್ಸ! ಪ್ರಸನ್ನೋಸ್ಮಿಹರೇ ಯತಸ್ತ್ವಂ
ಈಶತ್ವ ಮಿಚ್ಛನ್ನಪಿ ಸತ್ಯವಾಕ್ಯಮ್
ಬ್ರೂಯಾಸ್ತತಸ್ತೇ ಭವಿತಾ ಜನೇಷು
ಸಾಮ್ಯಂ ಮಯಾ ಸತ್ಕೃತಿ ರಪ್ಯಲಪ್ಸಿ

'ಶ್ರೀಹರಿ! ನೀನು ಪ್ರಭುವಾಗಬೇಕೆಂದೂ, ಬ್ರಹ್ಮನಿಗಿಂತಲೂ ದೊಡ್ಡವನಾಗಬೇಕೆಂದೂ ಕೋರುತ್ತಿರುವೆ. ಆದರೂ ಋಜುಮಾರ್ಗವನ್ನೇ ಅನುಸರಿಸಿದೆ. ಸತ್ಯವನ್ನೇ ಆಶ್ರಯಿಸಿದೆ. ಆದ್ದರಿಂದ ನೀನು ನನಗಿಂತಲೂ ದೊಡ್ಡವನು' ಎಂದು ಹೇಳಿದ ಶಿವ ತನಗಿಂತ ಉನ್ನತ ಸ್ಥಾನವನ್ನು ವಿಷ್ಣುವಿಗೆ ನೀಡಿದನು. ನಂತರ ಶಿವನಿಗೆ ಬ್ರಹ್ಮನ ಅಹಂಕಾರವನ್ನು ಅಡಗಿಸಬೇಕೆನಿಸಿತು. ಭೂಮಧ್ಯದಿಂದ ಭೈರವನೆಂಬ ಮಹಾಪುರುಷನನ್ನು ಸೃಷ್ಟಿಸಿದ. ಭೈರವನು ಶಿವನಿಗೆ ನಮಸ್ಕರಿಸಿ "ಪ್ರಭು! ನಾನು ಮಾಡಬೇಕಾಗಿರುವ ಕೆಲಸ ಏನೆಂದು ಅಪ್ಪಣೆ ಮಾಡಿ" ಎಂದು ಕೇಳಿದ.

ಆಗ ಶಿವನು, "ಭೈರವ! ಅಸತ್ಯ ನುಡಿದ ಈ ಬ್ರಹ್ಮನ ತಲೆಯನ್ನು ಕತ್ತರಿಸಿಹಾಕು" ಎಂದು ಆಜ್ಞಾಪಿಸಿದ. ಭೈರವನು ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಿ, ಉಳಿದ ನಾಲ್ಕನ್ನು ಕತ್ತರಿಸಲು ಹೊರಟಾಗ ಬ್ರಹ್ಮದೇವನು ತನ್ನ ತಪ್ಪನ್ನು ಮನ್ನಿಸುವಂತೆ ಪರಿಪರಿಯಾಗಿ ಬೇಡಿಕೊಂಡ.

ಬ್ರಹ್ಮನ ದಯನೀಯ ಸ್ಥಿತಿಯನ್ನು ನೋಡಿ ವಿಷ್ಣುವಿಗೆ ಮರುಕ ಉಂಟಾಯಿತು. "ದೇವಾ! ಹಿಂದೆ ನೀನೇ ಬ್ರಹ್ಮನಿಗೆ ಈಶ್ವರ ಲಕ್ಷಣಗಳನ್ನು ಉಂಟುಮಾಡಬೇಕೆಂದು ಐದು ತಲೆಗಳನ್ನು ಅನುಗ್ರಹಿಸಿದ್ದೆ. ಆದ್ದರಿಂದ ಬ್ರಹ್ಮನು ನನಗೊಬ್ಬನಿಗೇ ಅಲ್ಲ, ನಿನಗೂ ಪುತ್ರ ಸಮಾನನು. ಆದ್ದರಿಂದ ಬ್ರಹ್ಮ ಮಾಡಿದ ತಪ್ಪನ್ನು ಮನ್ನಿಸು" ಎಂದು ಶಿವನನ್ನು ಪ್ರಾರ್ಥಿಸಿದನು.

ವಿಷ್ಣು ಮಾಡಿದ ಪ್ರಾರ್ಥನೆಯಿಂದ ಶಾಂತನಾದ ಶಿವನು ಭೈರವನಿಗೆ ನಿಲ್ಲಿಸುವಂತೆ ಹೇಳಿದನು. ನಂತರ ಶಿವನು "ಓ ಬ್ರಹ್ಮ ನೀನು ಎಲ್ಲರಿಂತಲೂ ದೊಡ್ಡವನೆಂದು ಕರೆಸಿಕೊಳ್ಳಬೇಕೆಂದು ಘೋರವಾದ ಸುಳ್ಳನ್ನು ಹೇಳಿದೆ. ಆದ್ದರಿಂದ ಇವತ್ತಿನಿಂದ ನಿನಗೆ ಲೋಕದಲ್ಲಿ ಪೂಜೆ ಇಲ್ಲದೇ ಹೋಗಲಿ" ಎಂದು ಶಪಿಸಿದ. ಆಗ ಬ್ರಹ್ಮನು ಶಿವನನ್ನು ಹೀಗೆ ವಿಧವಾಗಿ ಪ್ರಾರ್ಥಿಸಿದ –

ಸ್ವಾಮಿನ್ ಪ್ರಸೀದಾದ್ಯ ಮಹಾವಿಭೂತೇ
ಮನ್ಯೇ ವರಂ ಮೇ ಶಿರಸಃ ಪ್ರಮೋಕ್ಷಂ।



ನಮಸ್ತುಭ್ಯಂ ಭಗವತೇ ಬಂಧವೇ ವಿಶ್ವಯೋನಯೇ
ಸಹಿಷ್ಣವೇ ಚ ದೋಷಣಾಂ ಶಂಭವೇ ಶೈಲಧನ್ವಿನೇ ।

"ಮಹೈಶ್ವರ್ಯ ಸಂಪನ್ನನಾದ ಓ ದೇವ! ನನ್ನನ್ನು ಅನುಗ್ರಹಿಸು. ಈ ಶಿರಚ್ಛೇದನವನ್ನು ನಾನು ವರವೆಂದೇ ಭಾವಿಸುತ್ತೇನೆ. ವಿಶ್ವಕ್ಕೆ ಕಾರಣರೂಪನಾಗಿ, ಎಲ್ಲರ ತಪ್ಪುಗಳನ್ನೂ ಕ್ಷಮಿಸುತ್ತಾ ಮೇರು ಪರ್ವತವನ್ನೇ ಧನುಸ್ಸಾಗಿ ಉಳ್ಳ ಓ ದೇವಾ! ನಿನಗೆ ನಮಸ್ಕಾರಗಳು" ಎಂದು ಬ್ರಹ್ಮ ವಿನಮ್ರನಾಗಿ ಹೇಳಿದ.

ಶಿವನು ಪ್ರಸನ್ನನಾಗಿ, "ಬ್ರಹ್ಮ! ನನಗೆ ಶಿಕ್ಷೆಯಾಯಿತು ಎಂಬ ಚಿಂತೆಯನ್ನು ಬಿಟ್ಟು ಲೋಕಭಾರವನ್ನು ವಹಿಸಿಕೋ" ಎಂದು ಈ ರೀತಿ ವರ ನೀಡಿದ.

ವರಂ ದದಾಮಿ ತೇ ತತ್ರ ಗೃಹಾಣ ದುರ್ಲಭಂ ಪರಂ।
ವೈತಾನಿಕೇಷು ಗುಹ್ಯೇಷು ಯಜ್ಞೇಷು ಚ ಭವಾನ್ ಗುರುಃ॥
ನಿಷ್ಫಲಸ್ತ್ವಾ ದೃತೇ ಯಜ್ಞಃ ಸಾಂಗಶ್ಚ ಸಹ ದಕ್ಷಿಣ ।

ಅರ್ಥ : ಬ್ರಹ್ಮ! ನಾನು ನಿನಗೆ ಒಳ್ಳೆಯ ವರಗಳನ್ನು ಕೊಡುತ್ತಿದ್ದೇನೆ. ನೀನು ಇಂದಿನಿಂದ ಯಜ್ಞಗಳಲ್ಲೂ ಗುಹ್ಯವಾದ ಸೂಕ್ತಗಳಲ್ಲೂ ಗುರುಸ್ಥಾನದಲ್ಲಿ ಇರುವೆ. ನೀನಿಲ್ಲದ ಯಜ್ಞಗಳು, – ಅದು ಎಷ್ಟು ವೈಭವದಿಂದಲೇ ನಡೆದಿರಲಿ, ಎಷ್ಟೇ ದಕ್ಷಿಣಾದಿಗಳನ್ನು ಕೊಟ್ಟಿರಲಿ, ಅದು ನಿಷ್ಫಲವೇ ಆಗುತ್ತದೆ. (ಅಂದಿನಿಂದ ಇಂದಿನವರೆಗು ಎಲ್ಲಾ ಯಜ್ಞಗಳಲ್ಲಿ ಬ್ರಹ್ಮಸ್ಥಾನವು ಬಹಳ ಮುಖ್ಯವಾದುದಾಗಿದೆ.)

ನಂತರ ಶಿವನಿಗೆ ಕೇತಕೀ ಪುಷ್ಪ ಜ್ಞಾಪಕಕ್ಕೆ ಬಂದಿತು. ತಡೆಯಲಾರದ ಕೋಪದಿಂದ? "ಎಲೈ ಕೇತಕೀ ಪುಷ್ಪವೇ! ನೀನು ದೂರ ಹೋಗು! ಇವತ್ತಿನಿಂದ ನನ್ನ ಪೂಜೆಗೆ ನಿನ್ನನ್ನು ಉಪಯೋಗಿಸುವಂತಿಲ್ಲ" ಎಂದು ಶಪಿಸಿದ. ಆಗ ಆ ಕೇತಕೀ ಪುಷ್ಪವು "ಹೇ ಪ್ರಭು! ಇವತ್ತಿನಿಂದ ನನ್ನ ಜನ್ಮವು ನಿಷ್ಫಲವಾದಂತೆಯೇ. ಓ ತಂದೆ! ನನ್ನ ದೋಷವನ್ನು ಮನ್ನಿಸು. ನನ್ನ ಜನ್ಮವನ್ನು ಸಫಲಗೊಳಿಸು. ತಿಳಿದು, ತಿಳಿಯದೇ ಮಾಡಿದ ಪಾಪಗಳು ಕೇವಲ ನಿನ್ನ ಸ್ಮರಣೆಯಿಂದಲೇ ನಿವಾರಣೆಯಾಗುತ್ತವೆ. ಹಾಗಿರುವಾಗ ನಿನ್ನ ದರ್ಶನ ಮಾಡಿದ ನನಗೆ ದೋಷಗಳು ಹೇಗೆ ಅಂಟಿಯಾವು?" ಎಂದು ಪ್ರಾರ್ಥಿಸುತ್ತಾ ಹಟ ಹಿಡಿಯಿತು.

ಆಗ ಶಿವನು "ಎಲೈ ಕೇತಕವೇ! ನಾನೇ ಶಪಿಸಿರುವುದರಿಂದ ಪುನಃ ನಿನ್ನನೇ ಧರಿಸುವಂತಿಲ್ಲ. ಆದರೆ ನನಗೆ ಸಮಾನರಾದ ವಿಷ್ಣುವೇ ಮೊದಲಾದ ದೇವತೆಗಳು ನಿನ್ನನ್ನು ಧರಿಸುತ್ತಾರೆ. ನೀನು ನನಗೆ ವಿತಾನದಂತೆ ಮೇಲ್ಭಾಗದಲ್ಲಿ ಇರು" ಎಂದು ಅನುಗ್ರಹಿಸಿದ. ನಂತರ ಬ್ರಹ್ಮವಿಷ್ಣುಗಳು ವಿಸ್ತಾರವಾಗಿ ಶಿವಪೂಜೆ ಮಾಡಿದರು. ಆ ಪೂಜೆಯಿಂದ ಸಂತುಷ್ಟನಾದ ಶಿವನು ಹೀಗೆ ನುಡಿದನು–

ತುಷ್ಟೋಹ ಮದ್ಯವಾಂ ವತ್ಸೌಪೂಜಯಾಸ್ಮಿನ್ ಮಹಾದಿನೇ।
ದಿನಮೇತತ್ತತಃ ಪುಣ್ಯಂ ಭವಿಷ್ಯತಿ ಮಹತ್ತರಮ್।
ಶಿವರಾತ್ರಿ ರಿತಿ ಖ್ಯಾತಾ ತಿಥಿರೇಷು ಮಮ ಪ್ರಿಯಾ।

**ಅರ್ಥ:** ಈ ಮಹಾಪರ್ವದಿನದಂದು ನಿಮ್ಮ ಪೂಜೆಯಿಂದ ನಾನು ಪ್ರಸನ್ನನಾಗಿದ್ದೇನೆ. ಆದ್ದರಿಂದ ಈ ತಿಥಿಯು ಪರಮ ಪವಿತ್ರವಾದದ್ದು, ಶ್ರೇಷ್ಠವಾದದ್ದು. ಈ ತಿಥಿಗೆ "ಶಿವರಾತ್ರಿ" ಎಂದು ಖ್ಯಾತಿ ಬರುತ್ತದೆ. ಈ ದಿನ ಯಾರು ನನ್ನನ್ನು ಲಿಂಗರೂಪದಲ್ಲೋ, ಪ್ರತಿಮಾರೂಪದಲ್ಲೋ ಪೂಜಿಸುತ್ತಾರೋ, ನಾನು ಅವರನ್ನು ಅನುಗ್ರಹಿಸುತ್ತೇನೆ. ಮಾರ್ಗಶಿರ ಮಾಸದಲ್ಲಿ ಆರ್ದ್ರಾನಕ್ಷತ್ರಯುಕ್ತವಾದ ತಿಥಿ ನನಗೆ ಬಹಳ ಪ್ರಿಯವಾದದ್ದು. ಈ ದಿನ ಈ ರಣರಂಗದಲ್ಲಿ ನಾನು ಲಿಂಗರೂಪದಲ್ಲಿ ಆವಿರ್ಭವಿಸಿದ್ದೇನೆ. ಆದ್ದರಿಂದ ಈ ಪ್ರದೇಶವು 'ಲಿಂಗಸ್ಥಾನ'ವೆಂದು ಪ್ರಸಿದ್ಧವಾಗುತ್ತದೆ. ಶಿವರಾತ್ರಿ ನನಗೆ ಬಹಳ ಪ್ರಿಯವಾದುದು.

ಅನಾದ್ಯಂತ ಮಿದಂ ಸ್ತಂಭಂ ಅಣುಮಾತ್ರಂ ಭವಿಷ್ಯತಿ।
ದರ್ಶನಾರ್ಥಂ ಹಿ ಜಗತಾಂ ಪೂಜನಾರ್ಥಂ ಹಿ ಪುತ್ರಕೌ।

**ಅರ್ಥ:** ಭಕ್ತರು ದರ್ಶಿಸಿ ಪೂಜಿಸಲೆಂದು ಆದ್ಯಂತ ರಹಿತ ವಾದ ಈ ತೇಜೋಮಯ ಲಿಂಗವು ಚಿಕ್ಕದಾಗುತ್ತದೆ. ಈ ಪ್ರದೇಶಕ್ಕೆ "ಅರುಣಾಚಲ" ವೆಂಬ ಹೆಸರೂ ಬರುತ್ತದೆ. ಯಾರು ಶಿವರಾತ್ರಿಯಂದು ಲಿಂಗಾರಾಧನೆ ಮಾಡುವರೋ, ಅವರಿಗೆ ಸಮಸ್ತ ಸೌಖ್ಯಗಳನ್ನೂ ನಾನು ಅನುಗ್ರಹಿಸುತ್ತೇನೆ" ಎಂದು ಹೇಳುತ್ತಾ, ಯುದ್ಧದಲ್ಲಿ ಮರಣ ಸಿದ ಬ್ರಹ್ಮಗಣ ವನ್ನೂ ಮತ್ತು ವಿಷ್ಣುಗಣವನ್ನೂ ಬದುಕಿಸಿ, ಅವರಿಗೆ ಶಿವತತ್ವವನ್ನು ಉಪದೇಶಿಸಿದ.

ನಂತರ ಬ್ರಹ್ಮ ವಿಷ್ಣುಗಳು "ಸರ್ಗಾದಿ ಪಂಚಕೃತ್ಯಸ್ಯ ಲಕ್ಷಣಂ ಬ್ರೂಹಿ ನೌ ಪ್ರಭೋ" ಎಂದು ಉಚ್ಚರಿಸಿದರು. ಅಂದರೆ, 'ದೇವಾ! ಸೃಷ್ಟಿಯೇ ಮೊದಲಾದ ಪಂಚಕೃತ್ಯ ಲಕ್ಷಣಗಳನ್ನು ಕುರಿತು ವಿವರಿಸು' ಎಂದು ಪ್ರಾರ್ಥಿಸಿದರು. ಆಗ ಶಿವನು ಹೀಗೆ ಹೇಳಿದನು:–

ಸೃಷ್ಟಿ ಸ್ಥಿತಿಶ್ಚ ಸಂಹಾರಃ ತಿರೋಭಾವೋ ಪ್ಯನುಗ್ರಹಃ।
ಪಂಚೈವ ಮೇ ಜಗತ್ಕೃತ್ಯಂ ನಿತ್ಯಸಿದ್ಧ ಮಜಾಚ್ಯುತೌ।

"ಓ ಬ್ರಹ್ಮ! ಓ ಶ್ರೀಹರಿ! ಸೃಷ್ಟಿ, ಸ್ಥಿತಿ, ಲಯ, ತಿರೋಭವ, ಅನುಗ್ರಹ– ಎಂಬ ಈ ಐದು ನನಗೆ ಸಹಜ ಸಿದ್ಧ ವಾದವುಗಳು. 1.ಸಂಸಾರದ ಆರಂಭವೇ ಸೃಷ್ಟಿ, ಅಥವಾ ಸರ್ಗ 2. ಸಂಸಾರದ ವೃದ್ಧಿಯೇ (ಅಥವಾ ರಕ್ಷಣೆಯೇ) ಸ್ಥಿತಿ 3.ಸಂಸಾರದ ನಾಶವೇ ಸಂಹಾರ ಅಥವಾಲಯ 4. ಸಂಸಾರದಿಂದ ಉದ್ಧರಿಸುವುದೇ ತಿರೋಭಾವ 5. ಮುಕ್ತಿಯನ್ನು ಅನುಗ್ರಹಿಸುವುದೇ ಅನುಗ್ರಹ" ಎನ್ನುತ್ತಾನೆ.

ತದಿದಂ ಪಂಚಭೂತೇಷು ದೃಶ್ಯತೇ ಮಾಮಕೈರ್ಜ್ಞೈಃ।
ಸೃಷ್ಟಿರ್ಭೂಮೌ ಸ್ಥಿತಿಸ್ ತೋಯೇ ಸಂಹಾರಃ ಪಾವಕೇ ತಥಾ।
ತಿರೋಭಾವೋಗ್ನಿ ನಿಲೇ ತದ್ವತ್ ಅನುಗ್ರಹ ಇಹಾಂಬರೇ।

**ಅರ್ಥ** : ಈ ಪಂಚಕೃತ್ಯ ಸಮೂಹವು ನನ್ನನ್ನು ಅರಿಯ ಬೇಕೆಂದು ಪ್ರಯತ್ನಿಸುವ ಜೀವಿಗಳಿಗೆ ಪಂಚಭೂತಗಳಲ್ಲಿ ಕಾಣಿಸುತ್ತದೆ. ಭೂಮಿಯಲ್ಲಿ ಸೃಷ್ಟಿ, ಜಲದಲ್ಲಿ ಸ್ಥಿತಿ, ಅಗ್ನಿಯಲ್ಲಿ ಸಂಹಾರ, ವಾಯುವಿನಲ್ಲಿ ತಿರೋಭಾವ, ಆಕಾಶದಲ್ಲಿ ಅನುಗ್ರಹಗಳು ಕಾಣುತ್ತದೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬುದಾಗಿ ಕರೆಯಲ್ಪಡುವ ನನ್ನ ಪಂಚಮುಖಗಳು ಈ ಪಂಚಕೃತ್ಯಗಳನ್ನು ನೆರವೇರಿಸುತ್ತಿರುತ್ತವೆ. ನನ್ನ ರೂಪ ರಹಸ್ಯವು ಬಹಳ ಗಂಭೀರವಾದುದು. ಅದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ ಪ್ರಣ ವಾಕ್ಷರ ಜಪದಿಂದ ಮಾತ್ರ ನನ್ನನ್ನು ತಿಳಿದುಕೊಳ್ಳಲು ಸಾಧ್ಯ. ಎಲ್ಲ ಮಂಗಳವನ್ನೂ ಕೊಡುವಂತಹ ಓಂಕಾರ ವನ್ನು ನಾನು ಹಿಂದೆಯೇ ಹೀಗೆ ಉಪದೇಶಿಸಿದ್ದೇನೆ.

ಓಂಕಾರೋ ಮನ್ಮುಖಾಜ್ಜಜ್ಞೇ
ಪ್ರಥಮಂ ಮತ್ಪ್ರಬೋಧಕಃ ?
ವಾಚಕೋಯ ಮಹಂ ವಾಚ್ಯೋ
ಮಂತ್ರೋಯಂ ಹಿ ಮದಾತ್ಮಕಃ?
ತದನು ಸ್ಮರಣಂ ನಿತ್ಯಂ ಮಮಾನು ಸ್ಮರಣಂ ಭವೇತ್?

**ಅರ್ಥ** : ನನ್ನನ್ನು ತಿಳಿಸುವ ಓಂಕಾರವು ನನ್ನ ಮುಖದಿಂದಲೇ ಜನಿಸಿರುವಂಥದ್ದು. ಇದು ನನ್ನ ವಾಚಕ (ನನ್ನನ್ನು ತಿಳಿಸುವಂಥದ್ದು). ನಾನು ಅದಕ್ಕೆ ವಾಚ್ಯನು (ನಾನು ಓಂಕಾರದಿಂದ ತಿಳಿಯಲ್ಪಡುತ್ತೇನೆ.) ಓಂಕಾರ ಮಾತ್ರವೇ ನನ್ನ ಸ್ವರೂಪ, ಓಂಕಾರವನ್ನು ನಿತ್ಯವೂ ಸ್ಮರಿಸಿದರೆ ನನ್ನನ್ನು ಸರಿಸಿದಂತೆಯೇ ಆಗುತ್ತದೆ.

ಆಕಾರ ಉತ್ತರಾತ್ಪೂರ್ವಂ ಉಕಾರಃ ಪಶ್ಚಿಮಾನನಾತ್।
ಮಕಾರೋ ದಕ್ಷಿಣಮುಖಾತ್ ಬಿಂದುಃ ಪ್ರಾಙ್ಮುಖತಸ್ತಥಾ।
ನಾದೋ ಮಧ್ಯಮುಖಾದೇವಂ ಪಂಚಧಾಸೌ ವಿಜೃಂಭಿತಃ।
ಏಕೀ ಭೂತಃ ಪುನಸ್ತದ್ವತ್ ಓಮಿತೇ ಕಾಕ್ಷರೋ ಭವತ್।

**ಅರ್ಥ:** ಓ ಬ್ರಹ್ಮ ವಿಷ್ಣುಗಳಿರಾ! ಮೊದಲು ನನ್ನ ಉತ್ತರಮುಖದಿಂದ ಅಕಾರ ಹುಟ್ಟಿತು. ಪಶ್ಚಿಮ ಮುಖದಿಂದ ಉಕಾರ ಹುಟ್ಟಿತು, ದಕ್ಷಿಣ ಮುಖ ದಿಂದ ಮಕಾರ ಹುಟ್ಟಿತು. ಪ್ರಾಙ್ಮುಖದಿಂದ (ಪೂರ್ವಮುಖ ದಿಂದ) ಬಿಂದು ಏರ್ಪಟ್ಟಿತು. ಮಧ್ಯಮುಖದಿಂದ ನಾದ ಹುಟ್ಟಿತು. ಈ ಐದೂ ಒಂದಾಗಿ "ಓಮ್" ಎಂಬ ಏಕಾಕ್ಷರ ರೂಪ ಉಂಟಾಯಿತು. ಆದ್ದರಿಂದ ಓಂಕಾರವೇ ನನ್ನ ಸ್ವರೂಪ. ಓಂಕಾರವೇ ನನ್ನ ಮಂತ್ರ..

ಓಂಕಾರವು ನಾನಾ ರೂಪಾತ್ಮಕವಾಗಿದೆ. ಓಂಕಾರ ದಿಂದ ವೇದಗಳು, ಭೂತಗಳು ಎಂಬ ಎರಡು ಕವಲುಗಳು ಹುಟ್ಟಿದವು. ಶಿವಶಕ್ತಿಗಳನ್ನು, ಪ್ರಕೃತಿ ಪುರುಷರನ್ನು ಬೋಧಿಸುವುದು ಈ ಓಂಕಾರವೇ. ಓಂಕಾರ ಮಂತ್ರದಿಂದ ಪಂಚಾಕ್ಷರ ಮಂತ್ರವು ಹುಟ್ಟಿತು.

ಅನೇನ ಮಂತ್ರಕಂದೇನ ಭೋಗೋ ಮೋಕ್ಷಶ್ಚಸಿದ್ಧ್ಯತಿ।
ಸಂಕಲಾ ಯಂತ್ರರಾಜಾನ:
ಸಾಕ್ಷಾದ್‌ಭೋಗ ಪ್ರದಾಶ್ಶುಭಾಃ ।

**ಅರ್ಥ:** ಬೇರೆ ಇತರ ಮಂತ್ರಗಳು ಇಹದಲ್ಲಿ ಭೋಗ ಭಾಗ್ಯಗಳನ್ನು ನೀಡುತ್ತವೆ. ಓಂಕಾರವು ಭೋಗವನ್ನೂ ಮೋಕ್ಷವನ್ನೂ ಕೊಡುತ್ತದೆ ಎಂದು ಪರಶಿವನು ಬ್ರಹ್ಮವಿಷ್ಣುಗಳಿಗೆ ಉಪದೇಶಿಸುತ್ತಿರುವ ನೆಪದಲ್ಲಿ, ಸಮಸ್ತ ಸೃಷ್ಟಿಗೂ ಶಿವರಾತ್ರಿ ಮಹಾತ್ಮೆಯನ್ನೂ, ಓಂಕಾರ ಮಹಿಮೆಯನ್ನೂ ವಿವರವಾಗಿ ಉಪದೇಶಿಸಿದನು. ನಂತರ ಬ್ರಹ್ಮ ವಿಷ್ಣುಗಳು ಶಿವರಾತ್ರಿಯಂದು ಶಿವನನ್ನು ಅರ್ಚಿಸಿ, ಓಂಕಾರವನ್ನು ಜಪಿಸಿ, ಆನಂದದಿಂದ ಶಿವಕೀರ್ತನೆ ಮಾಡಿದರು.

ನಮೋ ನಿಷ್ಕಲ ರೂಪಾಯ ನಮೋ ನಿಷ್ಕಲ ತೇಜಸೇ।
ನ ಮಸ್ಸಕಲ ನಾಥಾಯ ನಮಸ್ತೇ ಸಕಲಾತ್ಮನೇ ।
ನಮಃ ಪ್ರಣವವಾಚ್ಯಾಯ ನಮಃ ಪ್ರಣವ ಲಿಂಗಿನೇ।
ನಮಃ ಸೃಷ್ಟ್ಯಾದಿ ಕರ್ತ್ರೇ ಚ ನಮಃ ಪಂಚಮುಖಾಯತೇ।
ಪಂಚಬ್ರಹ್ಮಸ್ವರೂಪಾಯ ಪಂಚ ಕೃತ್ಯಾಯ ತೇ ನಮಃ।
ಆತ್ಮನೇ ಬ್ರಹ್ಮಣೇ ತುಭ್ಯಂ ಅನಂತಗುಣ ಶಕ್ತಯೇ।
ಸಕಲಾಕಲ ರೂಪಾಯ ಶಂಭವೇ ಗುರವೇ ನಮಃ।

**ಅರ್ಥ:** ನಿರ್ಗುಣ ರೂಪನೂ, ನಿರ್ಗುಣ ತೇಜಸ್ಸುಳ್ಳವನೂ, ಸಕಲ ಜಗಕ್ಕೂ ಅಧಿಪತಿಯೂ, ಸರ್ವಮ ಯನೂ, ಓಂಕಾರವಾಚ್ಯನೂ, ಓಂಕಾರವೇ ಚಿಹ್ನೆಯಾಗಿ ಉಳ್ಳವನೂ, ಸೃಷ್ಟಿ ಮೊದಲಾದವುಗಳಿಗೆ ಕರ್ತನೂ, ಪಂಚಮುಖನೂ, ಪಂಚಬ್ರಹ್ಮ ಸ್ವರೂಪನೂ, ಪಂಚಕೃತ್ಯಗಳನ್ನು ಮಾಡುವವನೂ, ಪರಮಾತ್ಮನೂ, ಪರ ಬ್ರಹ್ಮನೂ, ಅನಂತಗುಣಗಳನ್ನು ಅನಂತಶಕ್ತಿ ಗಳನ್ನೂ ಹೊಂದಿರುವವನೂ, ಸಗುಣ ನಿರ್ಗುಣ ರೂಪನೂ, ಶುಭಗಳನ್ನು ಉಂಟುಮಾಡುವವನೂ, ಸದ್ಗುರು ಸ್ವರೂಪನೂ ಆದ ಸಚ್ಚಿದಾನಂದೇಶ್ವರಾ! ನಿನಗೆ ನಮಸ್ಕಾರಗಳು ಎಂದು ಸ್ತುತಿಸಿದರು. ಹೀಗೆ ವೇದವ್ಯಾಸರ ಶಿವಪುರಾಣದಲ್ಲಿ ಶಿವರಾತ್ರಿ ಮಹಿಮೆಯನ್ನು, ಓಂಕಾರ ಮಹಿಮೆಯನ್ನೂ ತಿಳಿಸುವ ಘಟ್ಟವಾಗಿದೆ.

ಜಯ ಗುರುದತ್ತ

ಮೈಸೂರು ಮಿತ್ರ
ಶನಿವಾರ 18 ಫೆಬ್ರವರಿ 2023



### ಅರಮನೆ ಆವರಣದ ತ್ರಿನೇಶ್ವರಸ್ವಾಮಿ, ನಂಜನಗೂಡಿನ ನಂಜುಂಡೇಶ್ವರ, ಮಲೆಮಹದೇಶ್ವರಬೆಟ್ಟದ ಮಹದೇಶ್ವರನಿಗೆ

# ಚಿನ್ನದ ಕೊಳಗ ಅಲಂಕಾರ ವಿಶೇಷ

■ ಎಂ.ಟಿ.ಯೋಗೇಶ್ ಕುಮಾರ್

ಹಿಂದೂ ಸಂಪ್ರದಾಯದಲ್ಲಿ ಶಿವರಾತ್ರಿಗೆ ವಿಶೇಷ ಮಹತ್ವವಿದೆ. ಅಖಂಡ ಶಿವಾರಾಧನೆಯ ದಿನವಾದ ಶಿವರಾತ್ರಿಯಂದು ಎಲ್ಲಾ ಶಿವನ ದೇವಾಲಯಗಳಲ್ಲಿ ವಿಶೇಷ ಅಲಂಕಾರವಿರುತ್ತದೆ. ಮೈಸೂರು ಅರಮನೆ ಆವರಣದ ತ್ರಿನೇಶ್ವರಸ್ವಾಮಿ ದೇವಾಲಯ ಹಾಗೂ ಮಲೆ ಮಹದೇಶ್ವರ ಬೆಟ್ಟದ ಮಹದೇಶ್ವರ ಸ್ವಾಮಿಗೆ ಅಲಂಕರಿಸುವ ರಾಜಮನೆತನ ಕೊಡುಗೆ ನೀಡಿರುವಂತಹ ಚಿನ್ನದ ಕೊಳಗ ಭಕ್ತಿಪೂರ್ವಕ ಹಾಗೂ ವಿಶೇಷ ಆಕರ್ಷಣೀಯ. ವರ್ಷಕ್ಕೆ ಮೂರು ಬಾರಿ ನಂಜನಗೂಡು ನಂಜುಂಡೇಶ್ವರನಿಗೂ ಚಿನ್ನದ ಕೊಳಗ ಅಲಂಕರಿಸಿ, ಪೂಜಿಸುವ ಸಂಪ್ರದಾಯವಿದೆ.

ಮೈಸೂರು ಅರಮನೆ ಆವರಣದ ತ್ರಿನೇಶ್ವರಸ್ವಾಮಿಗೆ ಅಲಂಕರಿಸುವ ಚಿನ್ನದ ಕೊಳಗ ವರ್ಷಕ್ಕೆ ಒಂದೇ ದಿನ ಮಾತ್ರ ಲಿಂಗಕ್ಕೆ ಧಾರಣೆ ಮಾಡುವುದು ವಿಶೇಷ. ಮಲೆ ಮಹದೇಶ್ವರಬೆಟ್ಟದ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಪ್ರತಿದಿನ ಅಭಿಷೇಕ ನೆರವೇರಿದ ಬಳಿಕ ಲಿಂಗಕ್ಕೆ ಚಿನ್ನದ ಕೊಳಗ ಧಾರಣೆ ಮಾಡಲಾಗುತ್ತದೆ. ನಂಜನಗೂಡಿನ ನಂಜುಂಡೇಶ್ವರ(ಶ್ರೀಕಂಠೇಶ್ವರ)ನ ಲಿಂಗಕ್ಕೆ ಚಿಕ್ಕಜಾತ್ರೆ, ದೊಡ್ಡಜಾತ್ರೆ ಹಾಗೂ ಗಿರಿಜಾ ಕಲ್ಯಾಣದ ದಿನದಂದು ಚಿನ್ನದ ಕೊಳಗ ಅಲಂಕರಿಸಲಾಗುತ್ತದೆ. ಈ ಮೂರೂ ದೇವಾಲಯಗಳಲ್ಲಿ ಧರಿಸುವ ಚಿನ್ನದ ಕೊಳಗಗಳು ಮೈಸೂರು ರಾಜವಂಶಸ್ಥರು ಕೊಡುಗೆ ನೀಡಿದ್ದರು.



ಅರಮನೆ ಆವರಣದ ಶ್ರೀ ತ್ರಿನೇಶ್ವರಸ್ವಾಮಿ



ನಂಜನಗೂಡು ಶ್ರೀ ನಂಜುಂಡೇಶ್ವರ



ಮಹದೇಶ್ವರಬೆಟ್ಟದ ಶ್ರೀ ಮಹದೇಶ್ವರ

#### ವರ್ಷಕ್ಕೆ ಒಂದು ದಿನ ಕೊಳಗ ಧಾರಣೆ

ಮೈಸೂರು ಅರಮನೆ ಆವರಣದ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿಯಂದು ವಿಶೇಷ ಪೂಜೆ ನೆರವೇರುತ್ತದೆ. ಈ ವೇಳೆ ಚಿನ್ನದ ಕೊಳಗ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಮೈಸೂರು ಸಂಸ್ಥಾನದ ಜಯ ಚಾಮರಾಜೇಂದ್ರ ಒಡೆಯರ್, 11 ಕೆಜಿ ತೂಕದ ಚಿನ್ನದ ಕೊಳಗ(ಮುಖವಾಡ)ವನ್ನು 1954ರಲ್ಲಿ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಅರ್ಪಿಸಿದ್ದರು. ಅಂದಿನಿಂದ ಪ್ರತಿ ಶಿವರಾತ್ರಿ ದಿನದಂದು ತ್ರಿನೇಶ್ವರಸ್ವಾಮಿ ಮೂಲ ಮೂರ್ತಿಗೆ(ಲಿಂಗ) ಧರಿಸಿ ವಿಶೇಷ ಪೂಜೆ ಸಲ್ಲಿಸುವ ಪರಂಪರೆ ಅನುಸರಿಸಲಾಗುತ್ತಿದೆ. ಈ ಕೊಳಗವನ್ನು ವರ್ಷವಿಡೀ ಬಿಗಿಭದ್ರತೆಯಲ್ಲಿ ಖಜಾನೆಯಲ್ಲಿ ಇರಿಸಲಾಗುತ್ತದೆ. ಶಿವರಾತ್ರಿ ಮುನ್ನಾ ದಿನ(ಫೆ.17ರಂದು ಬೆಳಗ್ಗೆ 11.30ಕ್ಕೆ) ಬಿಗಿ ಭದ್ರತೆಯಲ್ಲಿ ಮುಜರಾಯಿ ತಹಶೀಲ್ದಾರ್ ಹಾಗೂ ಚಾಮುಂಡಿಬೆಟ್ಟದ ಸಮೂಹ ದೇವಾಲಯಗಳ ಆಡಳಿತಾಧಿಕಾರಿ ಸಮ್ಮುಖದಲ್ಲಿ ಖಜಾನೆಯಿಂದ ಅರಮನೆ ಆವರಣದಲ್ಲಿನ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ತರಲಾಗುತ್ತದೆ.

ಶಿವರಾತ್ರಿ ದಿನ(ಫೆ.18) ಮುಂಜಾನೆ 4ರಿಂದ 6 ಗಂಟೆಯೊಳಗೆ ಚಿನ್ನದ ಕೊಳಗ, ಹೂವಿನ ಅಲಂಕಾರ ಮಾಡಿ, ರಾಜವಂಶಸ್ಥರ ಹೆಸರಲ್ಲಿ ಮೊದಲ ಪೂಜೆ ಸಲ್ಲಿಸಲಾಗುತ್ತದೆ. ನಂತರ ಬೆಳಗ್ಗೆ 6 ಗಂಟೆಯಿಂದ ಭಕ್ತರ ದರ್ಶನಕ್ಕೆ ಪ್ರವೇಶಾವಕಾಶ ನೀಡಲಾಗುತ್ತದೆ. ಅಂದು ಮಧ್ಯರಾತ್ರಿ 12 ಗಂಟೆವರೆಗೂ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಮರುದಿನ ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಕೊಳಗವನ್ನು ಬಿಗಿ ಭದ್ರತೆಯಲ್ಲಿ ಮತ್ತೆ ಖಜಾನೆಯಲ್ಲಿ ಭದ್ರವಾಗಿರಿಸಲಾಗುತ್ತದೆ.

#### ಕೊಳಗದಲ್ಲಿ ಏನೇನಿದೆ

ಚಿನ್ನದ ಜಟಾಮುಕುಟ, ಕರ್ಣ ಕುಂಡಲ, ತಾಟಂಕ, ಎರಡು ಲೋಲಕ, ಎರಡು ಕೆಂಪಿನ ಹರಳಿನ ಓಲೆಗಳು, ಹಣೆಯಲ್ಲಿ ಕೆಂಪು ಕಲ್ಲಿನ ತಿಲಕ, ಸಣ್ಣ ಮೂಗುತಿ ಇರುವ ಒಂದು ಚಿನ್ನದ ಗಂಗೆ ಹೊಂದಿದೆ. ಒಟ್ಟಾರೆಯಾಗಿ ಈ ಚಿನ್ನದ ಕೊಳಗವು ಏಳು ಕೆಂಪು ಕಲ್ಲುಗಳು, ಬೆಳ್ಳಿಯ ಅರ್ಧ ಚಂದ್ರ ಮತ್ತು ಬೆಳ್ಳಿಯ ಒಂದು ತಿರುಪು ಹೊಂದಿದೆ.

#### ಮಲೆಮಹದೇಶ್ವರ ಬೆಟ್ಟದ ಕೊಳಗ

ಮಲೆ ಮಹದೇಶ್ವರ ಬೆಟ್ಟದ ದೇವಾಲಯದಲ್ಲಿರುವ ಚಿನ್ನದ ಕೊಳಗ ಸುಮಾರು 20 ಕೆಜಿ ತೂಕ ಹೊಂದಿದೆ. ಕೃಷ್ಣರಾಜ ಒಡೆಯರ್ ಈ ಸುವರ್ಣ ಕೊಳಗದ ಸೇವೆ ನೀಡಿದವರಾಗಿದ್ದು, ನೋಡಲು ಆಕರ್ಷಕವಾಗಿದೆ. ಈ ಕೊಳಗವು ಹಣೆಯಲ್ಲಿ ರತ್ನಖಚಿತವಾದ 176 ವಜ್ರಗಳು, 21 ರೂಬಿಗಳನ್ನು ವಿಭೂತಿ ಮಾದರಿಯಲ್ಲಿ ಮೂರು ಪಟ್ಟೆಯಲ್ಲಿ ಅಳವಡಿಸಲಾಗಿದೆ. ಗಂಗಾದೇವಿಗೆ ಒಂದು ರತ್ನದ ಮೂಗುತಿ, ಬುಲಾಕುವಿನ ಆಭರಣ, ಶಿರದ ಭಾಗದಲ್ಲಿ ಅರ್ಧಚಂದ್ರ, ಚಂದ್ರಾಕೃತಿಯು 110 ಫ್ಲಾಟ್ ವಜ್ರಗಳಿಂದ ಕೂಡಿದೆ. ಈ ರತ್ನ ಖಚಿತ ವಿಭೂತಿ ತಾಟಂಕಿ ಸರ್ಪಕುಂಡಲ ಗಂಗೆ ಅಲಂಕಾರದ 9 ನಗಗಳನ್ನು ಹೊಂದಿರುವ ಈ ನಾಗಾಭರಣ 1930ರಲ್ಲಿ ಮಲೆ ಮಹದೇಶ್ವರಸ್ವಾಮಿಗೆ ಒಪ್ಪಿಸಲಾಗಿದೆ. ಅಂದಿನಿಂದ ಪ್ರತಿದಿನ ಮುಂಜಾನೆ ಅಭಿಷೇಕ ಮುಗಿದ ಬಳಿಕ ಲಿಂಗಕ್ಕೆ ಧಾರಣೆ ಮಾಡಿ ಅಲಂಕಾರ ಮಾಡಲಾಗುತ್ತದೆ. ಮೈಸೂರಿನ ತ್ರಿನೇಶ್ವರಸ್ವಾಮಿ ದೇವಾಲಯದ ಲಿಂಗಕ್ಕೆ ಹೋಲಿಸಿದರೆ ಮಹದೇಶ್ವರರ ಲಿಂಗವು ಗಿಡ್ಡದ್ದಾಗಿದ್ದರೂ ಹೆಚ್ಚು ಅಗಲವಿದೆ. ಚಿನ್ನದ ಕೊಳಗ ಧರಿಸುವ ವಿಶೇಷ ಸೇವೆಯೂ ಭಕ್ತರು ಮಾಡಿಸಬಹುದಾಗಿದೆ. ಭಕ್ತರು 900 ರೂ. ಪಾವತಿಸಿ ಚಿನ್ನದ ಕೊಳಗದ ಧಾರಣೆ ಸೇವೆ ಮಾಡಿಸಬಹುದಾಗಿದೆ.

#### ನಂಜನಗೂಡು ದೇವಾಲಯ

ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೂ ರಾಜಮನೆತದವರು ಚಿನ್ನದ ಕೊಳಗ ಕೊಡುಗೆ ನೀಡಿದ್ದಾರೆ. ಇದು ಸುಮಾರು 2 ಅಡಿ ಎತ್ತರವಿದೆ. ಚಿಕ್ಕಜಾತ್ರೆ, ದೊಡ್ಡಜಾತ್ರೆ ಹಾಗೂ ಗಿರಿಜಾ ಕಲ್ಯಾಣದ ಸಂದರ್ಭದಲ್ಲಿ ಧಾರಣೆ ಮಾಡಿ, ಆಚರಿಸಲಾಗುತ್ತದೆ. ಉಳಿದ ದಿನಗಳಲ್ಲಿ ಸ್ಟ್ರಾಂಗ್ ರೂಮ್‌ನಲ್ಲಿ ಇರಿಸಲಾಗುತ್ತದೆ. ಈ ಕುರಿತು ದೇವಾಲಯದ ಆಗಮಿಕ ನಾಗಚಂದ್ರ ದೀಕ್ಷಿತ್ 'ಮೈಸೂರು ಮಿತ್ರ'ನ ಜೊತೆ ಮಾತನಾಡಿ, ಫೆ.18ರ ಮುಂಜಾನೆ 4.30ರಿಂದಲೇ ವಿವಿಧ ಪೂಜಾ ಕೈಂಕರ್ಯ ಜರುಗಲಿದೆ. ಸಂಜೆ 6 ಗಂಟೆಗೆ ಮೊದಲ ಜಾವ, ರಾತ್ರಿ 9ಕ್ಕೆ ಎರಡನೇ ಜಾವ, ಮಧ್ಯರಾತ್ರಿ 12ಕ್ಕೆ ಮೂರನೇ ಜಾವ, ಮುಂಜಾನೆ 3ಕ್ಕೆ ನಾಲ್ಕನೇ ಜಾವದಲ್ಲಿ ನಡೆಯುವ ಅಭಿಷೇಕ ಮಹತ್ವದ ಪಾತ್ರ ವಹಿಸಲಿದೆ. ಈ ವೇಳೆ ದರ್ಶನ ಪಡೆದರೆ ಒಳಿತಾಗಲಿದೆ ಎಂದರು.



ಮೈಸೂರು ಅರಮನೆ ಆವರಣದ ಶ್ರೀ ತ್ರಿನೇಶ್ವರಸ್ವಾಮಿ ದೇವಸ್ಥಾನ



ನಂಜನಗೂಗು ಶ್ರೀ ನಂಜುಂಡೇಶ್ವರ ಸ್ವಾಮಿ ದೇವಸ್ಥಾನ



ಮಹದೇಶ್ವರಬೆಟ್ಟದ ಶ್ರೀ ಮಲೆಮಹದೇಶ್ವರಸ್ವಾಮಿ ದೇವಸ್ಥಾನ

# ಸರ್ವಂ ಶಿವಮಯಂ

ಶಿವನು ತ್ರಿಮೂರ್ತಿಗಳಲ್ಲಿ ಒಬ್ಬನು.'ಶಿವ'ಪದದ ಅರ್ಥವೇ ಮಂಗಳ.ಶಿವನು ಶುಭಕರ,ಮಂಗಳಕರ ಎಂದು ವೇದಗಳು ವರ್ಣಿಸುತ್ತವೆ.ಅಂತೆಯೇ ಈತ ಲಯಕಾರಕ ಎಂದು ವೇದಪುರಾಣಗಳಲ್ಲಿ ವರ್ಣಿತಗೊಂಡಿದ್ದಾನೆ.ಇವನಿಗೆ ರುದ್ರ, ಪಶುಪತಿ, ವಾಮದೇವ, ವಿಷಕಂಠ, ಮಹೇಶ್ವರ, ಆದಿದೇವ ಮೊದಲಾದ ಹೆಸರುಗಳಿವೆ. ಶಿವನು ವಿಶ್ವ ವಂದ್ಯ.ಪ್ರಪಂಚದ ನಾನಾ ಭಾಗಗಳಲ್ಲಿ ಉತ್ಖನನ ವೇಳೆ ಶಿವಲಿಂಗಗಳು ಪತ್ತೆಯಾಗುತ್ತಲೇ ಇರುವುದು ಈ ಮಾತನ್ನು ಪುಷ್ಟೀಕರಿಸುತ್ತದೆ. ಶಿವರಾತ್ರಿಯು ಶಿವನನ್ನು ಆರಾಧಿಸುವ ವಿಶಿಷ್ಟ ವ್ರತವಾಗಿದೆ. ಬೇರೆ ವ್ರತಗಳನ್ನು ಬೆಳಗ್ಗೆ ಆಚರಿಸುವುದಾದರೆ ಶಿವರಾತ್ರಿಯಲ್ಲಿ ಹೆಸರೇ ಸೂಚಿಸುವಂತೆ ರಾತ್ರಿ ಜಾಗರಣೆ, ಪೂಜೆ ವಿಶೇಷವಾಗಿದೆ. 2023ರಲ್ಲಿ ಮಹಾ ಶಿವರಾತ್ರಿಯು ಫೆಬ್ರವರಿ18ರಂದು ಆಚರಿಸಲಾಗುತ್ತದೆ. ಇದು ಭಾರತದಾದ್ಯಂತ ಆಚರಿಸುವ ವಿಶೇಷ ವ್ರತವಾಗಿದೆ.

#### ಶಿವನ ಸ್ವರೂಪ

ವಾಸ್ತವವಾಗಿ ಶಿವನಿಗೆ ಮೂರ್ತಿಯಿಲ್ಲ.ಶಿವಲಿಂಗವು ಆತ್ಮನಲ್ಲಿ ಬೆಳಗುವ ಜ್ಯೋತಿ ಸ್ವರೂಪದಲ್ಲಿದೆ.ಸಿದ್ಧಿ ಹೊಂದಿದ ನಂತರ,ನಿರ್ಮಲ ಮನಸ್ಸಿನ ರೂಪದಲ್ಲಿ ಇರುವ ನಿರ್ಮಲತೆಯೇ ಸ್ಫಟಿಕ ಲಿಂಗ.ನಮ್ಮ ಶಿರಸ್ಸಿನಲ್ಲಿರುವ ಮೆದುಳಿನಲ್ಲಿ ನಾವು ಜ್ಞಾನ ಪಡೆಯಲು ಸಹಕರಿಸುವ ರುದ್ರನನ್ನೇ ಕಪಾಲಿ ಅನ್ನುತ್ತಾರೆ. ಮೆದುಳಿನಿಂದ ನರಗಳ ರೂಪದಲ್ಲಿ ಕತ್ತಿನ ಕೆಳಗಿನವರೆಗೂ ವ್ಯಾಪಿಸಿರುವ ನಾಡಿಗಳನ್ನು ರುದ್ರಜಡೆ ಎನ್ನುತ್ತಾರೆ.ಶಿವನ ಹಠಯೋಗಿ ರೂಪವನ್ನು ಲಕುಲೀಶ ಎನ್ನುತ್ತಾರೆ.ಶಿವನು ಭಿಕ್ಷಾಟನೆ ಮಾಡಿ ಜೀವಿಗಳ ಪಾಪ ಪರಿಹರಿಸುತ್ತಾನೆ. ಈ ಸೃಷ್ಟಿಯಲ್ಲಿ ರಾಗ, ತಾಳಬದ್ಧವಾದ ಸೃಷ್ಟಿ, ಸ್ಥಿತಿ ಲಯಗಳ ಮಹಾಸ್ಪಂದನಗಳಿಗನುಸಾರವಾಗಿ ಆನಂದ ತಾಂಡವ ಮಾಡುತ್ತಾನಾದ್ದರಿಂದ ಶಿವನಿಗೆ ನಟರಾಜ ಎಂದು ಕರೆಯುತ್ತಾರೆ. ಶಿವನು ಪರಮಾನಂದದಾಯಕವಾದ ಮೋಕ್ಷಸಿದ್ಧಿಯನ್ನು ಕೊಡಬಲ್ಲನು.'ಚಿತ್'ಎಂದರೆ ಮನಸ್ಸು. ಅಂಬರವೆಂದರೆ ಆಕಾಶ. ಆಕಾಶ ರೂಪದಲ್ಲಿರುವವನೇ ಚಿದಂಬರ.ನಾವು ನೋಡುವ ಈ ವಿಶಾಲ ವಿಶ್ವದಲ್ಲಿನ ಆಕಾಶ ಸ್ವರೂಪವು ರುದ್ರಸ್ವರೂಪವೇ.ದ್ವಾದಶ ಜ್ಯೋತಿರ್ಲಿಂಗಗಳು ರಾಶಿ ಚಕ್ರದಲ್ಲಿನ ಹನ್ನೆರಡು ರಾಶಿಗಳಿಗೆ ಪ್ರತೀಕ. ಆದ್ದರಿಂದ ಶಿವನು ಕಾಲಸ್ವರೂಪನು. ಅಷ್ಟ ದಿಕ್ಕುಗಳು ಆ ಅಷ್ಟ ಮೂರ್ತಿಯ ಚಿದಾಕಾಶ ರೂಪ. ಪಂಚಭೂತಗಳು ಆತನ ಪಂಚಮುಖಗಳು. ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಮನಸ್ಸು ಸೇರಿ ಏಕಾದಶ ರುದ್ರ ಕಲೆಗಳಾಗುತ್ತವೆ. ಇದನ್ನೇ ಏಕಾದಶ ರುದ್ರರೆನ್ನುತ್ತಾರೆ. ಉಮಾ ಮಹೇಶ್ವರ ರೂಪ ನಿತ್ಯಾನಂದ ರೂಪ.ತ್ರಿಗುಣಗಳನ್ನು ಭಸ್ಮ ಮಾಡಿದ ರೂಪವೇ ತ್ರಿಪುರಾಂತಕ ರೂಪ.ಜ್ಞಾನ ನೇತ್ರವೇ ಮೂರನೆಯ ಕಣ್ಣು. ಸಮಾಧಿ ಸ್ಥಿತಿಯಲ್ಲಿ ಪ್ರಸನ್ನವಾದ ಧ್ಯಾನದಲ್ಲಿರುವಾಗ ನಿರಂತರವಾಗಿ ಪ್ರವಹಿಸುವ ಪವಿತ್ರತೆಯೇ ಶಿವಜಟಾಜೂಟದಲ್ಲಿರುವ ಪರಮಪಾವನಿ ಗಂಗೆ. ಭ್ರೂಮಧ್ಯದಲ್ಲಿ ಬೆಳಗುವ ಜ್ಯೋತಿಯೇ ಚಂದ್ರ ಕಳೆ.ಆದಿ ದಂಪತಿಗಳಾದ ಶಿವಪಾರ್ವತಿಯರ ಸ್ವರೂಪ ಮಿಥುನ ರಾಶಿ.ಆರ್ದ್ರಾ ನಕ್ಷತ್ರವು ಆಕಾಶದಲ್ಲಿ ಬೆಳಗುವಾಗ ಶಿವನ ದರ್ಶನ ವಿಶೇಷ.ಮಿಥುನ ರಾಶಿ ಸೇರುವ ಮುನ್ನ ವೃಷಭ ರಾಶಿ ದಾಟಬೇಕು.ಆ ವೃಷಭವೇ ನಂದೀಶ್ವರ.ಇವನು ಧರ್ಮಸ್ವರೂಪ.ಯೋಗಸ್ಥಿತಿಯಿಂದ ಉಂಟಾಗುವ ಕಾಮಜಯದಿಂದ ಸ್ತ್ರೀ ಪುರುಷ ಭೇದವು ನಾಶವಾಗಿ ಏಕತ್ವ ಸ್ಥಿತಿ ಹೊಂದುವುದೇ ಅರ್ಧನಾರೀಶ್ವರ ರೂಪವು.

#### ಶಿವರಾತ್ರಿಯ ಆಚರಣೆ

ಶಿವರಾತ್ರಿಯಂದು ಪ್ರಾತಃಕಾಲದಲ್ಲಿ ಶುಚಿರ್ಭೂತರಾಗಿ ಶಿವಪೂಜೆ ಮಾಡಬೇಕು.ಅಂದು ಉಪವಾಸ ಕೈಗೊಂಡು 'ಓಂ ನಮಃ ಶಿವಾಯ' ಎಂಬ ಶಿವನ ಪಂಚಾಕ್ಷರಿ ಮಂತ್ರ, ಮೃತ್ಯುಂಜಯ ಮಂತ್ರ,ಶಿವ ಸಹಸ್ರನಾಮ, ಅಷ್ಟೋತ್ತರ,ರುದ್ರ ಚಮಕ ಮೊದಲಾದವುಗಳ ಪಠಣ ಪಾರಾಯಣ ಮಾಡುವುದು ಶುಭಕರ.ಕಠಿಣ ಉಪವಾಸ ಮಾಡಲು ಸಾಧ್ಯವಾಗದವರು ಫಲ,ಕ್ಷೀರ,ಹಣ್ಣಿನ ರಸ ಸೇವಿಸಿ ವ್ರತ ಆಚರಿಸಬಹುದು. ರಾತ್ರಿ ಜಾಗರಣೆ ಮಾಡಿ ಶಿವನ ಭಜನೆ, ಸಂಕೀರ್ತನೆ, ಸ್ತೋತ್ರ ಪಾರಾಯಣ ಮಾಡಬೇಕು.

ಶಿವನಿಗೆ ಬಿಲ್ವಪತ್ರೆ ಮತ್ತು ತುಂಬೆ ಹೂ ಬಹುಪ್ರಿಯ. ಹಾಗಾಗಿ ಅವುಗಳಿಂದ ಈಶ್ವರನನ್ನು ಅರ್ಚಿಸಲಾಗುತ್ತದೆ. ಪೂಜಾ ಸಮಯದಲ್ಲಿ ರುದ್ರಾಕ್ಷಿ ಧರಿಸಿ ಆರಾಧಿಸುವುದರಿಂದ ಮತ್ತೂ ಹೆಚ್ಚಿನ ಫಲ ಸಿಗುತ್ತದೆಂದು ನಂಬಲಾಗಿದೆ.ವಿಷ್ಣು ಅಲಂಕಾರ ಪ್ರಿಯನಾದರೆ ಶಿವ ಅಭಿಷೇಕ ಪ್ರಿಯ. ಹಾಗಾಗಿ ಶಿವಲಿಂಗಕ್ಕೆ ಶುದ್ಧ ನೀರು, ಹಾಲಿನಿಂದ ಅಭಿಷೇಕ ಮಾಡುವುದು ಶ್ರೇಯಸ್ಕರ.ಅಂದು ಜನರು ದೇವಾಲಯಗಳಿಗೆ ತೆರಳಿ ಶಿವನ ದರ್ಶನ ಪಡೆದು ಪುನೀತರಾಗುತ್ತಾರೆ.ಅನೇಕ ಶೈವ ಧಾರ್ಮಿಕ ಕ್ಷೇತ್ರಗಳಲ್ಲಿ ರಾತ್ರಿ ಜಾಗರಣೆಗಾಗಿ ಶಿವನ ಮಹಿಮೆ ಸಾರುವ ನಾಟಕ,ಹರಿಕಥೆ,ಭಕ್ತಿಗೀತೆಗಳ ರಸ ಸಂಜೆ,ಮತ್ತಿತರ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವುದೂ ಉಂಟು. ದೇವಾಲಯಗಳಲ್ಲಿ ವಿಶೇಷ ಪೂಜೆ, ಹೋಮ ,ಹರಿಕಥೆ, ಗಿರಿಜಾ ಕಲ್ಯಾಣ ಮಹೋತ್ಸವ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.



#### ಶಿವರಾತ್ರಿಯ ಮಹತ್ವ


ಶಿವರಾತ್ರಿ ಶಿವನಿಗೆ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯ ದಿನ ತನ್ನನ್ನು ಆರಾಧಿಸುವವರಿಗೆ ವಿಶೇಷ ಅನುಗ್ರಹ ಮಾಡುವುದಾಗಿ ಸ್ವತಃ ಶಿವನು ಪಾರ್ವತಿಗೆ ಶಿವ ಪುರಾಣದಲ್ಲಿ ಹೇಳಿದ್ದಾನೆ. ಇಂದು ಶಿವನಿಗೆ ಬಿಲ್ವಪತ್ರೆಯಿಂದ ಪೂಜಿಸಿದರೆ ಯಾಗ ಮಾಡಿದ ಪುಣ್ಯ ಬರುವುದೆಂದು ನಂಬಲಾಗಿದೆ. ಶಿವನು ಈ ಪುಣ್ಯದಿನದಂದು ಗಿರಿಜೆಯನ್ನು ವರಿಸಿದನೆಂದು ಹೇಳಲಾಗುತ್ತದೆ. ಅಲ್ಲದೆ ಅಮೃತ ಪಡೆಯಲು ದೇವ ದಾನವರು ಸಮುದ್ರ ಮಂಥನ ಮಾಡಿದಾಗ ಹಾಲಾಹಲ ಉದ್ಭವಿಸುತ್ತದೆ.ಇದರಿಂದ ಉಂಟಾಗುವ ವಿಪತ್ತನ್ನು ಮನಗಂಡ ಶಿವನು ಲೋಕವನುಳಿಸಲು ಈ ವಿಷವನ್ನು ಕುಡಿಯುತ್ತಾನೆ.ಇದನ್ನು ಕಂಡ ಪಾರ್ವತಿ ವಿಷ ಗಂಟಲಿನಿಂದ ಕೆಳಗೆ ಇಳಿಯದಂತೆ ಶಿವನ ಕೊರಳನ್ನು ಹಿಡಿದು ತಡೆದಳೆಂದು ಶಿವಪುರಾಣದ ಮಹಿಮೆ ತಿಳಿಸುತ್ತದೆ. ಭಗೀರಥನ ತಪಸ್ಸಿಗೆ ಮೆಚ್ಚಿ ಭೂಮಿಗೆ ಬಂದ ಗಂಗೆಯನ್ನು ಶಿವನು ತನ್ನ ಜಟೆಯಲ್ಲಿ ಬಂಧಿಸಿದ. ಅನಂತರ ಭಗೀರಥನ ಪ್ರಾರ್ಥನೆಗೆ ಓಗೊಟ್ಟು ಶಿವನು ಇದೇ ಪುಣ್ಯದಿನದಂದು ಗಂಗೆಯನ್ನು ಇಳೆಗೆ ಹರಿಸಿದನೆಂದು ಪುರಾಣಗಳು ಹೇಳುತ್ತವೆ.ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ಬ್ರಹ್ಮ ಮತ್ತು ವಿಷ್ಣುವಿಗೆ ಶಿವನು ಲಿಂಗರೂಪಿಯಾಗಿ, ಅಖಂಡ ಜ್ಯೋತಿ ಸ್ವರೂಪನಾಗಿ ದರ್ಶನ ನೀಡಿದ ಪರಮ ಪುಣ್ಯದಿನವೂ ಇಂದೇ ಎಂದು ಹೇಳಲಾಗುತ್ತದೆ.ಮಾಘ ಬಹುಳ ಚತುರ್ದಶಿಯ ರಾತ್ರಿಯೇ ಶಿವನು ಪಾರ್ವತಿಯನು ವಿವಾಹವಾದನು. ಇವರ ವಿವಾಹಕ್ಕೆ ಬಂದ ದೇವತೆಗಳು ರಾತ್ರಿ ಜಾಗರಣೆ ಮಾಡಿ ಗಿರಿಜಾ ಕಲ್ಯಾಣ ಕಣ್ತುಂಬಿಸಿಕೊಂಡು,ಶಿವ ಪಾರ್ವತಿಯನ್ನು ಪೂಜಿಸಿದರೆಂದು, ಅಂದಿನಿಂದಲೇ ಜಾಗರಣೆ ಪದ್ಧತಿ ಜಾರಿಗೆ ಬಂದಿತೆಂದು ಹೇಳಲಾಗುತ್ತದೆ. ಈ ದಿನದಂದು ಶಿವ ಪಾರ್ವತಿಯರು ಭೂಲೋಕ ಸಂಚಾರ ಕೈಗೊಂಡು ಎಲ್ಲಾ ಲಿಂಗಗಳಲ್ಲಿ ಸನ್ನಿಹಿತಗೊಳ್ಳುವರೆಂದು ಪುರಾಣಗಳು ಉಲ್ಲೇಖಿಸಿವೆ. ಆದ್ದರಿಂದ ಇಂದು ಶಿವನನ್ನು ಭಕ್ತಿಯಿಂದ ಪೂಜಿಸಿದರೆ ಪಾಪಗಳೆಲ್ಲ ಪರಿಹಾರವಾಗಿ ಐಹಿಕ ಸುಖಗಳು ಪ್ರಾಪ್ತವಾಗುವುದರ ಜೊತೆಗೆ ಶಿವಸಾಯುಜ್ಯವೂ ದೊರೆಯುವುದೆಂದು ಪ್ರತೀತಿ ಇದೆ. ಈ ರಾತ್ರಿ ಶಿವನ ಪೂಜೆಗೆ ಅತ್ಯಂತ ಪ್ರಶಸ್ತವಾಗಿದ್ದು, ಮೋಡಗಳಿಲ್ಲದ ಶುಭ್ರ ವಾತಾವರಣದಲ್ಲಿ ಶಿವ ತತ್ತ್ವ ಹೆಚ್ಚು ಆಕರ್ಷಿತವಾಗುವಂತಿದ್ದು ಶಿವನ ಆರಾಧನೆ ಮಾಡಿದರೆ ಸಂಚಿತ ಪಾಪ ನಶಿಸಿ ಮೋಕ್ಷ ಪ್ರಾಪ್ತವಾಗುವುದೆಂದು ಸ್ಕಂದ ಪುರಾಣದಲ್ಲಿ ಹೇಳಲಾಗಿದೆ. ಶಿವರಾತ್ರಿಗೆ ಸಂಬಂಧಿಸಿದ ಮತ್ತೊಂದು ಕಥೆ ಎಂದರೆ,ಬೇಡನೊಬ್ಬ ಆಹಾರಕ್ಕಾಗಿ ಬೇಟೆಯಾಡಲು ಕಾಡಿಗೆ ಬರುತ್ತಾನೆ.ಆದರೆ ಅವನಿಗೆ ಬೇಟೆಯಾಡಲು ಯಾವ ಪ್ರಾಣಿಯೂ ಸಿಗುವುದಿಲ್ಲ. ಅಷ್ಟು ಹೊತ್ತಿಗೆ ಕತ್ತಲು ಕವಿಯಲಾರಂಭಿಸುತ್ತದೆ. ಬೇರೆ ದಾರಿ ಕಾಣದ ಬೇಡ ಮರಹತ್ತಿ ಕುಳಿತುಕೊಳ್ಳುತ್ತಾನೆ. ಹಸಿವಿನಿಂದ ರಾತ್ರಿ ನಿದ್ರೆ ಬಾರದಾದ ಬೇಡ ತಾನು ಕುಳಿತಿದ್ದ ಮರದ ಎಲೆಗಳನ್ನು ಕಿತ್ತು ಕೆಳಗೆ ಹಾಕಲಾರಂಭಿಸುತ್ತಾನೆ. ಅವನ ಪೂರ್ವ ಜನ್ಮದ ಸುಕೃತವೋ ಎಂಬಂತೆ ಅವನಿಗೇ ಅರಿವಿಲ್ಲದಂತೆ ಅವನೇರಿದ್ದು ಬಿಲ್ವ ವೃಕ್ಷವಾಗಿರುತ್ತದೆ ಹಾಗೂ ಅವನು ಹಾಕಿದ ಬಿಲ್ವದಳಗಳು ಕೆಳಗಿದ್ದ ಶಿವಲಿಂಗಕ್ಕೆ ಬಿದ್ದಿರುತ್ತವೆ.ಈ ಪುಣ್ಯಫಲದಿಂದ ಆ ಬೇಡ ಮುಂದಿನ ಜನ್ಮದಲ್ಲಿ ಚಿತ್ರಭಾನು ಎಂಬ ರಾಜನಾಗಿ ಜನಿಸಿ ಇಹಪರಗಳಲ್ಲಿ ಸೌಖ್ಯ ಸಾಧಿಸುತ್ತಾನೆ. ಮಹಾಭಾರತದಲ್ಲಿ ಬರುವ ಈ ಕಥೆಯನ್ನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ಹೇಳಿದರೆಂದು ಪ್ರತೀತಿ.

#### ಶಿವರಾತ್ರಿ ವ್ರತದ ಹಿಂದಿನ ವೈಜ್ಞಾನಿಕ ರಹಸ್ಯ

ಶಿವರಾತ್ರಿ ವ್ರತದ ಹಿಂದೆ ಅನೇಕ ಮಹತ್ವದ ವೈಜ್ಞಾನಿಕ ರಹಸ್ಯಗಳೂ ಇವೆ. ನಮಗೆಲ್ಲ ತಿಳಿದಿರುವಂತೆ ಭೂಮಿಯ ಚಲನೆಯಿಂದ ಕಾಲಮಾನ ಬದಲಾಗುತ್ತಿರುತ್ತದೆ. ಅದರಂತೆ ಈ ಬದಲಾವಣೆ ಪಂಚಭೂತಾತ್ಮಕವಾದ ಶರೀರದ ಮೇಲೂ ಪರಿಣಾಮ ಬೀರುತ್ತದೆ. ಶಿವರಾತ್ರಿಯ ಸಮಯದಲ್ಲಿ ವಾತಾ ವರಣದಲ್ಲಿ ಬದಲಾವಣೆಗಳಾಗುತ್ತವೆ. ಶಿಶಿರ ಋತು ಮಾಘ ಮಾಸದ ಕೃಷ್ಣ ಪಕ್ಷದ ತ್ರಯೋದಶಿ ಮತ್ತು ಚತುರ್ದಶಿಗಳ ಮಿಲನದ ನಂತರ ಋತುವಿನಲ್ಲಿ ನಿಧಾನವಾಗಿ ಬದಲಾವಣೆ ಆರಂಭವಾ ಗುತ್ತದೆ. ಚಳಿಗಾಲ ಮುಗಿದು ಬೇಸಿಗೆ ಆರಂಭವಾಗುತ್ತದೆ. ಕಾಲ ಬದಲಾವಣೆಯ ಈ ಹಂತದಲ್ಲಿ ವಾತಾ ವರಣ ದಲ್ಲಿ ಸೂರ್ಯನ ಶಾಖ ಹದಗೊಂಡು, ಚಂದ್ರನ ಪ್ರಕಾಶ ಕ್ಷೀಣವಾಗುತ್ತದೆ.ನಮ್ಮ ಶರೀರದ ಮೇಲೂ ಇದರ ಪರಿಣಾಮವಾಗುತ್ತದೆ. ಉಸಿರಾಟದ ತೊಂದರೆಗಳು, ನೆಗಡಿ, ಶೀತ ಕೆಮ್ಮು ಮೊದಲಾದ ತೊಂದರೆಗಳು ಬಾಧಿಸಬಹುದು. ಇಂತಹ ತೊಂದರೆಗಳಿಂದ ನಮ್ಮನ್ನು ನಾವು ನೈಸರ್ಗಿಕವಾಗಿ ಕಾಪಾಡಿಕೊಳ್ಳಲು ನಮ್ಮ ಪೂರ್ವಜರು ಉಪವಾಸ, ಜಾಗರಣೆ, ಪೂಜೆಯಂತಹ ಆಚರಣೆಗಳನ್ನು ಜಾರಿಗೆ ತಂದರು. ಈ ಸಮಯದಲ್ಲಿ ಆಹಾರ ಸೇವನೆಯ ಮೇಲೆ ಹಿಡಿತ ಹೊಂದುವುದು ಅವಶ್ಯಕ. ನಿರ್ಜಲ ಉಪವಾಸ ಸಾಧ್ಯವಾಗದಿದ್ದರೆ ಸುಲಭವಾಗಿ ಜೀರ್ಣವಾಗುವ ಲಘು ಆಹಾರ ಸೇವನೆ ಉತ್ತಮ. ಬೇಯಿಸದ,ಹಸಿಯಾಗಿ ತಿನ್ನ ಬಹುದಾದ ಫಲ,ಸಾತ್ವಿಕ ಆಹಾರ ಆರೋಗ್ಯಕ್ಕೆ ಪ್ರಯೋಜನಕಾರಿ. ಆದ್ದರಿಂದಲೇ ಶಿವರಾತ್ರಿಯಂದು ಉಪವಾಸದ ಆಚರಣೆ. ಚಳಿಯಿಂದ ಬೇಸಗೆಗೆ ಪಲ್ಲಟಗೊಳ್ಳುವ ಈ ಕಾಲದಲ್ಲಿ ಉಪವಾಸ ಅಥವಾ ಲಘು ಆಹಾರ ಸೇವನೆ ಜೀರ್ಣಕ್ರಿಯೆ ಹೆಚ್ಚಿಸುತ್ತದೆ. ಇನ್ನು ಶಿವನನ್ನು ಪೂಜಿಸಲು ಬಳಸಲಾಗುವ ಬಿಲ್ವ ಪತ್ರೆಯ ಮೇಲಿನಿಂದ ಬೀಸುವಂತಹ ಗಾಳಿಗೆ ಉಸಿರಾಟದ ತೊಂದರೆಗಳನ್ನು ನಿವಾರಿಸುವ ಶಕ್ತಿ ಇದೆ.

ನಮ್ಮ ಪುರಾತನ ದೇವಾಲಯಗಳನ್ನು ವಾಸ್ತುಬದ್ಧವಾಗಿ ಕಟ್ಟಲಾಗಿರುತ್ತದೆ. ಇಂತಹ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಗುರುತ್ವಾಕರ್ಷಣ ಶಕ್ತಿ ಇದ್ದು, ಇದನ್ನು ಶಿವ ಶಕ್ತಿ ಎನ್ನಲಾಗುತ್ತದೆ. ಇಂತಹ ದೇವಾಲಯಗಳಲ್ಲಿ ವಿಶಿಷ್ಟ ಕಲ್ಲಿನಿಂದ ಮಾಡಿದ ಶಿವಲಿಂಗದ ಮೇಲೆ ರುದ್ರ ಮತ್ತು ಚಮಕಗಳನ್ನು ಪಠಣಮಾಡುತ್ತಾ ಅಭಿಷೇಕ ಮಾಡುವುದರಿಂದ ಅಲ್ಲಿ ಹೆಚ್ಚಿನ ಶಕ್ತಿ ಸಂಚಯ ವಾಗಿರುತ್ತದೆ. ಇದು ನಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.ಈ ಮಂತ್ರ, ಶ್ಲೋಕ ಪಠಣೆಯಿಂದ ಹೊರಡುವ ಸ್ವರದಿಂದ ಸೃಷ್ಟಿಯಾಗುವ ತರಂಗಗಳಿಂದ ಸುತ್ತಮುತ್ತಲಿನ ಪರಿಸರ ಶುದ್ಧವಾಗುತ್ತದೆ.

ಆಧ್ಯಾತ್ಮಿಕವಾಗಿ ಮತ್ತು ತತ್ತ್ವಶಾಸ್ತ್ರದ ದೃಷ್ಟಿಯಿಂದ ಬಿಲ್ವದ ಎಲೆ ಹೃದಯದಾಕಾರದಲ್ಲಿರುತ್ತದೆ ಮತ್ತು ಲಿಂಗ ಪರಮಾತ್ಮನ ಪ್ರತೀಕ.ಆದ್ದರಿಂದ ಇವೆರಡರ ಜೋಡಣೆ ಆತ್ಮ ಪರಮಾತ್ಮಗಳ ಮಿಲನವನ್ನು ಸಂಕೇತಿಸುತ್ತದೆ.ರಾತ್ರಿ ಅಜ್ಞಾನದ ಸಂಕೇತವಾಗಿದ್ದು ಅಂದು ಜಾಗರಣೆಯಿದ್ದು ಎಚ್ಚರವಾಗಿರುವುದೆಂದರೆ, ತಿಳುವಳಿಕೆಯ ಕಡೆಗೆ ಪಯಣ ಅಂದರೆ ಮೋಕ್ಷದ ಕಡೆಗೆ ಪಯಣ ಎಂದರ್ಥ. ಜಾಗರಣೆ ನಮ್ಮ ಮನೋಬಲವನ್ನು ಹೆಚ್ಚಿಸುತ್ತದೆ. ಅರ್ಥಾತ್ ತಮೋ ಗುಣದಿಂದ ಜಾಗೃತಿಯೇ ಜಾಗರಣೆಯ ಸಂಕೇತವಾಗಿದೆ. ಅಜ್ಞಾನ,ಆಲಸ್ಯಗಳಿಂದ ಬಿಡುಗಡೆಯೇ ಜಾಗರಣೆ. ಒಟ್ಟಾರೆಯಾಗಿ ಶಿವರಾತ್ರಿಯಂದು ಆಚರಿಸುವ ಆಚರಣೆಗಳು ಮೌಢ್ಯವಾಗಿ ರದೆ ಅದರ ಹಿಂದೆ ವೈಜ್ಞಾನಿಕ ಮಹತ್ವವೂ ಅಡಕಗೊಂಡಿದೆ. ಇವು ನಮ್ಮ ಮಾನಸಿಕ ದೈಹಿಕ ಆರೋಗ್ಯಕ್ಕೆ ಸಹಕಾರಿಯಾಗಿರುವುದಲ್ಲದೆ ಆಧ್ಯಾತ್ಮಿಕ ಪ್ರಗತಿಗೂ ನೆರವಾಗುತ್ತವೆ. ವೈಜ್ಞಾನಿಕ ಸತ್ಯಗಳಿಗೆ ಭಕ್ತಿಭಾವ, ಆಚರಣೆಗಳ ಲೇಪ ಹಚ್ಚಿ ಅದನ್ನು ಸವಿ ಹೂರಣವಾಗಿಸುವುದು ನಮ್ಮ ಭಾರತೀಯ ಸಂಸ್ಕೃತಿ ಪರಂಪರೆಗಳ ಜಾಣ್ಮೆ, ಹಿರಿಮೆಯೇ ಹೌದು.



■ ಎಸ್.ಎಲ್.ವರಲಕ್ಷ್ಮೀಮಂಜುನಾಥ್ ಮೊ.9945653784.